

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 23 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 276 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಘೋಷಣೆ | ಕಿಚ್ಚ ಸುದೀಪ್ ಅತ್ಯುತ್ತಮ ನಟ, ಅನುಪಮಾಗೌಡ ಅತ್ಯುತ್ತಮ ನಟಿ

'ಮೋಹನದಾಸ' ಅತ್ಯುತ್ತಮ ಚಿತ್ರ; ದರ್ಶನ್ 'ಯಜಮಾನ'ನಿಗೂ ಪ್ರಶಸ್ತಿ

ಬೆಂಗಳೂರು, ಜ.22– 2019ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಘೋಷಣೆಯಾಗಿದೆ. ಅತ್ಯುತ್ತಮ ನಟ ಪ್ರಶಸ್ತಿಯನ್ನು ನಟ ಕಿಚ್ಚ ಸುದೀಪ್ ಅವರು ತಮ್ಮ 'ಪೈಲ್ವಾನ್' ಚಿತ್ರಕ್ಕಾಗಿ ಪಡೆದುಕೊಂಡಿದ್ದಾರೆ. ಅಚ್ಚರಿ ಎಂಬಂತೆ ನಟಕಿಚ್ಚ ಸುದೀಪ್ ಅಭಿನಯದ 'ಮ್ಯಾಕ್ಸ್' ಚಿತ್ರ ಸೂಪರ್ ಹಿಟ್ ಆದ ಸಮಯದಲ್ಲೇ ನಟ ಸುದೀಪ್ ಅವರಿಗೆ ಮತ್ತೊಂದು ಸಂತಸದ ಸುದ್ದಿ ಸಿಕ್ಕಿದೆ. ನಟ ದರ್ಶನ್ ನಾಯಕತ್ವದ 'ಯಜಮಾನ' ಚಿತ್ರಕ್ಕೆ ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿ ಪಡೆದಿದ್ದಾರೆ. ಇದರ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ.

ಪ್ರಶಸ್ತಿ ಪಡೆದವರ ಪಟ್ಟಿ: ಅತ್ಯುತ್ತಮ ಚಿತ್ರ ಪಿ. ಶೇಷಾದ್ರಿ ನಿರ್ದೇಶನದ 'ಮೋಹನ ದಾಸ', ದ್ವಿತೀಯ ಅತ್ಯುತ್ತಮ ಚಿತ್ರ : ಡಾರ್ಲಿಂಗ್ ಕೃಷ್ಣ ನಿರ್ದೇಶನದ 'ಲವ್ ಮಾಕ್‌ಟೈಲ್', ತೃತಿಯ ಅತ್ಯುತ್ತಮ ಚಿತ್ರ: ವೈ ಶ್ರೀನಿವಾಸ್ ನಿರ್ದೇಶನದ 'ಅರ್ಘ್ಯಂ'


ಕಿಚ್ಚ ಸುದೀಪ್

ಅತ್ಯುತ್ತಮ ನಟ ಪ್ರಶಸ್ತಿ: ಪೈಲ್ವಾನ್ ಚಿತ್ರಕ್ಕಾಗಿ ನಟ ಕಿಚ್ಚ ಸುದೀಪ್, ಅತ್ಯುತ್ತಮ ನಟಿ: ತ್ರಯಂಬಕಂ ಚಿತ್ರಕ್ಕಾಗಿ ಅನುಪಮಾ ಗೌಡ, ಅತ್ಯುತ್ತಮ ಪೋಷಕ ನಟ: ತಬಲಾ ನಾಣಿ (ಕಮೆಸ್ಟ್ರಿ ಆಫ್ ಕರಿಯಪ್ಪ), ಅತ್ಯುತ್ತಮ ಪೋಷಕ ನಟಿ:, ಅನುಷಾ ಕೃಷ್ಣ (ಬ್ರಾಹ್ಮಿ).

2019ರ ಅತ್ಯುತ್ತಮ ನಟ ಪ್ರಶಸ್ತಿಯನ್ನು ನಟ ಕಿಚ್ಚ ಸುದೀಪ್ ಅವರು ತಮ್ಮ ಪೈಲ್ವಾನ್ ಚಿತ್ರಕ್ಕಾಗಿ ಪಡೆದುಕೊಂಡಿದ್ದಾರೆ. ಅಚ್ಚರಿ ಎಂಬಂತೆ, ನಟಕಿಚ್ಚ ಸುದೀಪ್ ಅಭಿನಯದ 'ಮ್ಯಾಕ್ಸ್' ಚಿತ್ರ ಸೂಪರ್ ಹಿಟ್ ಆದ ಸಮಯದಲ್ಲೇ ನಟ ಸುದೀಪ್ ಅವರಿಗೆ ಮತ್ತೊಂದು ಸಂತಸದ ಸುದ್ದಿ ಸಿಕ್ಕಿದೆ.

ತ್ರಯಂಬಕಂ ಸಿನಿಮಾಗಾಗಿ ನಟಿ ಅನುಪಮಾ ಗೌಡ ಅವರು 2019ರ ಸಾಲಿನ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.


ಅನುಪಮಾಗೌಡ

ತಮ್ಮ ಮನಮುಟ್ಟುವ ನಿರೂಪಣೆಯಿಂದ ಕರುನಾಡಿನಲ್ಲಿ ತಮ್ಮದೇ ಆದ ಒಂದು ವಿಶೇಷ ಸ್ಥಾನ ಪಡೆದುಕೊಂಡಿದ್ದಾರೆ ನಟಿ ಹಾಗೂ ನಿರೂಪಕಿ ಅನುಪಮಾ ಗೌಡ. ಇದೀಗ ಸಿನಿಮಾ ನಟನೆಗಾಗಿ ಅವಾರ್ಡ್ ಪಡೆದಿದ್ದು, ತಾವು ನಟಿಸಿದ ಕೆಲವೇ ಸಿನಿಮಾಗಳಲ್ಲಿ ಒಂದಾಗಿರುವ 'ತ್ರಯಂಬಕಂ' ಅವರ ಕೈ ಹಿಡಿದಿದೆ.

ಇನ್ನು ಪ್ರಶಸ್ತಿ ಪಡೆದವರಲ್ಲಿ ಬಹಳಷ್ಟು ಖ್ಯಾತನಾಮರು ಇದ್ದಾರೆ. ನಿರ್ದೇಶಕರಾದ ಪಿ. ಶೇಷಾದ್ರಿ, ಡಾರ್ಲಿಂಗ್ ಕೃಷ್ಣ ಹಾಗೂ ನಟ ತಬಲಾ ನಾಣಿ ಈ ಲಿಸ್ಟ್‌ನಲ್ಲಿ ಸೇರಿದ್ದಾರೆ. ಒಟ್ಟಿನಲ್ಲಿ, ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿದ್ದರಲ್ಲಿ ಅಂತೂ ಇಂತೂ ಒಂದು ವರ್ಷದ ಪ್ರಶಸ್ತಿ ಸಿಕ್ಕಂತಾಗಿದೆ. ಮಿಕ್ಕ 5 ವಾರ್ಷಿಕ ಪ್ರಶಸ್ತಿಗಳಿಗಾಗಿ ಚಿತ್ರರಂಗ ಕಾದು ಕುಳಿತಿದೆ ಎನ್ನಬಹುದು.



"ಲವ್ ಮಾಕ್‌ಟೈಲ್" ಚಿತ್ರ

ರಾಷ್ಟ್ರೀಯ ಆರೋಗ್ಯ ಮಿಷನ್ 5 ವರ್ಷ ವಿಸ್ತರಣೆ

● ಮೋದಿ ಸಂಪುಟ ನಿರ್ಧಾರ ● ದೇಶದಲ್ಲಿ ಈ ಯೋಜನೆಯಡಿ ಎಲ್ಲರಿಗೂ ಗುಣಮಟ್ಟದ ಆರೋಗ್ಯ ಸೇವೆ

ನವದೆಹಲಿ: ಮೋದಿ ನೇತೃತ್ವದ ಸಚಿವ ಸಂಪುಟದ ಸಭೆಯಲ್ಲಿ ರಾಷ್ಟ್ರೀಯ ಆರೋಗ್ಯ ಮಿಷನ್(ಎನ್‌ಎಚ್‌ಎಂ) ಅನ್ನು ಮುಂದಿನ 5 ವರ್ಷಗಳಿಗೆ ವಿಸ್ತರಿಸಲು ನಿರ್ಧರಿಸಲಾಗಿದೆ.



ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು, ಕೇಂದ್ರ ಸಚಿವ ಸಂಪುಟವು ರಾಷ್ಟ್ರೀಯ ಆರೋಗ್ಯ ಮಿಷನ್ ಅನ್ನು ಇನ್ನೂ 5 ವರ್ಷಗಳವರೆಗೆ ವಿಸ್ತರಿಸಲು ನಿರ್ಧರಿಸಿದೆ ಎಂದು ಹೇಳಿದರು.

ಎನ್‌ಎಚ್‌ಎಂಗೆ 5 ವರ್ಷಗಳ ವಿಸ್ತರಣೆಯನ್ನು ಘೋಷಿಸಲಾಗಿದ್ದು, ಈ ಯೋಜನೆಗೆ ಯಾವುದೇ ಬಜೆಟ್ ನಿರ್ಬಂಧಗಳಿಲ್ಲ ಎಂದು ಕೇಂದ್ರ ಸರ್ಕಾರ ಖಚಿತಪಡಿಸುತ್ತದೆ ಎಂದು ಗೋಯಲ್ ಹೇಳಿದರು. ಮುಂಬರುವ ಬಜೆಟ್ ಸಾರ್ವತ್ರಿಕ ಆರೋಗ್ಯ ಸೇವೆಯ ಬಗ್ಗೆ ಕೇಂದ್ರದ ಬದ್ಧತೆಯನ್ನು ತೋರಿಸುತ್ತದೆ ಎಂದು ವಾಣಿಜ್ಯ ಸಚಿವ ಗೋಯಲ್ ಸುಳಿವು ನೀಡಿದರು. ಫೆಬ್ರವರಿ 1ರಂದು ಬಜೆಟ್ ಮಂಡಿಸಲಾಗುವುದು. ನಮ್ಮ ಸರ್ಕಾರ ಯಾವಾಗಲೂ ಆರೋಗ್ಯದ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸಿದೆ. ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ ಅಗತ್ಯವಿರುವ ಸಂಪೂರ್ಣ ಹಣವನ್ನು ಒದಗಿಸಲಾಗುವುದು ಎಂದು ಸಚಿವರು ನವದೆಹಲಿಯಲ್ಲಿ ನಡೆದ ಕ್ಯಾಬಿನೆಟ್ ನಿರ್ಧಾರಗಳ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ■ 6ನೇ ಪುಟಕ್ಕೆ

> ▶ ಈ ಕಾರ್ಯಕ್ರಮವು ಕೈಗೆಟಕುವ, ಸುಲಭ ಹಾಗೂ ಗುಣಮಟ್ಟದ ಆರೋಗ್ಯ ಸುರಕ್ಷಾ ಸೇವೆಯನ್ನು ಭಾರತದಲ್ಲಿ ಎಲ್ಲರಿಗೂ ಕಲ್ಪಿಸುವುದೇ ಆಗಿದೆ. ಇದು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್‌ಆರ್‌ಹೆಚ್‌ಎಂ) ಮತ್ತು ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ (ಎನ್‌ಯುಹೆಚ್‌ಎಂ) ಹೀಗೆ ಎರಡು ಭಾಗವಾಗಿ ಜಾರಿಗೊಂಡಿದೆ.

ಜನಾರ್ಧನ ರೆಡ್ಡಿ ನನ್ನ ಮುಗಿಸಲು ಪ್ಲಾನ್ ಮಾಡ್ತಿದ್ದಾರೆ...!

● ಒಂದು ಕಾಲದ ಕುಚುಕು ಬಿ.ಶ್ರೀರಾಮುಲು ಆತಂಕದ ಆರೋಪ ● ಸಂಡೂರು ಉಪ ಚುನಾವಣೆ ಸೋಲಿಗೆ ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್ ನನ್ನ ಬಗ್ಗೆ ಲಘುವಾಗಿ ಮಾತಾಡಿದರು. ● ಜನಾರ್ಧನ ರೆಡ್ಡಿ ಹೇಳಿಕೆ ಮಾತು ಕೇಳಿ ಅಗರ್‌ವಾಲ್ ಹೀಗೆ ಮಾತಾಡಿದ್ದಾರೆ; ನಾನೀಗ ರೆಡ್ಡಿ ಟಾರ್ಗೆಟ್ ಆಗಿದ್ದೇನೆ ● ಬೇಕಿದ್ದರೆ ಪಕ್ಷ ಬಿಡಲು ತಯಾರಿದ್ದೇನೆ; ಅದಕ್ಕೂ ಮೊದಲು ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾಗೆ ಎಲ್ಲವನ್ನೂ ಹೇಳ್ತೇನೆ ● ಬಿಜೆಪಿಯಲ್ಲಿ ಮತ್ತೊಂದು ಸ್ಫೋಟ.

ಬೆಂಗಳೂರು, ಜ.22– ರಾಜಕಾರಣದಲ್ಲಿ ಸದಾ ಯಾರೂ ಶತ್ರುಗಳೂ ಅಲ್ಲ, ಯಾರೂ ಮಿತ್ರರೂ ಅಲ್ಲ ಎಂಬ ಸಾರ್ವತ್ರಿಕ ಮಾತಿದೆ. ಈ ಮಾತು ಇದೀಗ ಮತ್ತೊಮ್ಮೆ ಸಾಬೀತಾಗಿದೆ. ತನ್ನ ಒಂದು ಕಾಲದ ಫೇಮಸ್ ಬಳ್ಳಾರಿ ಕುಚುಕುಗಳಾದ ಮಾಜಿ ಸಚಿವ ಜನಾರ್ದನ ರೆಡ್ಡಿ ವಿರುದ್ಧವೇ ಮಾಜಿ ಸಚಿವ, ಬಿಜೆಪಿ ಮುಖಂಡ ಶ್ರೀರಾಮುಲು ವಾಗ್ದಾಳಿ ನಡೆಸಿದ್ದು, ನನ್ನನ್ನು ರಾಜಕೀಯವಾಗಿ ಮುಗಿಸಲು ಜನಾರ್ದನ ರೆಡ್ಡಿ ಯತ್ನಿಸುತ್ತಿದ್ದಾರೆ ಎಂದು ಆರೋಪ ಮಾಡಿದ್ದಾರೆ.

ನನ್ನ ಕುಟುಂಬದ ವಿರುದ್ಧ ದ್ವೇಷ ಸಾಧಿಸುತ್ತಿರುವ ಜನಾರ್ದನ ರೆಡ್ಡಿ ನನ್ನ ಟಾರ್ಗೆಟ್ ಮಾಡಿದ್ದಾರೆ. ನನ್ನ ರಾಜಕೀಯವಾಗಿ ಮುಗಿಸಲು ಪ್ಲಾನ್ ಮಾಡುತ್ತಿದ್ದಾರೆ. ನನ್ನ ಪರವಾಗಿ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಕೂಡ ಇಲ್ಲ. ಏನು ಮಾಡುವುದು ಎಂದ ಅವರು, ನನ್ನಿಂದ ಪಕ್ಷಕ್ಕೆ ತೊಂದರೆಯಾಗುತ್ತದೆ ಎಂದರೆ ನಾನು ಪಕ್ಷ ಬಿಡುತ್ತೇನೆ. ಆದರೆ ಅದಕ್ಕೂ ಮುನ್ನ ಪ್ರಧಾನಿ ಮೋದಿ, ಅಮಿತ್ ಶಾ ಅವರನ್ನು ಭೇಟಿ ಮಾಡಿ ವಿಷಯ ತಿಳಿಸುತ್ತೇನೆ ಎಂದರು.

ಸಂಡೂರು ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಸೋಲಿನ ಬಗ್ಗೆ ಮಾತನಾಡಿದ ರಾಧಾಮೋಹನ್ ದಾಸ್, ನನ್ನ ಬಗ್ಗೆ ತಿಳಿದು ಮಾತನಾಡಬೇಕಿತ್ತು. ಅವರು ಉತ್ತರಪ್ರದೇಶ ರಾಜ್ಯದವರು. ಅವರಿಗೆ ಇಲ್ಲಿನ ಕೆಲವು ವಿಚಾರಗಳು ಗೊತ್ತಿರುವುದಿಲ್ಲ. ನನ್ನ ಬಗ್ಗೆ ಲಘುವಾಗಿ ಮಾತನಾಡುವುದು ಒಳ್ಳೆಯದಲ್ಲ ಎಂದು ಹೇಳಿದ್ದೇನೆ. ಸಭೆಯಲ್ಲಿ ಈ ವಿಚಾರವನ್ನು ರಾಜ್ಯಾಧ್ಯಕ್ಷರಿಗೂ ತಿಳಿಸಿದ್ದೇನೆ. ನಾನು ಕೆಲಸ ಮಾಡಿಲ್ಲ ಎಂದು ಜನಾರ್ದನರೆಡ್ಡಿ ಹೇಳಿರುವುದು ಸ್ಪಷ್ಟವಾಗಿದೆ ಎಂದರು.


ಜನಾರ್ಧನ ರೆಡ್ಡಿ ಶ್ರೀರಾಮುಲು

ಹಿನ್ನೆಲೆ: ಕೋರ್ ಕಮಿಟಿ ಸಭೆಯಲ್ಲಿ ಸಂಡೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಂಗಾರು ಹನುಮಂತು ಸೋಲಿನ ಬಗ್ಗೆ ಚರ್ಚೆ ನಡೆದಿತ್ತು. ಬಂಗಾರು ಹನುಮಂತು ದೂರನ್ನು ಆಧರಿಸಿ, ಕೋರ್ ಕಮಿಟಿ ಸಭೆಯಲ್ಲಿ ರಾಧಾಮೋಹನ್ ದಾಸ್ ಅಗರ್‌ವಾಲ್, ರಾಮುಲು ಅವರ ಕಾರ್ಯವೈಖರಿ ಪ್ರಶ್ನಿಸಿದ್ದರು. ರಾಧಾಮೋಹನ್ ದಾಸ್ ಅವರ ಶಾಕಿಂಗ್ ಪ್ರಶ್ನೆಗೆ ಗಲಿಬಿಲಿಗೊಂಡ ಶ್ರೀರಾಮುಲು, ನಾನು ಕಷ್ಟಪಟ್ಟು ಉಪ–ಚುನಾವಣೆಯಲ್ಲಿ ಕೆಲಸ ಮಾಡಿದ್ದೇನೆ. ನನ್ನ ವಿರುದ್ಧ ಸುಖಾ ಸುಮ್ಮನೆ ದೂರು ನೀಡಲಾಗಿದೆ, ಇದು ಸರಿಯಲ್ಲ. ಇಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಣೆ ಮಾಡುವವರಿಗೆ ಬೆಲೆಯೇ ಸಿಗುವುದಿಲ್ಲ ಎಂದು ರಾಮುಲು ಅಸಮಾಧಾನ ಹೊರಹಾಕಿದ್ದಾರೆ. ರಾಮುಲು ಮಾತಿಗೆ ಏನೂ ಪ್ರತಿಕ್ರಿಯೆ ನೀಡದೇ ರಾಧಾಮೋಹನ್ ದಾಸ್ ಅಗರ್‌ವಾಲ್ ಸುಮ್ಮನಾಗಿದ್ದರು.

ಮಾತು ಮುಂದುವರೆಸಿದ ಶ್ರೀರಾಮುಲು, ನಾನು ಚುನಾವಣೆ ಸೋಲಿನ ನೋವಲ್ಲಿ ಇದ್ದೇನೆ. ಇಂತಹ ಸಂದರ್ಭದಲ್ಲಿ ಈ ಆರೋಪ ಸರಿ ಇಲ್ಲ. ನಾನು ಪಕ್ಷದ ಪ್ರಾಮಾಣಿಕ ಕಾರ್ಯಕರ್ತ ಎಂದರಲ್ಲದೇ, ಅಲ್ಲೇ ಇದ್ದ ವಿಜಯೇಂದ್ರ ಅವರ ವಿರುದ್ಧವೂ ಅಸಮಾಧಾನ ಹೊರ ಹಾಕಿದ್ದಾರೆ. ಅಧ್ಯಕ್ಷರಾಗಿ ನಿಮಗೆ ಎಲ್ಲವೂ ಗೊತ್ತಿದೆ. ನೀವೂ ಕೂಡ ನನ್ನ ಸಹಾಯಕ್ಕೆ ಬರುತ್ತಿಲ್ಲ. ನಾನು ಕೆಲಸ ಮಾಡಿರುವುದನ್ನು ■ 6ನೇ ಪುಟಕ್ಕೆ

ಸುರ್ಜೇವಾಲ ವಿರುದ್ಧ ಸಿದ್ದರಾಮಯ್ಯ ಬಣದಿಂದ ಆಂತರಿಕ ಸಹಿ ಸಂಗ್ರಹ

ಬೆಂಗಳೂರು, ಜ.22– ರಾಜ್ಯ ಕಾಂಗ್ರೆಸ್‌ನಲ್ಲಿ ಭಿನ್ನಮತ ಹಾಗೂ ಅಸಮಾಧಾನಗಳು ಭುಗಿಲೆದ್ದಿದ್ದು, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ವಿರುದ್ಧವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ ಅಸಮಾಧಾನಗೊಂಡಿದೆ. ರಣದೀಪ್ ಸಿಂಗ್ ಸುರ್ಜೇವಾಲ ಪಕ್ಷಪಾತಿ ಧೋರಣೆ ಅನುಸರಿಸುತ್ತಿದ್ದಾರೆ ಎಂಬುದು ಸಿದ್ದರಾಮಯ್ಯ ಬಣದ ಆರೋಪವಾಗಿದ್ದು, ಆಂತರಿಕವಾಗಿ ಸಹಿ ಸಂಗ್ರಹ ಪ್ರಕ್ರಿಯೆಗಳು ನಡೆಯುತ್ತಿವೆ.


ಸುರ್ಜೇವಾಲ

ರಣದೀಪ್ ಸಿಂಗ್ ಸುರ್ಜೇವಾಲ ಅವರು ರಾಜ್ಯದಲ್ಲಿ ಕಾಂಗ್ರೆಸ್ ಉಸ್ತುವಾರಿಯಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಅವರು ಒನ್ ಸೈಡ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂಬ ಆರೋಪ ಕೇಳಿ ಬರುತ್ತಿದೆ. ಸಿದ್ದರಾಮಯ್ಯ ಬಣದಲ್ಲಿ ಹಲವರು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದು, ■ 6ನೇ ಪುಟಕ್ಕೆ

ಪಾಲಹಳ್ಳಿಯ ರೌಡಿಶೀಟರ್ ಸುಪ್ರೀತ್ ಹತ್ಯೆ ಪ್ರಕರಣ

ಪ್ರಮುಖ ಆರೋಪಿ ಪ್ರಮೋದ್ ನಕ್ರಾ; ಕಾಲಿಗೆ ಶೂಟ್ ಮಾಡಿ ಬಂಧಿಸಿದ ಪೊಲೀಸರು


ಕಾಲಿಗೆ ಗುಂಡೇಟು ಬಿದ್ದಿರುವ ಆರೋಪಿ ಪ್ರಮೋದ್


ಆರೋಪಿಯಿಂದ ಇರಿತಕ್ಕೊಳಗಾದ ಪೇದೆ ಶರತ್

ಶ್ರೀರಂಗಪಟ್ಟಣ, ಜ.22– ತಾಲೂಕಿನ ಪಾಲಹಳ್ಳಿಯ ರೌಡಿಶೀಟರ್ ಸುಪ್ರೀತ್ ಕೊಲೆ ಪ್ರಕರಣದ ಪ್ರಮುಖ ಆರೋಪಿ ಪ್ರಮೋದ್ ಕಾಲಿಗೆ ಗುಂಡು ಹಾರಿಸಿ ಪೊಲೀಸರು ಬಂಧಿಸಿದ್ದಾರೆ.

2023ರ ಅ.2ರಂದು ಹತ್ಯೆಯಾಗಿದ್ದ ಕುಂಟ ವಿನಿ ಕೊಲೆಗೆ ಪ್ರತೀಕಾರವಾಗಿ ಕುಂಟ ವಿನಿಯ ಸಹೋದರ ಪ್ರಮೋದ್ ಮತ್ತಿತರರು ರೌಡಿಶೀಟರ್ ಸುಪ್ರೀತ್‌ನನ್ನು ಕಳೆದ ಶನಿವಾರ ರಾತ್ರಿ ಪಾಲಹಳ್ಳಿ ಹೊರವಲಯದ ಆತನ ಜಮೀನಿನಲ್ಲಿ ಇರುವ ಶೆಡ್‌ನಲ್ಲಿ ಹತ್ಯೆ ಮಾಡಿದ್ದರು.

ಈ ಪ್ರಕರಣದಲ್ಲಿ ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿತ್ತು. ಪ್ರಮುಖ ಆರೋಪಿ ಪ್ರಮೋದ್ ತಾಲೂಕಿನ ಕರಿಘಟ್ಟದ ಅರಣ್ಯ ಪ್ರದೇಶದಲ್ಲಿ ತಲೆಮರೆಸಿಕೊಂಡಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಕೆಆರ್‌ಎಸ್ ಠಾಣೆ ಇನ್ಸ್‌ಪೆಕ್ಟರ್ ಪುನೀತ್ ನೇತೃತ್ವದ ಪೊಲೀಸರ ತಂಡ ಕರಿಘಟ್ಟ ಅರಣ್ಯಕ್ಕೆ ಲಗ್ಗೆ ಇಟ್ಟಿತ್ತು. ಪ್ರಮೋದ್‌ನನ್ನು ಬಂಧಿಸಲು ಪ್ರಯತ್ನಿಸಿದ ವೇಳೆ ಆತ ಪೇದೆ ಶರತ್ ಅವರ ತೋಳಿಗೆ ಚಾಕುವಿನಿಂದ ಇರಿದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ವೇಳೆ ಇನ್ಸ್‌ಪೆಕ್ಟರ್ ಪುನೀತ್, ಆತನ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದಾರೆ. ಗಾಯಗೊಂಡಿರುವ ಪ್ರಮೋದ್ ಹಾಗೂ ಪೇದೆ ಶರತ್‌ನನ್ನು ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.


ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಶ್ರೀರಂಗಪಟ್ಟಣ ಡಿವೈಎಸ್‌ಪಿ ಮುರಳಿ ಅವರು ಆಸ್ಪತ್ರೆಗೆ ಭೇಟಿ ನೀಡಿ, ಗಾಯಗೊಂಡಿರುವ ಪೇದೆಯ ಆರೋಗ್ಯ ವಿಚಾರಿಸಿದ್ದಲ್ಲದೇ, ಕಾಲಿಗೆ ಗುಂಡೇಟು ತಗುಲಿರುವ ಆರೋಪಿ ಪ್ರಮೋದ್‌ನ ಚಿಕಿತ್ಸೆ ಬಗ್ಗೆ ವೈದ್ಯರಿಂದ ವಿವರ ಪಡೆದಿದ್ದಾರೆ. ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಶನಿವಾರ ಪಾಲಹಳ್ಳಿ ಹೊರವಲಯದಲ್ಲಿ ಹತ್ಯೆಗೀಡಾದ ■ 6ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ಸಿಎಂ ಆಗುವುದ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ

ಸಿದ್ದರಾಮಯ್ಯ ಕಾಲದಲ್ಲಿ ಮೈಸೂರು ವಿಜಯನಗರ ಸಾಮ್ರಾಜ್ಯದ ಆಳ್ವಿಕೆ!; ಒಂದು 50X80 ಸೈಟ್ ಬರೀ 1200 ರೂ.!!

ಬೆಂಗಳೂರು, ಜ.22– ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಬಿಜೆಪಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಹೇಳಿದ್ದಾರೆ.


ವಿಶ್ವನಾಥ್

ಇಂದು ಡಿ.ಕೆ. ಶಿವಕುಮಾರ್ ಅವರನ್ನ ಭೇಟಿಯಾದ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಸಿಎಂ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಸುಮ್ಮನೆ ಇವರಿವರೇ ಐದು ವರ್ಷ ಸಿದ್ದರಾಮಯ್ಯ ಸಿಎಂ ಎನ್ನುತ್ತಿದ್ದಾರೆ. ಇದು ಅನವಶ್ಯಕವಾಗಿ ಸಿಎಂ ಹಬ್ಬಿಸುತ್ತಿರುವ ಗೊಂದಲ. ಇವರು ಕಾಂಗ್ರೆಸ್ ಪಕ್ಷದ ನೇಮ್ ಅಂಡ್ ಫೇಮ್ ಹಾಳು ಮಾಡುತ್ತಿದ್ದಾರೆ.

ಇವರೇನು ಕಾಂಗ್ರೆಸ್ ಕಟ್ಟಿದವರಲ್ಲವಲ್ಲ, ಅವರಿಗೇನು ಆಗಬೇಕು. ಅವರದ್ದು ಮುಗಿಯಿತಲ್ಲ, ಇದು ಅನವಶ್ಯಕ. ಸಿಎಂ ಬದಲಾಯಿಸಬೇಕಾದರೆ ಮಂತ್ರಿಗಳನ್ನು ಯಾರು ಕೇಳ್ತಾರೆ? ಸುಮ್ಮನೇ ಇವರುಗಳೇ ಐದು ವರ್ಷ ಅವರೇ ಎನ್ನುತ್ತಾರೆ. ಕಾಂಗ್ರೆಸ್ 136 ಸ್ಥಾನ ಬರಲು ಡಿ.ಕೆ ಶಿವಕುಮಾರ್ ಕೊಡುಗೆ ಇದೆ. ಎಲ್ಲದಕ್ಕೂ ಡಿಕೆಶಿಯವರದ್ದು ಖರ್ಚಾಗಿಲ್ವಾ? ■ 6ನೇ ಪುಟಕ್ಕೆ

ಫೆಬ್ರವರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಬೆಂಗಳೂರು, ಜ.22– ಬಿಜೆಪಿ ಆಂತರಿಕ ಚುನಾವಣಾ ಪ್ರಕ್ರಿಯೆಗಳು ಬಿರುಸುಗೊಳ್ಳುತ್ತಿದ್ದು, ಫೆಬ್ರವರಿ ತಿಂಗಳಲ್ಲಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ಭಿನ್ನಮತದ ಹಿನ್ನೆಲೆಯಲ್ಲಿ ಈ ಚುನಾವಣಾ ಪ್ರಕ್ರಿಯೆ ಕುತೂಹಲಕ್ಕೆ ಕಾರಣವಾಗಿದ್ದು, ಸಹಜವಾಗಿ ಅಭಿಪ್ರಾಯ ಸಂಗ್ರಹ ಮತ್ತು ಸಹಮತದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯುತ್ತದೆಯೇ ಇಲ್ಲ ಯತ್ನಾಳ್ ಟೀಂನಿಂದ ಬಂಡಾಯ ಅಭ್ಯರ್ಥಿ ಕಣಕ್ಕಿಳಿಸಲಾಗುತ್ತದೆಯೇ ಎಂಬ ಕುತೂಹಲ ಕೆರಳಿಸಿದೆ. ರಾಜ್ಯಾಧ್ಯಕ್ಷರ ಆಯ್ಕೆ ಪ್ರಕ್ರಿಯೆಗೂ ಮುನ್ನ ಮಂಡಲ, ಜಿಲ್ಲಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಅಂತಿಮ ಹಂತದ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದೆ. ಜಿಲ್ಲಾಧ್ಯಕ್ಷರ ಆಯ್ಕೆ ಪೂರ್ಣಗೊಂಡ ಬಳಿಕ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ರಾಜ್ಯಾಧ್ಯಕ್ಷರ ಆಯ್ಕೆ: ರಾಜ್ಯಾಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಜಿಲ್ಲಾಧ್ಯಕ್ಷರುಗಳು, ■ 6ನೇ ಪುಟಕ್ಕೆ

ಕೇರಳ ಉದ್ಯಮಿಗಳ ದರೋಡೆ; ಓರ್ವ ಪೊಲೀಸ್ ವಶಕ್ಕೆ

ಮೈಸೂರು, ಜ.22(ಆರ್‌ಕೆ)– ಸೋಮವಾರ ಬೆಳಗ್ಗೆ ಮೈಸೂರು ಹೊರವಲಯದ ಹಾರೋಹಳ್ಳಿ ಬಳಿ ಕೇರಳ ಉದ್ಯಮಿಗಳ ವಾಹನ ತಡೆದು ಹಲ್ಲೆ ಮಾಡಿ 1.50 ಲಕ್ಷ ರೂ. ನಗದಿನೊಂದಿಗೆ ಕಾರು ಅಪಹರಿಸಿದ್ದ ಪ್ರಕರಣ ಸಂಬಂಧ ಓರ್ವನನ್ನು ಜಿಲ್ಲಾ ಪೊಲೀಸರು ವಶಕ್ಕೆ ಪಡೆದಿದ್ದಾರೆ. 'ಮೈಸೂರು ಮಿತ್ರ'ನಿಗೆ ಈ ಕುರಿತು ಮಾಹಿತಿ ನೀಡಿದ ಮೈಸೂರು ಜಿಲ್ಲಾ ಎಸ್ಪಿ ಎನ್.ವಿಷ್ಣುವರ್ಧನ್, ದರೋಡೆ ಪ್ರಕರಣ ಸಂಬಂಧ ಇಂದು ಓರ್ವನನ್ನು ವಶಕ್ಕೆ ಪಡೆದು ■ 6ನೇ ಪುಟಕ್ಕೆ





ಜ. 25ಕ್ಕೆ ಹೈಕೋರ್ಟ್‌ಗೆ ವರದಿ ಸಲ್ಲಿಕೆ ಹಿನ್ನೆಲೆ

ಲೋಕಾಯುಕ್ತ ಪೊಲೀಸರಿಂದ ಮತ್ತೊಮ್ಮೆ ಮುಡಾದಲ್ಲಿ ದಾಖಲೆ ಪರಿಶೀಲನೆ

ಮೈಸೂರು,ಜ.22(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ 14 ನಿವೇಶನಗಳ ಮಂಜೂರಾತಿ ಪ್ರಕರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು ಇಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಕಚೇರಿಗೆ ಭೇಟಿ ನೀಡಿ, ಮತ್ತೊಮ್ಮೆ ಪರಿಶೀಲನೆ ನಡೆಸಿದರು.

ಬೆಳಗ್ಗೆ 6 ಗಂಟೆಗೆ ಮುಡಾ ಕಚೇರಿಗೆ ತೆರಳಿದ ಲೋಕಾಯುಕ್ತ ಮೈಸೂರು ಎಸ್‌ಪಿ ಕೆ.ಜೆ. ಉದೇಶ್ ನೇತೃತ್ವದ ತಂಡ ಸಭಾಂಗಣದಲ್ಲಿ ದಾಖಲೆ ಪತ್ರಗಳನ್ನು ಪರಿಶೀಲಿಸಿದರು. ಮುಡಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ದೇವನೂರು ವಸತಿ ಬಡಾವಣೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೇ ಬಳಸಿಕೊಂಡ ಭೂಮಿಗೆ ಪರಿಹಾರವಾಗಿ ಅಭಿವೃದ್ಧಿಗೊಂಡ ವಸತಿ ಬಡಾವಣೆಗಳಲ್ಲಿ 14 ನಿವೇಶನಗಳನ್ನು ಮಂಜೂರು ಮಾಡಿರುವ ಸಂಬಂಧ ದಾಖಲೆಗಳ ಪರಿಶೀಲಿಸಿದರು.

ನಿವೇಶನ ನೀಡಬೇಕೆಂದು ನಿರ್ಧರಿಸಿದ ಸಭೆಯ ನಡಾವಳಿ, ಸಿಸಿ ಕ್ಯಾಮರಾದಲ್ಲಿ ರೆಕಾರ್ಡ್ ಆಗಿರುವ ಮಾಹಿತಿ, ಅಂದು ನಿರ್ಣಯ ಕೈಗೊಂಡ ಮುಡಾ ಸಭೆಯಲ್ಲಿ ಹಾಜರಿದ್ದ ಸದಸ್ಯರು, ಅವರು ವ್ಯಕ್ತಪಡಿಸಿರುವ ಅಭಿಪ್ರಾಯ, ನಡಾವಳಿ ಪುಸ್ತಕದಲ್ಲಿ ನಮೂದಾಗಿ ಸರ್ಕಾರ ಅನುಮೋದಿಸಿರುವ ಕುರಿತಂತೆ ಎಲ್ಲಾ ದಾಖಲಾತಿಗಳನ್ನು ಲೋಕಾಯುಕ್ತ ಅಧಿಕಾರಿಗಳು ಪಡೆದುಕೊಂಡರು.

ಕೆಸರೆ ಗ್ರಾಮದ ಸರ್ವೆ ನಂಬರ್ 464ರಲ್ಲಿ 3 ಎಕರೆ 16 ಗುಂಟೆ ಭೂಮಿಯನ್ನು ಬಿ.ಎಂ. ಪಾರ್ವತಿ ಅವರು ಮುಡಾಗೆ ಬಿಟ್ಟುಕೊಡಲು ನೋಂದಣಿ ಮಾಡಿರುವ ರಿಲಿಂಕ್ವಿಷ್ ಪತ್ರ, ತಮ್ಮ ಭೂಮಿಗೆ ಬದಲಾಗಿ ಪರಿಹಾರ ರೂಪದಲ್ಲಿ



ನಿವೇಶನಗಳನ್ನು ನೀಡುವಂತೆ ಕೋರಿ ಸಲ್ಲಿಸಿರುವ ಮನವಿ ಪತ್ರ, ನಂತರ ಈ ಪ್ರಸ್ತಾವನೆ ಮೇಲೆ ಸೃಜನವಾಗಿರುವ ದಾಖಲೆಗಳು, ಕಡತದಲ್ಲಿ ಪ್ರಾಧಿಕಾರದ ಆಯುಕ್ತರು, ಕಾರ್ಯದರ್ಶಿ, ವಿಶೇಷ ಭೂಸ್ವಾಧೀನಾಧಿಕಾರಿ, ಇಂಜಿನಿಯರ್‌ಗಳು, ಟಿಪಿಎಂ ಶಾಖೆ, ವಿಶೇಷ ತಹಸೀಲ್ದಾರ್ ಬರೆದಿರುವ ಟಿಪ್ಪಣಿಯ ಹಾಳೆಯನ್ನೂ ಲೋಕಾಯುಕ್ತ ಪೊಲೀಸರು ಪರಿಶೀಲಿಸಿ, ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಪಡೆದು ಕೊಂಡರು. ರಾಜ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಜನವರಿ 25ರೊಳಗೆ ತನಿಖಾ ವರದಿ ಸಲ್ಲಿಸಬೇಕಾಗಿರುವುದರಿಂದ ತರಾತುರಿಯಲ್ಲಿ ದಾಖಲೆ ಪತ್ರಗಳನ್ನು ಪರಿಶೀಲಿಸಿದ ಲೋಕಾಯುಕ್ತ ಪೊಲೀಸರು, ಸಂಜೆವರೆಗೂ ಶೋಧ ಕಾರ್ಯ ನಡೆಸಿದರು.

ಸಭಾಂಗಣ ಮತ್ತು ಅಧ್ಯಕ್ಷರ ಕೊಠಡಿಗೆ ತೆರಳುವ ಗೇಟ್ ಅನ್ನು ಬಂದ್ ಮಾಡಿಕೊಂಡು ದಾಖಲೆ ಪರಿಶೀಲಿಸಿದ ಅಧಿಕಾರಿಗಳು, ಈ ವೇಳೆ ಸಾರ್ವಜನಿಕರು, ಮುಡಾ ಸಿಬ್ಬಂದಿ ಪ್ರವೇಶಿಸದಂತೆ ನಿರ್ಬಂಧಿಸಲಾಗಿತ್ತು. ಮಧ್ಯಾಹ್ನ ಊಟವನ್ನು ಸಭಾಂಗಣಕ್ಕೆ ತರಿಸಿಕೊಂಡಿದ್ದ ಪೊಲೀಸರು, ಶೋಧ ಕಾರ್ಯಾಚರಣೆ ನಡೆಸಿದ ನಂತರ ಸಂಜೆ 5 ಗಂಟೆಗೆ ಕೆಲ ದಾಖಲೆಗಳೊಂದಿಗೆ ಹಿಂದಿರುಗಿದರು ಎಂದು ಮೂಲಗಳು ತಿಳಿಸಿವೆ.

ಜನವರಿ 25ರಂದು ಹೈಕೋರ್ಟ್ ತನಿಖೆ ವರದಿ ಸಲ್ಲಿಸಲಿರುವ ಲೋಕಾಯುಕ್ತ ಎಸ್‌ಪಿ ಉದೇಶ್, ಅದರೊಟ್ಟಿಗೆ ಪ್ರಕರಣ ಸಂಬಂಧ ದಾಖಲೆ ಪ್ರತಿಗಳನ್ನು ದೃಢೀಕರಿಸಿ ತಮ್ಮ ಅಭಿಪ್ರಾಯದೊಂದಿಗೆ ಕೊಡಬೇಕಾಗಿದೆ. ದೂರುದಾರ ಸ್ನೇಹಮಯಿ ಕೃಷ್ಣ ಅವರ ದೂರಿನ ವಿಚಾರಣೆ ನಡೆಸುತ್ತಿರುವ ರಾಜ್ಯ ಹೈಕೋರ್ಟ್, 14 ನಿವೇಶನಗಳ ಮಂಜೂರು ಮಾಡಿರುವ ಪ್ರಕರಣವನ್ನು ಸಿಬಿಐಗೆ ಒಪ್ಪಿಸುವ ಬಗ್ಗೆ ಜನವರಿ 27ರಂದು ನಿಗದಿಯಾಗಿರುವ ವಿಚಾರಣೆ ನಡೆಸಿ ತೀರ್ಪು ನೀಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಲೋಕಾಯುಕ್ತ ಪೊಲೀಸರು ಪರಿಶೀಲಿಸಿದ ಸಂದರ್ಭ ಲಕ್ಷ್ಮೀಪುರಂ ಠಾಣೆ ಪೊಲೀಸರನ್ನು ಮುಡಾ ಕಚೇರಿಗೆ ನಿಯೋಜಿಸಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಮೈಸೂರು ಮಿತ್ರ ಗುರುವಾರ 23 ಜನವರಿ 2025

ಅಯೋಧ್ಯೆ ರಾಮಮಂದಿರಕ್ಕೆ ಹರ್ಷದ ವರ್ಷ ಮೈಸೂರಲ್ಲಿ ವಿಶ್ವದೀಪ ಕಾರ್ಯಕ್ರಮ



ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಗೊಂಡು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಆಯೋಜಿಸಿದ್ದ ವಿಶ್ವ ದೀಪ ಕಾರ್ಯಕ್ರಮಕ್ಕೆ ಮಾಜಿ ಸಂಸದ ಪ್ರತಾಪ ಸಿಂಹ ದೀಪ ಹಚ್ಚುವ ಮೂಲಕ ಉದ್ಘಾಟಿಸಿದರು.

ಮೈಸೂರು,ಜ.22(ಎಸ್‌ಪಿಎನ್)– ಲಕ್ಷಾಂತರ ಕರಸೇವಕರ ತ್ಯಾಗ–ಬಲಿದಾನದ ಸಂಕೇತವಾಗಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಗೊಂಡು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಆಯೋಜಿಸಿದ್ದ ವಿಶ್ವ ದೀಪ ಕಾರ್ಯಕ್ರಮಕ್ಕೆ ಮಾಜಿ ಸಂಸದ ಪ್ರತಾಪ ಸಿಂಹ ದೀಪ ಹಚ್ಚುವ ಮೂಲಕ ಉದ್ಘಾಟಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಚಾಮುಂಡಿಪುರಂ ವೃತ್ತದಿಂದ ವಿದ್ಯಾರಣ್ಯಪುರಂ ರಾಮಲಿಂಗೇಶ್ವರ ದೇವಸ್ಥಾನದವರೆಗೆ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಆಯೋಜಿಸಿದ್ದ ವಿಶ್ವ ದೀಪೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

'ಮಂದಿರವ ಅಲ್ಲೇ ಕಟ್ಟುವೆವು ಎಂಬ ಘೋಷ ವಾಕ್ಯ' ಪೂರಕವಾಗಿ ಭವ್ಯ ಶ್ರೀರಾಮ ಮಂದಿರ ನಿರ್ಮಾಣಗೊಂಡಿದೆ. ಇದರ ಹಿಂದೆ ಭಜರಂಗದಳ, ವಿಶ್ವ ಹಿಂದೂ ಪರಿಷತ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅನೇಕ ಹಿಂದೂ ನಾಯಕರು, ಕರಸೇವಕರು ಸಂತೋಷಪಡುವ ದಿನ ಇದಾಗಿದೆ ಎಂದು ತಿಳಿಸಿದರು.

ಸತತ ಐನ್ನೂರು ವರ್ಷಗಳ ಹೋರಾಟ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಂಕಲ್ಪ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರ ಹೋರಾಟದ ಫಲವಾಗಿ, ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣವಾಗಿರುವುದು ಕೋಟ್ಯಾಂತರ ಶ್ರೀರಾಮ ಭಕ್ತರಲ್ಲಿ ಆನಂದ ಒಂದೆಡೆಯಾದರೆ, ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ದಿನನಿತ್ಯ ಕೋಟ್ಯಾಂತರ ಜನ ಭೇಟಿ ನೀಡಿ, ಭಕ್ತಿ ಸಮರ್ಪಿಸುತ್ತಿರುವುದನ್ನು ಇಡೀ ಜಗತ್ತು ವಿಸ್ಮಯದಿಂದ ನೋಡುತ್ತಿದೆ ಎಂದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ನಗರ ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ. ರಾಮಪ್ರಸಾದ್, ಸತೀಶ್, ಶ್ರೀರಾಮ ಗೆಳೆಯರ ಬಳಗದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಬಿಜೆಪಿ ಮುಖಂಡರಾದ ಜೋಗಿ ಮಂಜು, ರಾಕೇಶ್, ಧರ್ಮೇಂದ್ರ, ಮಂಜುಳಾ, ವಿದ್ಯಾಅರಸ್, ಬಸವರಾಜು, ಪ್ರಭು, ದೀಪಕ್, ಅಭಿನವ್, ವಿನಯ್, ಸಂದೇಶ್, ಲಿಖಿತ್, ಹವನ್, ಸುರೇಂದರ್ ಸೇರಿದಂತೆ ಇತರರಿದ್ದರು.

ಅಂಚೆ ಪತ್ರ ಚಳವಳಿ



ಮೈಸೂರಿನ ಶ್ರೀರಾಂಪುರ ವಾರ್ಡ್ ಸಂಖ್ಯೆ 65ರ ನಿವಾಸಿಗಳು ತಮ್ಮ ಬಡಾವಣೆಗಳನ್ನು ಮುಡಾದಿಂದ ಮೈಸೂರು ಮಹಾನಗರ ಪಾಲಿಕೆಗೆ ಸೇರಿಸಬೇಕೆಂದು ಆಗ್ರಹಿಸಿ, ಬಿಇಎಂಎಲ್ ಆರ್ಚ್ ಹತ್ತಿರವಿರುವ ಅಂಚೆ ಕಚೇರಿ ಬಳಿ ಅಂಚೆಪತ್ರ ಚಳವಳಿ ನಡೆಸಿದರು. ನಿವಾಸಿಗಳು ಸಾವಿರಾರು ಅಂಚೆಪತ್ರಗಳನ್ನು ಮುಖ್ಯಮಂತ್ರಿಗಳಿಗೆ ರವಾನಿಸಿದರು.

ನಿಖಿಲ್ ಕುಮಾರಸ್ವಾಮಿ ಹುಟ್ಟುಹಬ್ಬ ಆಚರಣೆ...



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಬುಧವಾರ ಶ್ರೀ ರಾಂಪುರದ ಶ್ರೀ ಬಸವೇಶ್ವರ ನವ ಚೇತನ ವಿಶೇಷಚೇತನ ಮಕ್ಕಳ ಶಾಲೆಯಲ್ಲಿ ಹಣ್ಣು ಹಂಪಲು, ಉಪಾಹಾರ ವಿತರಿಸುವ ಮೂಲಕ ನಿಖಿಲ್ ಕುಮಾರಸ್ವಾಮಿ ಅವರ ಹುಟ್ಟುಹಬ್ಬ ಆಚರಿಸಲಾಯಿತು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ವರುಣ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಬಾಲಕೃಷ್ಣ ಎಂ.ಮಹೇಶ್ ಸಿದ್ದರಾಮನಹುಂಡಿ, ಕುಮಾರ್ ಬೀಡನಹಳ್ಳಿ, ಚಂದ್ರಶೇಖರ್‌ಗೌಡ, ನಾಗರಾಜು, ಅಜಯ, ಶಾಲೆಯ ಸಂಸ್ಥಾಪಕ ಮರಿಗೌಡ ಮುಂತಾದವರು ಉಪಸ್ಥಿತರಿದ್ದರು

ಜ.27, ವಿದ್ಯುತ್ ಲಿಲೋ ಮಾರ್ಗ ಚಾಲನೆ

ಮೈಸೂರು,ಜ.22– ಜನವರಿ 27 ರಂದು ಇಲ್ಲವೇ ನಂತರದ ಯಾವುದೇ ದಿನ ಮೈಸೂರು ತಾಲೂಕು ಉದ್ಬೂರು (ಡಿ.ಸಾಲುಂಡಿ) ಗ್ರಾಮದಲ್ಲಿ ಸುಮಾರು 2.999 ಕಿ.ಮೀ. ವಿದ್ಯುತ್ ಲಿಲೋ ಮಾರ್ಗವನ್ನು ಚಾಲನೆಗೊಳಿಸಲು ಉದ್ದೇಶಿಸಲಾಗಿದ್ದು, ಸದರಿ ಜೋಡಿ ವಿದ್ಯುತ್ ಮಾರ್ಗದಿಂದ ಸಂಪರ್ಕಗೊಂಡು ಉದ್ಬೂರು (ಡಿ.ಸಾಲುಂಡಿ), ಜಯಪುರ, ತರೀಪುರ, ಕಲ್ಲಹಳ್ಳಿ ಮತ್ತು ದನಗಳ್ಳಿ ಗ್ರಾಮಗಳ ಎಲ್ಲೆಯಲ್ಲಿ ಹಾದು ಹೋಗಿ ನೂತನವಾಗಿ ನಿರ್ಮಾಣವಾಗಿರುವ ಉದ್ಬೂರು (ಡಿ.ಸಾಲುಂಡಿ) ವಿದ್ಯುತ್ ವಿತರಣಾ ಕೇಂದ್ರಕ್ಕೆ ಪ್ರವಹಿಸಲಾಗುತ್ತದೆ.

ಆದ್ದರಿಂದ ಸಾರ್ವಜನಿಕರು ಗೋಪುರಗಳಿಗೆ ದನಕರುಗಳನ್ನು ಕಟ್ಟುವುದಾಗಲೀ, ಲೋಹದ ಪಟ್ಟಿಯನ್ನು ತೆಗೆಯುವುದರಲ್ಲಿ, ಗೋಪುರಗಳನ್ನು ಹತ್ತುವುದಾಗಲಿ ತಂತಿಗಳನ್ನು ಮುಟ್ಟುವುದಾಗಲೀ, ಗೋಪುರಗಳ ಕೆಳಗಡೆ ಮರಗಿಡಗಳನ್ನು ನೆಡುವುದಾಗಲೀ, ಗೋಪುರಗಳ ಬಳ್ಳಿ, ಹಗ್ಗ ಮುಂತಾದವುಗಳನ್ನು ಎಸೆಯುವುದಾಗಲೀ, ಗಾಳಿಪಟವನ್ನು ಗೋಪುರದ ಹತ್ತಿರ ಹಾರಿಸುವುದಾಗಲೀ ಮಾಡುವುದು ತುಂಬಾ ಅಪಾಯಕಾರಿಯಾಗಿರುತ್ತದೆ ಹಾಗೂ ಪ್ರಾಣ ಹಾನಿಯಾಗುತ್ತದೆಂದು ಎಚ್ಚರಿಸಲಾಗಿದೆ.

ಮಂಚೇಗೌಡನ ಕೊಪ್ಪಲು ಕಾಂಗ್ರೆಸ್ ಮುಖಂಡ ಕೃಷ್ಣ ನಿಧನ

ಮೈಸೂರು, ಜ.22–ಮೈಸೂರು ಮಂಚೇಗೌಡನ ಕೊಪ್ಪಲು ನಿವಾಸಿಯೂ ಆದ ವಾರ್ಡ್ ನಂ.2ರ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ(ಕಿಟ್ಟಿ ಅಂಕಲ್–54) ಇಂದು ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರು ಪತ್ನಿ ಸುಧಾ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಗುರುವಾರ) ಮಧ್ಯಾಹ್ನ 12 ಗಂಟೆಗೆ ಹೆಬ್ಬಾಳು ರಸ್ತೆಯಲ್ಲಿನ ಕಲ್ಯಾಣಿ ಹೋಟೆಲ್ ಹಿಂಭಾಗದ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರು ಹೆಬ್ಬಾಳ ಗ್ರಾಮ ಪಂಚಾಯ್ತಿ ಮಾಜಿ ಪ್ರಧಾನರಾಗಿದ್ದ ದಿವಂಗತ ರುಕ್ಮಾಂಗದ ಅವರ ಸಹೋದರ.



ಇವರ ನಿಧನಕ್ಕೆ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಬಿಜೆಪಿ ಮುಖಂಡರೂ ಅದ ಗ್ರಾಮದ ಯುವ ಮುಖಂಡ ಪುನೀತ್, ಕಾಂಗ್ರೆಸ್ ಮುಖಂಡ ರವಿ (ಡೆಲ್ಲಿ) ಸಂತಾಪ ಸೂಚಿಸಿದ್ದಾರೆ.



ಅನಂತ ಪದ್ಮನಾಭರಾವ್

ಮೈಸೂರು,ಜ.22–ಮೈಸೂರಿನ ಚಾಮುಂಡಿಪುರಂ ನಿವಾಸಿ ಅನಂತ ಪದ್ಮನಾಭರಾವ್ (69) ಬುಧವಾರ ನಿಧನರಾದರು. ಮೃತರು ಪತ್ನಿ ಕಲಾವತಿ, ಪುತ್ರರಾದ ಗುರುರಾಜ್, ದರ್ಶನ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಿವೃತ್ತ ಶಿಕ್ಷಕರಾದ ಇವರು ಜೋತಿಷ್ಯದ ಮೂಲಕ ಅಪಾರ ಶಿಷ್ಯ ವೃಂದ ಹೊಂದಿದ್ದರು. ಅವರ ನಿಧನಕ್ಕೆ ಶಿಷ್ಯ ವೃಂದ ಶ್ರದ್ಧಾಂಜಲಿ ಸಲ್ಲಿಸಿದೆ. ಅಂತ್ಯಕ್ರಿಯೆ ಬುಧವಾರ ಸಂಜೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರಲ್ಲಿ ಬಹುತೇಕ ಕಡೆ ಟ್ರಾಫಿಕ್ ಸಿಗ್ನಲ್ ಲೈಟುಗಳು ಸ್ಥಗಿತ, ವಾಹನ ಸವಾರರ ಪರದಾಟ

ಪ್ರತಿ ನಿತ್ಯ ಸಣ್ಣ–ಪುಟ್ಟ ಅಪಘಾತ, ಟ್ರಾಫಿಕ್ ಪೊಲೀಸರೂ ಇಲ್ಲ, ಹೋಂ ಗಾರ್ಡ್‌ಗಳೂ ನಾಪತ್ತೆ ; ಸಾರ್ವಜನಿಕರ ಪರದಾಟ



ಕೆ.ಆರ್.ವೃತ್ತದಲ್ಲಿ ಟ್ರಾಫಿಕ್ ಸಿಗ್ನಲ್ ಲೈಟುಗಳು ನಿಷ್ಕ್ರಿಯಗೊಂಡ ಹಿನ್ನೆಲೆಯಲ್ಲಿ ರಸ್ತೆ ದಾಟಲು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪರದಾಡುತ್ತಿರುವುದು.

ಮೈಸೂರು,ಜ.22(ಜಿಎ)–ಮೈಸೂರು ನಗರದಾದ್ಯಂತ ರಸ್ತೆ, ವೃತ್ತಗಳಲ್ಲಿ ಅಳವಡಿಸಿರುವ ಬಹುತೇಕ ಟ್ರಾಫಿಕ್ ಸಿಗ್ನಲ್ ಲೈಟುಗಳು ನಿಷ್ಕ್ರಿಯಗೊಂಡಿದ್ದು, ವಾಹನ ಸವಾರರು ಮತ್ತು ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಡಕಾಗಿದೆ.

ನಗರದ ಹೃದಯ ಭಾಗವಾದ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರ ಬೋಸ್(ಆರ್‌ಎಂಸಿ)ವೃತ್ತ, ವಿಶ್ವಮಾನವ ಡಬಲ್ ರಸ್ತೆ ಜಂಕ್ಷನ್, ಕೆಆರ್‌ಎಸ್ ರಾಯಲ್ ಇನ್ ಜಂಕ್ಷನ್, ವಿಜಯಬ್ಯಾಂಕ್ ವೃತ್ತ, ಕಾಳಿದಾಸ ರಸ್ತೆಯ ಪಂಚವಟಿ ವೃತ್ತ ಸೇರಿದಂತೆ ಅನೇಕ ವೃತ್ತಗಳಲ್ಲಿ ಟ್ರಾಫಿಕ್ ಸಿಗ್ನಲ್ ನಿಷ್ಕ್ರಿಯಗೊಂಡಿರುವ ಹಿನ್ನೆಲೆಯಲ್ಲಿ ಪ್ರತಿನಿತ್ಯ ಸಣ್ಣ–ಪುಟ್ಟ ಅಪಘಾತಗಳು ಸಂಭವಿಸುತ್ತಿದ್ದು, ಸಾರ್ವಜನಿಕರು ಆತಂಕದಿಂದ ಸಂಚರಿಸುವಂತಾಗಿದೆ.

ಕೆ.ಆರ್.ವೃತ್ತದಿಂದ ಡಿ.ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ ಅಲ್ಬರ್ಟ್ ವಿಕ್ಟರ್ ರಸ್ತೆ ಮೂಲಕ ನಿತ್ಯವೂ ಸಾವಿರಾರು ವಾಹನಗಳು ಸಂಚರಿಸುತ್ತವೆ. ಸಯ್ಯಾಜಿರಾವ್ ರಸ್ತೆಯಲ್ಲಿ ದೇವರಾಜ ಮಾರುಕಟ್ಟೆ, ಕೆ.ಆರ್.ಆಸ್ಪತ್ರೆ ಹಾಗೂ ನಗರ ಬಸ್ ನಿಲ್ದಾಣ ಇರುವುದರಿಂದ ಸಾರ್ವಜನಿಕರು ಈ ವೃತ್ತವನ್ನು ಹಾದು ಹೋಗಬೇಕಿದೆ. ನಗರ ಬಸ್ ನಿಲ್ದಾಣಕ್ಕೆ ಬಂದು ಅಲ್ಲಿಂದ ದೇವರಾಜ ಮಾರುಕಟ್ಟೆ, ಕೆ.ಆರ್.ಆಸ್ಪತ್ರೆ ಸೇರಿದಂತೆ ಸಾವಿರಾರು ವಿದ್ಯಾರ್ಥಿ ಸಂಚರಿಸುತ್ತಾರೆ. ಆದರೆ, ಈಗ ಟ್ರಾಫಿಕ್ ಸಿಗ್ನಲ್ ನಿಷ್ಕ್ರಿಯಗೊಂಡಿರುವುದರಿಂದ ದೇವರಾಜ ಮಾರುಕಟ್ಟೆ, ಕೆ.ಆರ್.ಆಸ್ಪತ್ರೆಗೆ ಹೋಗುವ ಸಾರ್ವಜನಿಕರು ಹಾಗೂ ಸಾವಿರಾರು ವಿದ್ಯಾರ್ಥಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಆರ್‌ಎಂಸಿ ವೃತ್ತದಲ್ಲಿ ಇರುವ ಟ್ರಾಫಿಕ್ ಸಿಗ್ನಲ್ ಇರುವುದು ಆಟಕ್ಕುಂಟು ಲೆಕ್ಕಕ್ಕೆ ಇಲ್ಲದಂತಾಗಿದ್ದು, ವರ್ಷದಲ್ಲಿ ಇದು ಕಾರ್ಯನಿರ್ವಹಿಸುವುದು ಕೆಲವೇ ದಿನಗಳು ಮಾತ್ರ. ಟ್ರಾಫಿಕ್ ಸಿಗ್ನಲ್ ಕಾರ್ಯನಿರ್ವಹಿಸದ ಹಿನ್ನೆಲೆಯಲ್ಲಿ ವಾಹನಗಳು ಅಡ್ಡಾದಿಡ್ಡಿಯಾಗಿ ಸಂಚರಿಸುತ್ತವೆ. ಇದನ್ನು ನಿಯಂತ್ರಿಸಲು ಪೊಲೀಸ್ ಇರಲಿ ಒಬ್ಬ ಹೋಮ್ ಗಾರ್ಡ್ ಕೂಡ ಇರುವುದಿಲ್ಲ. ಪಾದಚಾರಿಗಳು ಜೀವ ಕೈಯ್ಯಲ್ಲಿ ಹಿಡಿದು ರಸ್ತೆ ದಾಟುವ ಸ್ಥಿತಿ ನಿರ್ಮಾಣವಾಗಿದೆ. ಕೆಆರ್‌ಎಸ್ ರಸ್ತೆಯಲ್ಲಿರುವ ರಾಯಲ್ ಇನ್ ಜಂಕ್ಷನ್‌ನಲ್ಲಿಯೂ ಇದೆ ಸಮಸ್ಯೆ. ಈ ರಸ್ತೆಯೂ ಹೆಬ್ಬಾಳು ಕೈಗಾರಿಕ ಪ್ರದೇಶಕ್ಕೆ ಹತ್ತಿರವಿರುವುದರಿಂದ ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ವಾಹನ ದಟ್ಟಣೆ ಹೆಚ್ಚಿರುತ್ತದೆ. ಮತ್ತೊಂದೆಡೆ ರೈಲ್ವೇ ಗೇಟ್ ಮತ್ತು ಈ ರಸ್ತೆಯಲ್ಲಿ ಅಂಡರ್‌ಬ್ರಿಡ್ಜ್ ಕಾಮಗಾರಿ ನಡೆಯುತ್ತಿರುವುದರಿಂದ ವಾಹನ ಸಂಚಾರ ಹರಸಾಹಸವಾಗಿದೆ. ಆದರೆ, ಈ ಸಂದರ್ಭದಲ್ಲಿ ಸಂಚಾರಿ ಪೊಲೀಸರ ತಂಡ ರಿಂಗ್ ರಸ್ತೆಯ ಒಂದು ಭಾಗದಲ್ಲಿ ನಿಂತು ವಾಹನ ಸವಾರರಿಗೆ ದಂಡ ವಿಧಿಸುವ ಕಾರ್ಯವನ್ನು ಉತ್ತಮವಾಗಿ ಮಾಡುತ್ತಾರೆ. ಸಂಜೆ ಆಗುತ್ತಿದ್ದಂತೆ ಹೆಚ್ಚಾಗುವ ಟ್ರಾಫಿಕ್ ಜಾಮ್ ಬಗ್ಗೆ ಮಾತ್ರ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ವಾಹನ ಸವಾರು 'ಮೈಸೂರು ಮಿತ್ರ'ನ ಬಳಿ ದೂರಿದರು.

ಕಾಳಿದಾಸ ರಸ್ತೆಯಲ್ಲಿರುವ ಪಂಚವಟಿ ವೃತ್ತದ ಟ್ರಾಫಿಕ್ ಸಿಗ್ನಲ್ ಕೆಟ್ಟು ನಿಂತು ಸಾಕಷ್ಟು ದಿನಗಳೇ ಆಗಿವೆ. ಮಾತೃಮಂಡಳಿ ವೃತ್ತದಿಂದ ಪಂಚವಟಿ ವೃತ್ತದವರೆಗೂ ಏಕಮುಖ ರಸ್ತೆಯಾಗಿದ್ದು, ಟ್ರಾಫಿಕ್ ಸಿಗ್ನಲ್ ನಿಷ್ಕ್ರಿಯಗೊಂಡಿರುವುದರಿಂದ ಬಹುತೇಕ ವಾಹನ ಸವಾರರು ಏಕಮುಖ ರಸ್ತೆಯಲ್ಲಿ ಸಂಚರಿಸುತ್ತಿದ್ದಾರೆ. ಇದರಿಂದ ನಿತ್ಯವೂ ಒಂದಲ್ಲಾ ಒಂದು ಅಪಘಾತಗಳು ಈ ವೃತ್ತದಲ್ಲಿ ಸಂಭವಿಸುತ್ತಿವೆ. ಆದರೂ ಇಲ್ಲಿ ಯಾವುದೇ ಸಿಬ್ಬಂದಿಯನ್ನು ನಿಯೋಜಿಸಿಲ್ಲ.

ಕೆಲವೇ ದಿನಗಳಲ್ಲಿ ಎಲ್ಲಾ ಸಿಗ್ನಲ್ ಲೈಟು ಕಾರ್ಯನಿರ್ವಹಣೆ

“ ಮೈಸೂರಿನ ಪ್ರಮುಖ ಟ್ರಾಫಿಕ್ ಸಿಗ್ನಲ್‌ಗಳು ವೈರಿಂಗ್ ಮತ್ತು ತಾಂತ್ರಿಕ ಸಮಸ್ಯೆಯಿಂದ ನಿಷ್ಕ್ರಿಯಗೊಂಡಿದೆ. ಈ ಹಿಂದೆ ಟ್ರಾಫಿಕ್ ಸಿಗ್ನಲ್‌ಗಳ ನಿರ್ವಹಣೆ ಮಾಡುತ್ತಿದ್ದವರ ಗುತ್ತಿಗೆ ಅವಧಿ ಪೂರ್ಣಗೊಂಡಿದ್ದು, ನೂತನವಾಗಿ ಟೆಂಡರ್ ಕರೆದು ಹೊಸಬರಿಗೆ ಗುತ್ತಿಗೆ ನೀಡಲಾಗಿದೆ. ಅವರು ಈಗಾಗಲೇ ಕೆಲಸ ಆರಂಭಿಸಿದ್ದು, ಕೆಲವೇ ದಿನಗಳಲ್ಲಿ ಎಲ್ಲಾ ಟ್ರಾಫಿಕ್ ಸಿಗ್ನಲ್‌ಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ. ನಗರದಲ್ಲಿ ಅಳವಡಿಸಿರುವ ನೂತನ ಟ್ರಾಫಿಕ್ ಸಿಗ್ನಲ್‌ಗಳ ದೀಪ ಅಳವಡಿಸಲು ಬಳಸಿರುವ ಕಂಬಗಳ ಗುಣಮಟ್ಟ ಕಡಿಮೆ ಇರುವುದರಿಂದ ಅದರ ಬಗ್ಗೆ ಚರ್ಚೆಗಳು ನಡೆಯುತ್ತಿದೆ.

–ಪರಶುರಾಮಪ್ಪ, ಎಸಿಪಿ, ಸಂಚಾರಿ ವಿಭಾಗ

ಎಂ.ಕೆ.ಸವಿತಾರನ್ನು ಮೈಸೂರು ಪ್ರವಾಸೋದ್ಯಮ ಇಲಾಖೆಯಲ್ಲೇ ಮುಂದುವರೆಸುವಂತೆ ಹೋಟೆಲ್ ಮಾಲೀಕರ ಸಂಘ ಒತ್ತಾಯ

ಮೈಸೂರು,ಜ.22–ಪ್ರವಾಸೋದ್ಯಮ ಇಲಾಖೆ ಮೈಸೂರು ಜಂಟಿ ನಿರ್ದೇಶಕರಾಗಿದ್ದ ಶ್ರೀಮತಿ ಎಂ.ಕೆ.ಸವಿತಾ ಅವರನ್ನು ಈಗ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರನ್ನಾಗಿ (ಆಡಳಿತ) ವರ್ಗಾವಣೆ ಮಾಡಿರುವುದು ಪ್ರವಾಸೋದ್ಯಮಕ್ಕೆ ತೀವ್ರ ಹಿನ್ನಡೆಯಾಗಿದೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ದೂರಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಹೆಚ್ಚುವರಿಯಾಗಿ ಮೈಸೂರು ಪ್ರವಾಸೋದ್ಯಮ ಇಲಾಖೆ ಉಸ್ತುವಾರಿ ಜಂಟಿ ನಿರ್ದೇಶಕರಾಗಿ ಶ್ರೀಮತಿ ಎಂ.ಕೆ. ಸವಿತಾ ಅವರನ್ನೇ ಮುಂದುವರೆಸಬೇಕಾಗಿ ಸಂಘ ಆಗ್ರಹಿಸಿದೆ. ಸವಿತಾ ಅವರು ಪ್ರವಾಸೋದ್ಯಮ ಇಲಾಖೆಯಲ್ಲಿ 2 ವರ್ಷದಿಂದ ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಗಳನ್ನು ತುಂಬಾ ಅಚ್ಚುಕಟ್ಟಾಗಿ ಕಾರ್ಯಗತಗೊಳಿಸಿದ್ದು, ಅವರು ಮತ್ತೆ 2 ವರ್ಷ ಮುಂದುವರೆದಲ್ಲಿ ಕೇಂದ್ರದಿಂದ ಪ್ರಸಾದ ಯೋಜನೆ ಸೇರಿದಂತೆ ಇನ್ನಿತರ ಹಲವಾರು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಗಳನ್ನು ಮತ್ತಷ್ಟು ಅಚ್ಚುಕಟ್ಟಾಗಿ ಕಾರ್ಯಗತಗೊಳಿಸುವಲ್ಲಿ ಸಂದೇಹವಿಲ್ಲ. ಇಂತಹ ಅಧಿಕಾರಿಯನ್ನು ಪ್ರವಾಸೋದ್ಯಮ ಇಲಾಖೆಯಲ್ಲಿಯೇ ಹೆಚ್ಚುವರಿಯಾಗಿ ಮುಂದುವರೆಸಬೇಕೆಂದು ಸರ್ಕಾರವನ್ನು ಆಗ್ರಹಪಡಿಸಿದ್ದಾರೆ.




ಎಂ.ಕೆ.ಸವಿತಾ

ಅಡುಗೆ ಸ್ಪರ್ಧೆ ವಿಜೇತರು



ಮೈಸೂರು ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕ್ಲಸ್ಟರ್ ಮಟ್ಟದ ಅಡುಗೆ ತಯಾರಿಕಾ ಸ್ಪರ್ಧೆಯಲ್ಲಿ ವಿಜೇತರಾದ ಅಕ್ಷರ ದಾಸೋಹ ಅಡುಗೆ ಸಿಬ್ಬಂದಿಗೆ ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ನಿರ್ದೇಶಕ ಟಿ.ಸತೀಶ್ ಜವರೇಗೌಡ ಬಹುಮಾನ ವಿತರಿಸಿದರು. ಈ ವೇಳೆ ಸಿ.ಆರ್.ಪಿ. ದೀಪು ಎಸ್., ಮುಖ್ಯ ಶಿಕ್ಷಕಿ ಪಿ.ಎನ್.ವೀಣಾ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.01.2025 ಗುರುವಾರ, ಮಳೆ ನಕ್ಷತ್ರ: ಉತ್ತರಾಷಾಢ 11.01.2025 ರಿಂದ 23.01.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಹಿಮ್ಮಡಿ ಮುಳ್ಳು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ಶ್ರೀ ಮೂಲ ಅರ್ಕ ಮಹಾಗಣಪತಿ ದೇವಸ್ಥಾನ:** 31ನೇ ವಾರ್ಷಿಕೋತ್ಸವ, ಸಂಜೆ 6.30ಕ್ಕೆ ಫಲ ಸಮರ್ಪಣೆ, ಗುರು ಪ್ರಾರ್ಥನೆ, ಯಾಗಶಾಲ ಪ್ರವೇಶ, ಗಣಪತಿ ಪೂಜೆ, ಪುಣ್ಯಾಹ, ಋತ್ವಿಗ್ವರಣನೆ, ಕಲಶಸ್ಥಾಪನೆ, ಅಘೋರಾಸ್ತ್ರ, ವಾಸ್ತು, ರಾಕ್ಷೋಘ್ನ ಹೋಮ, ದಿಕ್ಪಾಲಕ ಬಲಿ, ಸ್ಥಳ: ಅರ್ಕ ಫೌಂಡೇಷನ್, ಬೋಗಾದಿ –ಗದ್ದಿಗೆ ರಸ್ತೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮೈಸೂರು ಶೋ ರೂಮ್, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ :** ಪರಾಕ್ರಮ ದಿವಸ್ ಆಚರಣೆ ಅಂಗವಾಗಿ ಸುಭಾಷ್ ಚಂದ್ರ ಬೋಸ್‌ರವರ ಭಾವಚಿತ್ರ ಬಿಡಿಸುವ ರಾಜ್ಯ ಮಟ್ಟದ ಸ್ಪರ್ಧೆ, ಸ್ಥಳ: ಮಾಧವ ಕೃಪಾ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ :** ಬೆಳಗ್ಗೆ 10ಕ್ಕೆ ಕನ್ನಡ ಜೈನ ಮಹಾಕಾವ್ಯಗಳ ತಾತ್ವಿಕ ಜಿಜ್ಞಾಸೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ವಿದ್ವಾಂಸ ಪ್ರೊ. ಕೃಷ್ಣಮೂರ್ತಿ ಹನೂರು, ಉಪಸ್ಥಿತರು : ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ಎಸ್.ಡಿ. ಶಶಿಕಲಾ; ಬೆಳಗ್ಗೆ 10.30 ರಿಂದ ಪ್ರೊ. ಕೃಷ್ಣಮೂರ್ತಿ ಹನೂರು ಅವರಿಂದ ಪಂಪನ ವಿಕ್ರಮಾರ್ಜುನ ವಿಜಯ ಕುರಿತು ಉಪನ್ಯಾಸ, ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಸೆಮಿನಾರ್ ಹಾಲ್, ಬೆಳಗ್ಗೆ 10ಕ್ಕೆ.

■ **ಭವಾನಿ ಅಸೋಸಿಯೇಟ್ಸ್ :** ಚಾರ್ಟರ್ಡ್ ಅಕೌಂಟೆಂಟ್ ಕೆ. ಕೇಶವ ಡೋಂಗ್ರೆ ಅವರಿಂದ ಟಿಡಿಎಸ್ ಆನ್ ಸ್ಯಾಲರೀಸ್ ಕುರಿತು ಕಾರ್ಯಾಗಾರ, ಭವಾನಿ ಅಸೋಸಿಯೇಟ್ಸ್‌ನ ಎನ್.ಡಿ. ಶ್ರೀನಿವಾಸ್ ಅವರಿಂದ ಫೈಲಿಂಗ್ ಆಫ್ ಟಿಡಿಎಸ್ ಸ್ಟೇಟ್‌ಮೆಂಟ್ಸ್ ಕುರಿತು ಉಪನ್ಯಾಸ, ಸ್ಥಳ: ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಸೇಂಟ್ ಫಿಲೋಮಿನಾ ಕಾಲೇಜು :** ಆರೋಗ್ಯ ಮತ್ತು ಸಾಮಾಜಿಕ ಭದ್ರತೆ :ವಯೋವೃದ್ಧರ ಅಗತ್ಯಗಳನ್ನು ಪರಿಹರಿಸುವ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಡಾ. ಲೂರ್ದ್‌ಪ್ರಸಾದ್, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ರವಿ ಜೆ.ಡಿ. ಸಾಲ್ಡಾನಾ, ರೆ.ಫಾ. ಜ್ಞಾನಪ್ರಕಾಶಂ, ಡೇವಿಡ್ಸ್ ಸಗಾಯರಾಜ್, ಡಾ. ನೂರ್ ಮುಬಾಶೀರ್, ಸ್ಥಳ:ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಪ್ರಭಾವಿಸಿದ ಸಂತ ಕಬೀರ್ ದಾಸ್ ಚಿಂತನೆಗಳ ತಾತ್ವಿಕ ನೆಲೆಗಳು ಕುರಿತು ಸಂದರ್ಶಕ ಪ್ರಾಧ್ಯಾಪಕ ಪ್ರೊ. ರಹಮತ್ ತರೀಕೆರೆ ಅವರಿಂದ ವಿಶೇಷ ಉಪನ್ಯಾಸ, ಅಧ್ಯಕ್ಷತೆ : ತತ್ತ್ವಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಡಾ.ಎಂ.ಡ್ಯಾನಿಯಲ್, ಸ್ಥಳ: ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ಕೆಎಂಪಿಕೆ ಟ್ರಸ್ಟ್ :** ಸ್ವಾತಂತ್ರ್ಯ ಹೋರಾಟಗಾರ ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿಯ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಾದೇಸ್ವಾಮಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮಂಡಿ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ನಾಗೇಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರ ಆವರಣ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಸ್ವದೇಶಿ ಜಾಗರಣ ಮಂಚ್ :** ಸ್ವದೇಶಿ ಮೇಳ–2025, ಮಧ್ಯಾಹ್ನ 2.30 ರಿಂದ ಮಂಡ್ಯದ ಸಾವಯವ ರೈತ ವಿಕಾಸ್ ಬೂದನೂರು ಅಣಬೆ ಕೃಷಿ ತರಬೇತಿ ಶಿಬಿರ, ಸಂಜೆ 5 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮೈಸೂರು ಮಹಾಲಿಂಗ ಮತ್ತು ಪುರುಷೋತ್ತಮ್ ತಂಡದವರಿಂದ ಸುಗಮ ಸಂಗೀತ, ಸಂಜೆ 7 ರಿಂದ ಬೆಂಗಳೂರಿನ ರಂಗಪುತ್ಥಳಿ ತಂಡದಿಂದ ರಾಮಾಯಣ, ಸೂತ್ರ ಸಲಾಕೆ ಬೊಂಬೆಯಾಟ, ನಿರ್ದೇಶನ : ಎಂ.ಆರ್. ಶ್ರೀನಿವಾಸ್, ಸ್ಥಳ: ಮಹಾರಾಜ ಕಾಲೇಜು ಮೈದಾನ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ :** 27ನೇ ವಾರ್ಷಿಕ ಸಂಗೀತೋತ್ಸವ, ಸಂಗೀತ ಕಾರ್ಯಾಗಾರದ ಶಿಬಿರಾರ್ಥಿಗಳಿಂದ ಪ್ರಸ್ತುತಿ, ಮೊಸಳೆ ಕೃಷ್ಣಮೂರ್ತಿ ಸ್ಮಾರಕ ರಾಗ ತಾನ ಪಲ್ಲವಿ ಸ್ಪರ್ಧೆ ವಿಜೇತರಿಂದ ಗಾಯನ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಗಾನಭಾರತೀ :** ಶ್ರೀಮತಿ ಬೆಳ್ಳೂರು ಲಕ್ಷ್ಮಮ್ಮ ಮತ್ತು ತಿರುಪೂರು ನರಸಿಂಹಾಚಾರ್ ಸ್ಮರಣಾರ್ಥ ವಿದುಷಿ ಅಮೃತ ವೆಂಕಟೇಶ್ ಅವರಿಂದ ಗಾಯನ, ವಿದುಷಿ ವೈಭವ್ ರಮಣಿ–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಶ್ರೇಯಾ, ಎ.ಎಸ್.ನಾಗಲಕ್ಷ್ಮಿ, ವ್ಯಾಖ್ಯಾನ–ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 9.05 ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.10 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಚಂದ್ರಶೇಖರನ್ ಮತ್ತು ಕುಮಾರಿ ಭಾರತಿ–ಯುಗಳ ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' – ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ತೆಂಗಿನ ಬೇಸಾಯ ಹಾಗೂ ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ–ಚೆನ್ನಕೇಶವ ರೈತ ಉತ್ಪಾದಕರ ಕಂಪನಿಯ ಅಧ್ಯಕ್ಷರಾದ ಜವರಾಯಿಗೌಡ ಹಾಗೂ ಹೊನ್ನೇರು ರೈತ ಉತ್ಪಾದಕರ ಕಂಪನಿಯ ಅಧ್ಯಕ್ಷರಾದ ಜಗದೀಶ್‌ಬಾಬು, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ– 'ರಾಷ್ಟ್ರೀಯ ಹೆಣ್ಣುಮಗುವಿನ ದಿನ' ಕುರಿತ ವಿಶೇಷ ಚಿತ್ರಚಿತ್ತಾರ ಕಾರ್ಯಕ್ರಮ. ಪ್ರಸ್ತುತಪಡಿಸುತ್ತಾರೆ–ಮಂಡ್ಯ ಜಿಲ್ಲೆಯ ಚಿನಕುರಳಿಯ ಎಸ್.ಟಿ.ಜಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಶ್ರಾವಣಿ. ಜಿ., 9.30 ಕನ್ನಡ ಭಾರತಿ, 10.00 ನಾಟಕ 'ಜಗಳಾನುಬಂಧ', ರಚನೆ– ಬೇಲೂರು ರಾಮಮೂರ್ತಿ, ನಿರ್ಮಾಣ–ಉಮೇಶ್. ಎಸ್. ಎಸ್., 10.30 ಸವಿನೆನಪು– ಹಳೆಯ ಕನ್ನಡ ಚಿತ್ರಗೀತೆಗಳು

ದೇಸಿ ಉತ್ಪನ್ನಗಳ ಸ್ವದೇಶಿ ಮೇಳಕ್ಕೆ ಚಾಲನೆ

ಅಗತ್ಯ ವಸ್ತು ಉತ್ಪಾದನೆ ಕಲೆ ಭಾರತಕ್ಕೆ ಕರಗತ

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್

ಮೈಸೂರು,ಜ.22(ಪಿಎಂ)– ಅಗತ್ಯ ವಸ್ತುಗಳನ್ನು ಸ್ವಯಂ ಆಗಿ ಉತ್ಪಾದಿಸಿಕೊಳ್ಳುವ ಕಲೆ ಭಾರತಕ್ಕೆ ಸಹಸ್ರಾರು ವರ್ಷಗಳಿಂದಲೂ ಸಹಜವಾಗಿಯೇ ಕರಗತವಾಗಿದೆ ಎಂದು ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಹೇಳಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸ್ವದೇಶಿ ಜಾಗರಣ ಮಂಚ್ ಕರ್ನಾಟಕ ವತಿಯಿಂದ ಜ.26ರವರೆಗೆ ಹಮ್ಮಿಕೊಂಡಿರುವ ಸ್ವದೇಶಿ ಮೇಳ–2025ರ (ಸ್ಥಳೀಯ ಮತ್ತು ದೇಸಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ) ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಬುಧವಾರ ಮಾತನಾಡಿದರು.

ಭಾರತ ಕ್ರಿಯಾಶೀಲ ದೇಶ. 30 ವರ್ಷಗಳ ಹಿಂದೆ ಒಬ್ಬ ಅಂಕಣಕಾರರೊಬ್ಬರು ಬರೆದಿದ್ದು ನೆನಪಾಗುತ್ತಿದೆ. ಭಾರತದ ಹಳ್ಳಿ–ಪಟ್ಟಣಗಳಲ್ಲಿ ಉತ್ಪಾದನೆಯಾಗುವ ಉತ್ಪನ್ನಗಳ ಗುಣಮಟ್ಟ ಕಾಯ್ದುಕೊಳ್ಳಲು ಸರ್ಕಾರಗಳು ಸಹಕಾರ ನೀಡುವ ಜೊತೆಗೆ ರಫ್ತಿಗೆ ಉತ್ತೇಜಿಸಿದ್ದರೆ, ಅವುಗಳು ದೇಶದ ವಿವಿಧ ಭಾಗಗಳಿಗೆ ಮಾತ್ರವಲ್ಲದೆ, ವಿದೇಶಕ್ಕೂ ಎಷ್ಟೋ ವರ್ಷಗಳ ಹಿಂದೆಯೇ ತಲುಪುತ್ತಿದ್ದವು. ಆ ಮೂಲಕ ದೇಶದ ಹಳ್ಳಿಗಳ ಸೃಜನಶೀಲ ಕಾಯಕ ಸಂಸ್ಕೃತಿಯಿಂದ ಉತ್ಪಾದನೆಯಾದ ಸ್ವದೇಶಿ ವಸ್ತುಗಳು ವಿದೇಶದಲ್ಲಿ ಪ್ರಾಮುಖ್ಯತೆ ಪಡೆಯುತ್ತಿದ್ದವು ಎಂದು ಅವರು ಬರೆದಿದ್ದರು ಎಂದು ನೆನಪಿಸಿಕೊಂಡರು.

ಚೀನಾ ಮಾದರಿ ಅಧ್ಯಯನ ಅಗತ್ಯ: ಜಾಗತಿಕ ಮಾರುಕಟ್ಟೆ ಸೆಳೆದಿಟ್ಟುಕೊಂಡಿರುವ ಸಂಬಂಧ ಚೀನಾ ಮಾದರಿಯನ್ನು ಅಧ್ಯಯನ ನಡೆಸುವ ಮೂಲಕ ನಮ್ಮ ದೇಶದ ವಿಶೇಷ ಉತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡುವ ಬಗ್ಗೆ ಚಿಂತನೆ ಮಾಡಬೇಕಿದೆ. ನೂರಾರು ವರ್ಷಗಳ ಹಿಂದೆ ನಮ್ಮ ದೇಶದ ಮಸಾಲೆ ಪದಾರ್ಥ, ಖಾದ್ಯ, ಬಟ್ಟೆ ಮೊದಲಾದ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಲು ವಿದೇಶಿಯರು ಭಾರತದತ್ತ ಧಾವಿಸುತ್ತಿದ್ದರು. ಇದೀಗ ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿ ವಿಶ್ವಕ್ಕೇ ಆಕರ್ಷಣೆಯಾಗಿದೆ ಎಂದರು.

ದೇಶದ ಯುವ ಜನರಲ್ಲಿ ಉದ್ಯಮಶೀಲತೆ ಬೆಳೆಸಲು ಗಮನ ನೀಡಬೇಕಿದೆ. ಕೃಷಿ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ನಮ್ಮ ಯುವ ಜನರು ತೊಡಗಿಸಿಕೊಳ್ಳಲು ಉತ್ತೇಜನ ನೀಡಬೇಕಿದೆ. ರಫ್ತು ಸಂಬಂಧ ಸಾಮರ್ಥ್ಯ, ಜ್ಞಾನ ಹಾಗೂ ಯಾವ ದೇಶದಲ್ಲಿ ಯಾವ ವಸ್ತು ಯಾವ ಕಾಲದಲ್ಲಿ ಅವಶ್ಯ ಎಂಬ ಜ್ಞಾನವನ್ನು ನಮ್ಮ ಯುವ ಜನರಿಗೆ ಕೊಡಬೇಕು ಎಂದು ಹೇಳಿದರು.

ಮೇಳ ಉದ್ಘಾಟಿಸಿದ ಅಯೋಧ್ಯೆ ಬಾಲರಾಮ ಮೂರ್ತಿ ಶಿಲ್ಪಿ ಅರುಣ್ ಯೋಗಿರಾಜ್ ಮಾತನಾಡಿ, ನಮ್ಮ ದೇಶ ಅತ್ಯಂತ ಸಂಪತ್ಭರಿತವಾಗಿದ್ದು, ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಅರಿಯಬೇಕಿದೆ. ಇಂತಹ ಸ್ವದೇಶಿ ಮೇಳದಿಂದ ನಮ್ಮ ಗ್ರಾಮೀಣ ಪ್ರದೇಶದ ಉತ್ಪನ್ನಗಳಿಗೆ ಮಾರುಕಟ್ಟೆ ದೊರೆಯಲಿದೆ. ಆರ್ಥಿಕತೆಯಲ್ಲಿ ದೇಶ ಬಲಿಷ್ಠವಾಗಬೇಕೆಂದು ನಮ್ಮ ಪ್ರಧಾನಿಗಳ ದೊಡ್ಡ ಕನಸು. ಅದು ನನಸಾಗಲು ಈ ಸ್ವದೇಶಿ ಮೇಳ ದೊಡ್ಡ ಶಕ್ತಿಯಾಗಲಿದೆ. ಜೊತೆಗೆ ವಿದೇಶಿ ವಸ್ತುಗಳ ಅವಲಂಬನೆ ಇಳಿಕೆಯಾಗಲಿದೆ. ದೇಸಿ ಉತ್ಪನ್ನಗಳಿಗೆ ಬೆಂಬಲಿಸುವ ಸಂಕಲ್ಪ ಮಾಡೋಣ ಎಂದರು.

ಮುದ್ರಾದಡಿ ಕೇಂದ್ರದಿಂದ ಜಿಲ್ಲೆಗೆ 9 ಸಾವಿರ ಕೋಟಿ: ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ಸ್ವಯಂ ಉದ್ದಿಮೆಗೆ ಉತ್ತೇಜನ ನೀಡುತ್ತಿದೆ. ಮೊನ್ನೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಪಂನಲ್ಲಿ ದಿಶಾ ಸಭೆ ನಡೆಯಿತು. ಈ ವೇಳೆ ಲೀಡ್ ಬ್ಯಾಂಕ್ ವ್ಯವಸ್ಥಾಪಕರು ನೀಡಿದ ವರದಿ ಪ್ರಕಾರ ನರೇಂದ್ರ ಮೋದಿ ಸರ್ಕಾರ ಕಳೆದ ನಾಲ್ಕು ವರ್ಷಗಳಲ್ಲಿ ಮುದ್ರಾ ಯೋಜನೆಯಡಿ ಮೈಸೂರು ಜಿಲ್ಲೆಗೆ 9 ಸಾವಿರ ಕೋಟಿ ರೂ. ನೀಡಿದೆ ಎಂದು ತಿಳಿಸಿದರು.

ಇದೇ ವೇಳೆ ಮೈಸೂರಿನ ಉದ್ಯಮಿಗಳಾದ ವಿಶ್ವಪ್ರಸಾದ್ ಆಳ್ವಾ, ಗೋಪಾಲಕೃಷ್ಣ, ತಿಲಕ್, ಶಿವಕುಮಾರ್, ರಾಮ್‌ಜಿ ಅವರಿಗೆ ದತ್ತೋಪಂತ್ ಠೇಂಗಡಿ ಸ್ವದೇಶಿ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಸ್ವದೇಶಿ ಮೇಳದ ಅಖಿಲ ಭಾರತೀಯ ಪ್ರಮುಖ್ ಸುಚ್ಚಿಂದ್ರ ಪಡಿ ಯಾರ್, ಸ್ವದೇಶಿ ಜಾಗರಣ ಮಂಚ್‌ನ ಅಖಿಲ ಭಾರತ ಮುಖ್ಯ ಸಂಘಟಕ ಸತೀಶ್‌ಕುಮಾರ್, ಸ್ವಾವಲಂಬಿ ಭಾರತ್ ಅಭಿಯಾನದ ಕ್ಷೇತ್ರೀಯ ಸಮನ್ವಯಕ ಎನ್.ಆರ್.ಮಂಜುನಾಥ್ ಮತ್ತಿತರರು ಹಾಜರಿದ್ದರು.


ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಸ್ವದೇಶಿ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಮೇಳದ ಮಳಿಗೆಗಳನ್ನು ಗಣ್ಯರು ವೀಕ್ಷಿಸಿದರು.

ಮೇಳದಲ್ಲಿ 230 ಮಳಿಗೆ...

ಸ್ವದೇಶಿ ಮೇಳದಲ್ಲಿ ಬಟ್ಟೆ–ಬರೆ, ಪೂಜಾ ಸಾಮಗ್ರಿ, ಗೃಹೋಪಯೋಗಿ ವಸ್ತುಗಳು, ಕರಕುಶಲ ವಸ್ತುಗಳು, ತಿಂಡಿ ತಿನಿಸು, ಆಹಾರ ಮಳಿಗೆಗಳು ಇದ್ದು, ಜ.26ರವರೆಗೆ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು. ಪ್ರವೇಶ ಉಚಿತವಾಗಿದ್ದು, ಒಟ್ಟು 230 ಮಳಿಗೆಗಳನ್ನು ತೆರೆಯಲಾಗಿದೆ. ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಚೀನಾ ಉತ್ಪನ್ನ ತಿರಸ್ಕರಿಸಿ, ದೇಶಿ ಉತ್ಪನ್ನ ಬಳಸಿ

ಮೈಸೂರು,ಜ.22(ಪಿಎಂ)– ಚೀನಾದವರು ಭಾರತಕ್ಕೆ ಗಡಿಯಲ್ಲಿ ತೊಂದರೆ ಕೊಡುತ್ತಿದ್ದು, ಹಾಗಾಗಿ ಅಲ್ಲಿನ ಉತ್ಪನ್ನಗಳನ್ನು ತಿರಸ್ಕರಿಸಿ ದೇಸಿ ಉತ್ಪನ್ನಗಳನ್ನು ಬಳಸಬೇಕೆಂದು ಸ್ವದೇಶಿ ಜಾಗರಣ ಮಂಚ್‌ನ ಅಖಿಲ ಭಾರತ ಮುಖ್ಯ ಸಂಘಟಕ ಸತೀಶ್‌ಕುಮಾರ್ ಹೇಳಿದರು.

ಹಿಂದಿ ಭಾಷೆಯಲ್ಲಿ ಮುಖ್ಯ ಭಾಷಣ ಮಾಡಿದ ಅವರು, ವಿಚಾರ, ಉದ್ಯಮ ಹಾಗೂ ಉದ್ಯೋಗವನ್ನು ದೇಶದಲ್ಲೇ ಕಂಡುಕೊಳ್ಳುವುದು ಸ್ವದೇಶಿ ಮೇಳದ ಉದ್ದೇಶವಾಗಿದೆ. ಉದ್ಯಮಿಗಳಾಗಬೇಕು, ಸ್ವಯಂ ಉದ್ಯೋಗ ಕಂಡುಕೊಳ್ಳಬೇಕೆಂಬುದು ಈ ನೆಲದಲ್ಲಿಯೇ ಇದೆ. ಆದರೆ ಬ್ರಿಟಿಷರು ಪರಿಚಯಿಸಿದ ಶಿಕ್ಷಣ ನೀತಿ ನಮ್ಮನ್ನು ಮತ್ತೊಬ್ಬರ ಬಳಿ ಉದ್ಯೋಗ ಕೇಳುವಂತೆ ಮಾಡಿದೆ. ದೇಶದ ಅಂಬಾನಿ–ಅದಾನಿ, ಬಾಬಾ ರಾಮದೇವ್ ಬಹಳ ಓದಿಕೊಂಡವರಲ್ಲ. ಆದರೆ ಸಾವಿರಾರು ಮಂದಿಗೆ ಉದ್ಯೋಗ ನೀಡಿದ್ದಾರೆ ಎಂದು ತಿಳಿಸಿದರು.

ರಸ್ತೆ ಸುರಕ್ಷತಾ ಜಾಗೃತಿ



ಚಿಕ್ಕಗಡಿಯಾರ ಎದುರು ರಸ್ತೆ ಸುರಕ್ಷತಾ ಜಾಗೃತಿ ಮೂಡಿಸಲಾಯಿತು.

ಮೈಸೂರು, ಜ.22(ಎಂಕೆ)– ಮೈಸೂರಿನ ಚಿಕ್ಕಗಡಿಯಾರ(ವಾಸವಿ ಸರ್ಕಲ್) ಎದುರು ಬೀದಿ ನಾಟಕದ ಮೂಲಕ ರಸ್ತೆ ಸುರಕ್ಷತಾ ಜಾಗೃತಿ ಮೂಡಿಸಲಾಯಿತು.

ದೇವರಾಜ ಸಂಚಾರ ಪೊಲೀಸ್ ಠಾಣೆ ವತಿಯಿಂದ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಅನಿಕೇತನ ಕಲಾ ಬಳಗದ ಕಲಾವಿದರು ಬೀದಿ ನಾಟಕ ಪ್ರದರ್ಶನ ನೀಡಿ ಸಂಚಾರ ನಿಯಮಗಳ ಉಲ್ಲಂಘನೆಯಿಂದಾಗುವ ತೊಂದರೆಗಳ ಬಗ್ಗೆ ತಿಳಿಸಿದರು.

ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಬಳಸಿ, ಕಾರು ಚಾಲಕರು ಸೀಟ್ ಬೆಲ್ಟ್ ಹಾಕಿಕೊಳ್ಳಿ, ಅಪಘಾತ ಸಂಚಾರ ನಿಯಮಗಳನ್ನು ಪಾಲಿಸಿ ಎಂದು ಅಭಿನಯದ ಮೂಲಕ ನೆರೆದಿದ್ದವರಲ್ಲಿ ಮನವರಿಕೆ ಮಾಡಿಕೊಡಲಾಯಿತು. ಸಬ್‌ಇನ್‌ಸ್ಪೆಕ್ಟರ್ ಚಂದ್ರಶೇಖರ್, ಎಎಸ್‌ಐ ಪ್ರಕಾಶ್, ಸಿಬ್ಬಂದಿಗಳಾದ ಎಸ್.ಮಹೇಶ್, ಜಗದೀಶ್, ಅನಿಕೇತನ ಕಲಾ ಬಳಗದ ಸಲ್ಮಾ ಮತ್ತಿತರರಿದ್ದರು.

ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಗೆ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಬುಧವಾರ ಚಾಲನೆ ನೀಡಿದರು.

ಮೈಸೂರು, ಜ.22(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಮಾನಸಗಂಗೋತ್ರಿ ಎಸ್‌ಡಿಎನ್ ಆರ್‌ಡಬ್ಲ್ಯೂ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಿರುವ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ–2024–25ಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಆಟದಲ್ಲಿ ಸೋಲು–ಗೆಲುವು ಸಹಜ. ಇವರೆಡನ್ನೂ ಸಹಜವಾಗಿ ಸ್ವೀಕಾರ ಮಾಡುವವರೇ ನೈಜ ಕ್ರೀಡಾಪಟು. ಸೋತವರು ನಿರಾಸೆಗೊಳ್ಳಬಾರದು. ಸೋಲನ್ನೇ ಅನುಭವವಾಗಿ ತಗೆದುಕೊಂಡು ಮುಂದಿನ ಗೆಲುವಿಗೆ ದಾರಿ ಮಾಡಿಕೊಳ್ಳಬೇಕು. ಎಲ್ಲ ಕ್ರೀಡಾಪಟುಗಳು ಕ್ರೀಡಾಸ್ಫೂರ್ತಿ ಮೆರೆಯಬೇಕು. ಕ್ರೀಡೆಯನ್ನು ಉಜ್ವಲಗೊಳಿಸಬೇಕು. ಭಾವೈಕ್ಯತೆಯನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಹಲವು ದಶಕಗಳ ಹಿಂದೆ ಯಾವುದೇ ಕ್ರೀಡೆಯಲ್ಲೂ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿರಲಿಲ್ಲ. ಆದರೆ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು, ಮಹಿಳಾ ಕಾಲೇಜಿನ ಉಪನ್ಯಾಸಕರು ತಮ್ಮ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ನೀಡಿ, ಕ್ರೀಡೆಯಲ್ಲಿ ಭಾಗವಹಿಸುವಂತೆ ಮಾಡಿದರು. ಅಂದು ಅವರು ಮಾಡಿದ ಉತ್ತಮ ಕಾರ್ಯದಿಂದ ಮಹಿಳೆಯರು ಈಗ ಎಲ್ಲಾ ಕ್ರೀಡೆಯಲ್ಲಿಯೂ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮೈವಿವಿ ಹಣಕಾಸು ಅಧಿಕಾರಿ ಎಸ್.ರೇಖಾ ಮಾತನಾಡಿ, ಕಾಲದಿಂದಲೂ ಕ್ರೀಡಾಕ್ಷೇತ್ರದಲ್ಲಿ ಪುರುಷರಿಗೆ ಸಿಂಹಪಾಲು ದೊರೆಯುತ್ತಿದೆ. ಆಟದ ವಿಷಯದಲ್ಲಿ ಆಗಲಿ, ಪ್ರಾಯೋಜಕತ್ವದಲ್ಲೇ ಆಗಲಿ, ಜಾಹೀರಾತು ನೀಡುವುದರಲ್ಲೇ ಆಗಲಿ ಎಲ್ಲರೂ ಪುರುಷರ ವಿಭಾಗಕ್ಕೆ ಹೆಚ್ಚು ಆಸಕ್ತಿ ತೋರುತ್ತಾರೆ. ಇದರಿಂದಾಗಿ ಮಹಿಳಾ ವಿಭಾಗವು ಗೌಣವಾಗುತ್ತಿದೆ. ಇಂತಹ ವಾತಾವರಣ ತೊಲಗಬೇಕಾಗಿದೆ. ಮಹಿಳಾ ವಿಭಾಗಕ್ಕೂ ಹೆಚ್ಚು–ಹೆಚ್ಚು ಪ್ರೋತ್ಸಾಹ ನೀಡಿದರೆ ಇನ್ನೂ ಹೆಚ್ಚಿನ ಸಾಧನೆಯ ಜೊತೆಗೆ ಸಬಲೀಕರಣವಾಗುತ್ತದೆ. ಮುಂದಿನ ದಿನಗಳಲ್ಲಾದರೂ ಮಹಿಳೆಯರಿಗೂ ಸಮಾನ ಅವಕಾಶ ದೊರೆಯುವ ವಾತಾವರಣ ನಿರ್ಮಾಣವಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಮಹಿಳಾ ಕ್ರಿಕೆಟ್ ಜನಪ್ರಿಯ: ಮಹಿಳಾ ಕ್ರಿಕೆಟ್ ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ. ಇಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳು ಮುಂದೆ ಸ್ಮೃತಿ ಮಂದಾನ, ರಾಜೇಶ್ವರಿ ಗಾಯಕ್ವಾಡ್, ಮಿಥಾಲಿ ರಾಜ್ ಅವರಂತೆ ದೇಶವನ್ನು ಪ್ರತಿನಿಧಿಸುವ ಅವಕಾಶ ಪಡೆದುಕೊಳ್ಳಬಹುದು. ಆದ್ದರಿಂದ ಎಲ್ಲರೂ ಉತ್ತಮ ಪ್ರದರ್ಶನ ನೀಡಲು ಪ್ರಯತ್ನಿಸಬೇಕು. ಕ್ರೀಡೆಯ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಬೇಕು ಎಂದರು.

ಆಕರ್ಷಕ ಪಥ ಸಂಚಲನ, ಮೈದಾನ ಸಜ್ಜು: ಕ್ರಿಕೆಟ್ ಪಂದ್ಯಾವಳಿ ಉದ್ಘಾಟನೆಗೂ ಮುನ್ನ ಕೇರಳ, ಆಂಧ್ರ, ತೆಲಂಗಾಣ, ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಮಹಿಳಾ ತಂಡದ ಆಟಗಾರ್ತಿಯರು ಆಕರ್ಷಕ ಪಥಸಂಚಲನ ನಡೆಸಿದರು. ಪಂದ್ಯಾವಳಿಯಲ್ಲಿ ದಕ್ಷಿಣ ಭಾರತದ 43 ವಿಶ್ವವಿದ್ಯಾನಿಲಯಗಳ ಮಹಿಳಾ ಕ್ರಿಕೆಟ್ ತಂಡಗಳು ಭಾಗವಹಿಸಿದ್ದು, ಪಂದ್ಯಾವಳಿಗಾಗಿ ಮಾನಸಗಂಗೋತ್ರಿಯ ಗಂಗೋತ್ರಿ ಗ್ಲೇಡ್ಸ್, ಎಸ್‌ಜೆಸಿಇ ಕ್ಯಾಂಪಸ್, ಮಹಾರಾಜ ಕಾಲೇಜು, ಮಾನಸ ಗಂಗೋತ್ರಿ ಕಾಫಿ ಬೋರ್ಡ್, ಮಾನಸ ಗಂಗೋತ್ರಿಯ ವಿಲೇಜ್ ಹಾಸ್ಟೆಲ್ ಮೈದಾನಗಳನ್ನು ಸಜ್ಜುಗೊಳಿಸಲಾಗಿದೆ.

ಡಿಸಿಪಿ ಎಂ.ಮುತ್ತುರಾಜ್, ಹಿರಿಯ ಕೆಎಎಸ್ ಅಧಿಕಾರಿ ವಿ.ಆರ್.ಶೈಲಜಾ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಾದೇಶು, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಸಂಘಟನಾ ಕಾರ್ಯದರ್ಶಿ ಡಾ.ಸಿ.ವೆಂಕಟೇಶ್ ಮತ್ತಿತರರಿದ್ದರು.

ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಸುಲಭ ಜಯ

ಅಭಿಷೇಕ್ 20 ಎಸೆತಗಳಲ್ಲಿ ಫಿಫ್ಟಿ; ಇಂಗ್ಲೆಂಡ್ ವಿರುದ್ಧ ಭಾರತಕ್ಕೆ 7 ವಿಕೆಟ್ ಜಯ



ಕೋಲ್ಕತ್ತ ಜ.22– ಬೌಲರ್‌ಗಳ ಸಾಂಘಿಕ ದಾಳಿ ಮತ್ತು ಅಭಿಷೇಕ್ ಶರ್ಮಾ ಅವರ ಬಿರುಸಿನ ಅರ್ಧಶತಕದ ನೆರವಿನಿಂದ ಟೀಮ್ ಇಂಡಿಯಾ, ಪ್ರವಾಸಿ ಇಂಗ್ಲೆಂಡ್ ವಿರುದ್ಧ ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ನಡೆದ ಮೊದಲ ಟ್ವೆಂಟಿ–20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಏಳು ವಿಕೆಟ್ ಅಂತರದ ಭರ್ಜರಿ ಗೆಲುವು ದಾಖಲಿಸಿದೆ. ಇದರೊಂದಿಗೆ ಐದು ಪಂದ್ಯಗಳ ಟಿ20 ಸರಣಿಯಲ್ಲಿ 1–0 ಅಂತರದ ಮುನ್ನಡೆ ದಾಖಲಿಸಿದೆ. ಭಾರತ 12.5 ಓವರ್‌ಗಳಲ್ಲೇ ಗುರಿ ತಲುಪಿತು.

133 ರನ್‌ಗಳ ಸಾಧಾರಣ ಗುರಿ ಬೆನ್ನಟ್ಟಿದ ಭಾರತಕ್ಕೆ ಅಭಿಷೇಕ್ ಶರ್ಮಾ ನೆರವಾದರು. ಅಭಿಷೇಕ್ 20 ಎಸೆತಗಳಲ್ಲೇ ಅರ್ಧಶತಕ ಸಾಧನೆ ಮಾಡಿದರು. ಅಂತಿಮವಾಗಿ 34 ಎಸೆತಗಳಲ್ಲಿ 79 ರನ್ ಗಳಿಸಿ ಅಬ್ಬರಿಸಿದರು. ಅಭಿಷೇಕ್ ಇನಿಂಗ್ಸ್‌ನಲ್ಲಿ ಎಂಟು ಸಿಕ್ಸರ್ ಹಾಗೂ ಐದು ಬೌಂಡರಿಗಳು ಸೇರಿದ್ದವು.

ನಾಯಕ ಸೂರ್ಯಕುಮಾರ್ ಯಾದವ್ ಶೂನ್ಯಕ್ಕೆ ಔಟ್ ಆದರೆ ಸಂಜು ಸ್ಯಾಮ್ಸನ್ 26 ರನ್‌ಗಳ ಉಪಯುಕ್ತ ಕೊಡುಗೆ ನೀಡಿದರು.

ಇಂಗ್ಲೆಂಡ್ 132ಕ್ಕೆ ಆಲೌಟ್: ಈ ಮೊದಲು ವರುಣ್ ಚಕ್ರವರ್ತಿ (23ಕ್ಕೆ 3), ಅರ್ಷದೀಪ್ ಸಿಂಗ್ (17ಕ್ಕೆ 2) ಸೇರಿದಂತೆ ಭಾರತೀಯ ಬೌಲರ್‌ಗಳ ಸಾಂಘಿಕ ದಾಳಿಗೆ ಸಿಲುಕಿರುವ ಇಂಗ್ಲೆಂಡ್, ಇಲ್ಲಿ ನಡೆಯುತ್ತಿರುವ ಮೊದಲ ಟ್ವೆಂಟಿ–20 ಅಂತರರಾಷ್ಟ್ರೀಯ ಪಂದ್ಯದಲ್ಲಿ 132 ರನ್‌ಗಳಿಗೆ ಆಲೌಟ್ ಆಯಿತು.

ಈಡನ್ ಗಾರ್ಡನ್ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಮೊದಲು ಫೀಲ್ಡಿಂಗ್ ಆಯ್ದುಕೊಂಡರು. ಇನಿಂಗ್ಸ್‌ನ ಮೊದಲ ಓವರ್‌ನಲ್ಲೇ ಫಿಲಿಪ್ ಸಾಲ್ಟ್(0)ವಿಕೆಟ್ ಕಬಳಿಸಿದ ಅರ್ಷದೀಪ್ ಸಿಂಗ್ ಆಘಾತ ನೀಡಿದರು. ಇದಾದ ಬೆನ್ನಲ್ಲೇ ಬೆನ್ ಡಕೆಟ್ (4) ಅವರಿಗೂ ಪೆವಿಲಿಯನ್ ದಾರಿ ತೋರಿಸಿದರು.

ಬಳಿಕ ದಾಳಿಗಿಳಿದ ವರುಣ್ ಚಕ್ರವರ್ತಿ ಮೋಡಿ ಮಾಡಿದರು. ಹ್ಯಾರಿ ಬ್ರೂಕ್ (17) ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ (0) ಅವರನ್ನು ಹೊರದಬ್ಬಿದರು. ಅವರಿಗೆ ಹಾರ್ದಿಕ್ ಪಾಂಡ್ಯ ಹಾಗೂ ಅಕ್ಷರ್ ಪಟೇಲ್ ಅವರಿಂದಲೂ ಉತ್ತಮ ಬೆಂಬಲ ದೊರಕಿತು.

ಏತನ್ಮಧ್ಯೆ ಏಕಾಂಗಿ ಹೋರಾಟ ನೀಡಿದ ಇಂಗ್ಲೆಂಡ್ ನಾಯಕ ಜೋಸ್ ಬಟ್ಲರ್, ಸಮಯೋಚಿತ ಅರ್ಧಶತಕದ ಸಾಧನೆ ಮಾಡಿದರು. ಆದರೆ ಅಪಾಯಕಾರಿಯಾಗಿ ಮುನ್ನುಗ್ಗುತ್ತಿದ್ದ ಬಟ್ಲರ್ ಓಟಕ್ಕೆ ಚಕ್ರವರ್ತಿ ಬ್ರೇಕ್ ಹಾಕಿದರು. ಬಟ್ಲರ್ 44 ಎಸೆತಗಳಲ್ಲಿ ಎಂಟು ಬೌಂಡರಿ ಹಾಗೂ ಎರಡು ಸಿಕ್ಸರ್ ನೆರವಿನಿಂದ 68 ರನ್ ಗಳಿಸಿದರು.

ಇನ್ನುಳಿದಂತೆ ಜೇಕಬ್ ಬೆತೆಲ್ (7), ಜೆಮಿ ಓವರ್‌ಟನ್ (2), ಗಸ್ ಅಟ್ಕಿನ್ಸನ್ (2), ಜೋಫ್ರಾ ಆರ್ಚರ್ (12), ಅದಿರ್ ರಶೀದ್ (8*) ಹಾಗೂ ಮಾರ್ಕ್ ವುಡ್ (1) ನಿರಾಸೆ ಮೂಡಿಸಿದರು.

ಭಾರತದ ಪರ ವರುಣ್ ಚಕ್ರವರ್ತಿ ಮೂರು ಮತ್ತು ಅರ್ಷದೀಪ್ ಸಿಂಗ್, ಅಕ್ಷರ್ ಪಟೇಲ್ ಹಾಗೂ ಹಾರ್ದಿಕ್ ಪಾಂಡ್ಯ ತಲಾ ಎರಡು ವಿಕೆಟ್ ಗಳಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ಯಾಕ್ರೀ!! ನನ್ನ ಮುಖದ ಮೇಲೆ ಆವಾಗವಾಗ ನೀರನ್ನು ಚಿಮುಕಿಸುತ್ತೀರಾ?

ಗಂಡ : ನಿಮ್ಮಪ್ಪ ನಿನ್ನನ್ನು ಹೂವಿನ ತರ ನೋಡಿಕೊಳ್ಳೋಕೆ ಹೇಳಿದ್ದಾರೆ. ಅದಕ್ಕೆ...

ಮೈಸೂರು ಮಿತ್ರ

ಗುರುವಾರ, 23 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಇಡೀ ವಿಶ್ವವೇ ನಿನ್ನ ವಿರುದ್ಧ ನಿಂತರೂ ನೀನೊಬ್ಬನೇ ನಿಲ್ಲುವ ಧೈರ್ಯ ನಿನಗಿರಲಿ. – ಶ್ರೀ ಶ್ರೀಕೃಷ್ಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಶರೀರಕ್ಕೆ ಸುಖ, ಹೊಟ್ಟೆಗೆ ದುಃಖ

ನಿಮ್ಮ ಪತ್ರಗಳು

■ ಇ-ಖಾತೆ : ಆನ್‌ಲೈನ್‌ನಲ್ಲಿ ಸಲ್ಲಿಸುವ ಅವಕಾಶವಿರಲಿ

ಮಾನ್ಯರೇ,

ಮೈಸೂರು ಮಹಾನಗರ ಪಾಲಿಕೆಯಲ್ಲಿ ಇ-ಖಾತೆ ಮೂಲಕ ಸ್ವತ್ತುಗಳನ್ನು ನೋಂದಾಯಿಸುವುದಕ್ಕಾಗಿ ಈಗಾಗಲೇ ಪಾಲಿಕೆ ವತಿಯಿಂದ ಪ್ರಕಟಣೆಗಳು ಹೊರಬರುತ್ತಿವೆ. ಈ ಒಂದು ಇ-ಖಾತೆಗೆ ಹಲವಾರು ದಾಖಲಾತಿಗಳನ್ನು ಒಂದು ಅರ್ಜಿಯ ಮೂಲಕ ಬರೆದು ಸಂಬಂಧಿಸಿದ ವಲಯ ಕಚೇರಿಗೆ ನೀಡಬೇಕಾಗಿರುತ್ತದೆ. ಆದರೆ ಮೈಸೂರಿನ ಬಹುತೇಕ ನಾಗರಿಕರು ಈಗಾಗಲೇ ಯುಪಿಒಆರ್ ಇಲಾಖೆಯಲ್ಲಿ ಇದೇ ತರಹದ ದಾಖಲಾತಿಗಳನ್ನು ನೀಡಿ ನೋಂದಾಯಿಸಿಕೊಂಡಿದ್ದು, ಅಂತಹವರಿಗೆ ಮತ್ತೊಮ್ಮೆ ಇ-ಖಾತೆಯು ಅವಶ್ಯಕವೇ ಎಂಬುದರ ಬಗ್ಗೆ ಪಾಲಿಕೆ ಸ್ಪಷ್ಟೀಕರಣ ನೀಡಲಿ.

ಅಲ್ಲದೇ ಈಗಾಗಲೆ ಪಾಲಿಕೆಯು ವಾರ್ಷಿಕ ಆಸ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕವೇ ಪಡೆಯುತ್ತಿರುವಂತೆಯೇ, ಇ-ಖಾತೆಗೂ ಕೂಡಾ ಒಂದು ಅರ್ಜಿ ನಮೂನೆಯನ್ನು ಸಿದ್ಧಪಡಿಸಿ, ಅದಕ್ಕೆ ಸಂಬಂಧಿಸಿದ ಪ್ರತಿಗಳನ್ನು ಲಗತ್ತಿಸಿ ಅಪ್‌ಲೋಡ್ ಮಾಡುವ ಮೂಲಕ ಇ-ಖಾತೆ ನೀಡುವ ಕ್ರಮಕ್ಕೆ ಮುಂದಾಗಲಿ. ಇದರಿಂದ ಪಾಲಿಕೆ ಇಲಾಖೆಗೆ ಎಡತಾಗುವ ಸಮಯ, ಕಾಗದ ಮತ್ತು ಇತರೆ ವೆಚ್ಚಗಳು ಉಳಿತಾಯವಾಗಲಿದೆ. ಇ-ಖಾತೆ ಹೊಂದುವವರು ನೀಡುವ ದಾಖಲೆಯ ಪ್ರತಿಗಳು ಬಹುತೇಕ ಇರುವುದರಿಂದ ಅದನ್ನು ಕೂಡಾ ಆನ್‌ಲೈನ್ ಮೂಲಕವೇ ಪಡೆದು ಇ-ಖಾತೆ ನೀಡಲು ಪಾಲಿಕೆ ಕ್ರಮ ವಹಿಸಲಿ. ತಕ್ಷಣವೇ ಪಾಲಿಕೆಯ ಐಟಿ ಸೆಲ್ ಈ ಬಗ್ಗೆ ಗಮನ ಹರಿಸಲಿ ಹಾಗೂ ಡಿಜಿಟಲ್ ವ್ಯವಹಾರಗಳ ಇಂದಿನ ದಿನಗಳಲ್ಲಿ ಅದನ್ನು ಜಾರಿಗೊಳಿಸಿದ ಪಾಲಿಕೆ ಮೈಸೂರು ಮೊದಲಾಗಲಿ.

– ವಿಜಯ್ ಹೆಮ್ಮಿಗೆ, ಮೈಸೂರು

■ ಭಾರತ-ಅಮೆರಿಕಾ ಸಂಬಂಧ ಮತ್ತಷ್ಟು ವೃದ್ಧಿಸಲಿ

ಮಾನ್ಯರೆ,

ಅಮೆರಿಕದ ನೂತನ ಅಧ್ಯಕ್ಷರಾಗಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅಮೆರಿಕದ ನೂತನ ಅಧ್ಯಕ್ಷರು ಕೈಗೊಳ್ಳುವ ನಿರ್ಧಾರಗಳು, ನಿಲುವುಗಳು ಜಗತ್ತಿನ ಇತರ ದೇಶಗಳ ಮೇಲೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪರಿಣಾಮ ಬೀರುವ ಕಾರಣ ಟ್ರಂಪ್ ಪುನರಾಗಮನ ಭಾರತ ಸೇರಿದಂತೆ ಜಗತ್ತಿನ ಪ್ರಮುಖ ದೇಶಗಳಲ್ಲಿ ಸಾಕಷ್ಟು ನಿರೀಕ್ಷೆ ಮತ್ತು ಆತಂಕಕ್ಕೆ ಕಾರಣವಾಗಿದೆ.

ಭಯೋತ್ಪಾದನೆ, ಉಗ್ರವಾದದ ಸಿದ್ಧಾಂತ ಸೇರಿದಂತೆ ಇತರ ಅಸಾಂಪ್ರದಾಯಿಕ ಬೆದರಿಕೆಗಳಿಂದ ಜಗತ್ತನ್ನು ರಕ್ಷಿಸುವ ವಿಚಾರದಲ್ಲಿ ನಮ್ಮ ಭಾರತ ಹಾಗೂ ಅಮೆರಿಕ ರಾಷ್ಟ್ರಗಳು ಸಮಾನ ಆಸಕ್ತಿಯನ್ನು ಹೊಂದಿವೆ. ಪ್ರಸ್ತುತ ಜಾಗತಿಕ ಆರ್ಥಿಕ ಸ್ಥಿತಿ ಅನಿಶ್ಚಿತವಾಗಿರುವ ಇಂದಿನ ಪರಿಸ್ಥಿತಿಯಲ್ಲಿ, ಎರಡೂ ರಾಷ್ಟ್ರಗಳು ಅಭಿವೃದ್ಧಿ ಮತ್ತು ಆವಿಷ್ಕಾರ ಕ್ಷೇತ್ರದಲ್ಲಿ ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಬೇಕಿದೆ. ಸ್ಥಳೀಯರಿಗೆ ಹೆಚ್ಚಿನ ಉದ್ಯೋಗದ ಭರವಸೆಯನ್ನು ಡೊನಾಲ್ಡ್ ಟ್ರಂಪ್ ಅವರು ಮೊದಲಿನಿಂದಲೂ ಪ್ರತಿಪಾದಿಸುತ್ತಾ ಬಂದಿದ್ದಾರೆ. ಇದು ನಮ್ಮ ಭಾರತೀಯ ಐಟಿ ವಲಯದ ಮೇಲೆ ನೇರ ಪರಿಣಾಮ ಬೀರುವ ಸಂಭವವಿದೆ. ಇದಲ್ಲದೇ ಆಮದು ವಸ್ತುಗಳ ಮೇಲೆ ಹೆಚ್ಚಿನ ಸುಂಕ, ಅಕ್ರಮ ವಲಸೆಗೆ ಕಡಿವಾಣ, ವೀಸಾ ವಿತರಣೆಗೆ ಕಠಿಣ ನಿಯಮ ಇವುಗಳ ಬಗ್ಗೆ ಈ ಹಿಂದಿನ ಅಧ್ಯಕ್ಷೀಯ ಅವಧಿಯಲ್ಲಿ ಟ್ರಂಪ್ ಹೇಳುತ್ತಾ ಬಂದಿದ್ದಾರೆ. ಇವೆಲ್ಲವೂ ನಮ್ಮ ಭಾರತದ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಕೂಲ ಪರಿಣಾಮ ಉಂಟಾಗುವ ಸಂಭವ ಇರುವುದರಿಂದ ಉಭಯ ದೇಶಗಳ ಸಂಬಂಧ ಸುಧಾರಣೆ ವೃದ್ಧಿಯ ದೃಷ್ಟಿಯಿಂದ ಜಾಣ್ಮೆಯಿಂದ ಹೆಜ್ಜೆ ಇಡುವುದು ಅಗತ್ಯವಾಗಿದೆ.

ಇಷ್ಟಕ್ಕೂ ಈಗಾಗಲೇ ಉಭಯ ದೇಶಗಳ ನಡುವೆ ರಕ್ಷಣೆ, ಇಂಧನ, ಬಾಹ್ಯಾಕಾಶ, ಆರ್ಥಿಕ, ಗುಪ್ತಚರ, ವ್ಯಾಪಾರ ಮೊದಲಾದ ಕ್ಷೇತ್ರಗಳಲ್ಲಿ ಮಹತ್ವದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ರಷ್ಯಾ ಜೊತೆಗಿನ ಭಾರತದ ಅತ್ಯಾಪ್ತ ಸಂಬಂಧದ ಹೊರತಾಗಿಯೂ ಭಾರತವನ್ನು ತನ್ನ ಆಪ್ತ ಬಳಗದಲ್ಲಿ ಅಮೆರಿಕ ಗುರುತಿಸಿದೆ. ಇದು ಎರಡೂ ದೇಶಗಳ ಸಂಬಂಧ ಇನ್ನಷ್ಟು ಬೆಳೆಯಲು ಸಹಕಾರಿಯಾಗಿದೆ. ಇದೆಲ್ಲದರ ಜೊತೆಜೊತೆಗೆ ತನ್ನ ಹಿತಾಸಕ್ತಿ ಕಾಪಾಡಿಕೊಳ್ಳುವ ಭಾರತದ ಸಾರ್ವಭೌಮತೆಯನ್ನೂ ಕೂಡಾ ಟ್ರಂಪ್ ಗೌರವಿಸಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ರಾಜ್ಯದಲ್ಲಿ ಹೆಚ್ಚುತ್ತಿರುವ ದರೋಡೆ, ಸುಲಿಗೆ ಪ್ರಕರಣ; ಸರ್ಕಾರದ ವೈಫಲ್ಯ

ಮಾನ್ಯರೆ,

ರಾಜ್ಯದಲ್ಲಿ ನಡೆಯುತ್ತಿರುವ ದರೋಡೆ, ಸುಲಿಗೆ ಪ್ರಕರಣಗಳಿಂದ ಜನರಲ್ಲಿ ಭೀತಿ ಹುಟ್ಟಿದ್ದು, ರಾಜ್ಯ ಪೊಲೀಸ್ ಇಲಾಖೆಯ ಕಾರ್ಯ-ಕ್ಷಮತೆಯನ್ನು ಪ್ರಶ್ನಿಸುವಂತಾಗಿದೆ. ಕಳೆದ ನಾಲ್ಕೈದು ದಿನಗಳ ಅವಧಿಯಲ್ಲಿ ಹಾಡಹಗಲೇ ನಡೆದಿರುವ ದರೋಡೆ ಹಾಗೂ ಸುಲಿಗೆ ಪ್ರಕರಣಗಳು ಗೃಹ ಇಲಾಖೆಯ ವೈಫಲ್ಯತೆಯನ್ನು ಪ್ರತಿಬಿಂಬಿಸುವಂತಿದೆ. ಕಾನೂನು ಸುವ್ಯವಸ್ಥೆಗೆ ಹೆಸರಾಗಿದ್ದ ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ಸರ್ಕಾರದ ಕಾರ್ಯವೈಖರಿಯನ್ನು ಅಣಕಿಸುವಂತಿದೆ.

ಇಷ್ಟೆಲ್ಲ ಅಪರಾಧ ಪ್ರಕರಣಗಳು ಅವ್ಯಾಹತವಾಗಿ ನಡೆಯುತ್ತಿದ್ದರೂ ಸಹ ಪೊಲೀಸ್ ಇಲಾಖೆ ಎಚ್ಚೆತ್ತುಕೊಂಡಂತೆ ಕಂಡುಬರುತ್ತಿಲ್ಲ. ಹೆದ್ದಾರಿ ಗಸ್ತು ಪಡೆ ಕ್ರಿಯಾಶೀಲವಾಗಿಲ್ಲ. ರಾತ್ರಿ ಪೊಲೀಸ್ ಗಸ್ತು ಚುರುಕುಗೊಂಡಿಲ್ಲ. ಇಂತಹ ಕೃತ್ಯಗಳ ಬಗ್ಗೆ ಉನ್ನತ ಮಟ್ಟದ ಸಭೆ ನಡೆಸಿ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಬೇಕಾದ ಗೃಹ ಸಚಿವರು ಕೇವಲ ರಾಜಕೀಯ ಲೆಕ್ಕಾಚಾರದಲ್ಲೇ ತಲ್ಲೀನರಾಗಿದ್ದು, ಅಪರಾಧಗಳು ನಡೆದಿರುವ ಬಗ್ಗೆ ಅವರಿಗೆ ಮಾಹಿತಿ ಕೊರತೆ ಕಂಡುಬರುತ್ತಿದೆ. ರಾಜಕೀಯ ಪಕ್ಷಗಳು ನಡೆಸುವ ಸಭೆ ಸಮಾರಂಭಗಳಿಗೆ ಹೆಚ್ಚು ಭದ್ರತೆ ಒದಗಿಸುವ ಕಾರ್ಯದಲ್ಲೇ ಬ್ಯುಸಿಯಾಗಿರುವ ನಮ್ಮ ಪೊಲೀಸರು ಇನ್ನು ಜನ ಸಾಮಾನ್ಯರ ಸಮಸ್ಯೆಗಳ ಬಗ್ಗೆ ಗಮನ ಹರಿಸಲು ಎಲ್ಲಿ ಸಾಧ್ಯ ಎಂಬ ಟೀಕೆಗಳು ಸಾರ್ವತ್ರಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ.

ದರೋಡೆ, ಕೊಲೆ-ಸುಲಿಗೆ ಅತ್ಯಾಚಾರದಂತಹ ಪ್ರಕರಣಗಳು ಈ ಹಿಂದೆ ಬಿಹಾರ, ಉತ್ತರಪ್ರದೇಶದಂತಹ ರಾಜ್ಯಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದವು. ಆದರೆ ಕರ್ನಾಟಕ ಈಗ ಆ ರಾಜ್ಯಗಳನ್ನು ಹಿಂದಿಕ್ಕಿ ನಂಬರ್ ಒನ್ ಅಪರಾಧಿ ರಾಜ್ಯವಾಗಿ ಹೊರಹೊಮ್ಮುವ ಲಕ್ಷಣಗಳು ಕಂಡುಬರುತ್ತಿವೆ. ಹೆಚ್.ಟಿ. ಸಾಂಗ್ಲಿಯಾನ, ಕೆಂಪಯ್ಯರಂತಹ ದಕ್ಷ ಪೊಲೀಸ್ ಅಧಿಕಾರಿಗಳನ್ನು ಕಂಡ ಕರುನಾಡು ಈಗ ಅಪರಾಧಗಳ ನಾಡಾಗಿ ಪರಿವರ್ತನೆ ಆಗುತ್ತಿರುವುದು ನಿಜಕ್ಕೂ ಶೋಚನೀಯ ಸಂಗತಿ.

– ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು.

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ವರವಾಗಿ ಬಂದ ಮೊಬೈಲ್ ವರಿ ಆಯ್ತಲಪ್ಪೋ ...!

ಯಾರ ಕೈಗೂ ಸಿಗದೆ ಕಾಲದ ಗತಿ ಬದಲಾಗುತ್ತಲೇ ಇರುತ್ತದೆ. ಬದಲಾದ ಕಾಲದ ಜೊತೆಗೆ ಮೌಲ್ಯಗಳೂ ಬದಲಾಗುವುದು ಕಾಲದ ನಿಯಮವೇ ಸರಿ. ಒಂದು ಕಾಲದಲ್ಲಿ ಶ್ರೇಷ್ಠ ಎನಿಸಿದ್ದು ನಂತರದ ವರ್ಷಗಳಲ್ಲಿ ಅಪ್ರಸ್ತುತವೆನಿಸಿಬಿಡುತ್ತದೆ. ಕಾಲಕಾಲಕ್ಕೆ ಬದಲಾಗುವ ಮನುಷ್ಯನ ಧೋರಣೆ, ಅವಶ್ಯಕತೆ, ಅನುಕೂಲಗಳಿಗೆ ತಕ್ಕಂತೆ ಉಂಟಾಗುವ ಈ ಮಾರ್ಪಾಡುಗಳು ಸಹಜವೇ.



> ಮೊಬೈಲ್ ಗೀಳನ್ನು ಬಿಡಿಸಲು ಈಗಾಗಲೇ ನೂರಾರು ಆಸ್ಪತ್ರೆಗಳಲ್ಲಿ ವಿಶೇಷ ವಿಭಾಗ ತೆರೆಯಲಾಗಿದ್ದು, ಅವುಗಳ ಸಂಖ್ಯೆ ಹೆಚ್ಚದಂತೆ ನೋಡಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯವಷ್ಟೇ ಅಲ್ಲ, ಈ ಹೊತ್ತಿನಲ್ಲಿ ಜರೂರಾಗಿ ಆಗಲೇಬೇಕಾದ ಕೆಲಸವಾಗಿದೆ. ಮೊಬೈಲ್ ನೋಡಿಕೊಂಡೇ ಮಕ್ಕಳನ್ನು ನಿರ್ಬಂಧಿಸುವ ಪೋಷಕರು ಬೇಡ. ಪುಸ್ತಕ ಓದಿಕೊಂಡು, ಇತರೇ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಪೋಷಕರು ಇಂದು ಮಕ್ಕಳಿಗೆ ಮಾದರಿಯಾಗಬೇಕಾಗಿದೆ.

ಸುಮಾರು ಎಂಭತ್ತರ ಉತ್ತರಾರ್ಧದಲ್ಲಿ ಆಗತಾನೆ ಟಿವಿ ಜನಪ್ರಿಯವಾಗುತ್ತಿತ್ತು. ಮನೆಯಲ್ಲಿಯೇ ಚಲನಚಿತ್ರಗಳು, ಧಾರಾವಾಹಿಗಳು, ಅತ್ಯಾಕರ್ಷಕ ಜಾಹೀರಾತುಗಳನ್ನು ಕಣ್ತುಂಬಿಕೊಳ್ಳುವುದೇ ಜನರಿಗೆ ಹಬ್ಬವಾಗಿತ್ತು. ಪ್ರಾರಂಭದಲ್ಲಿ ಟಿವಿ ಎಲ್ಲರಿಗೂ ಕೈಗೆಟುಕುವ ವಸ್ತುವಾಗಿರಲಿಲ್ಲ. ವಠಾರದಲ್ಲಿ ಟಿವಿ ಇದ್ದ ಮನೆಯ ಪ್ರತಿಷ್ಠೆಯೇ ಬೇರೆ. ಬೀದಿಗೆ ಒಂದು ಟಿವಿ ಇದ್ದರೆ, ಬುಧವಾರದ ಚಿತ್ರಹಾರ್, ಶುಕ್ರವಾರದ ಚಿತ್ರಮಂಜರಿ ಭಾನುವಾರದ ಮುನ್ನೋಟ, ಚಲನಚಿತ್ರಗಳಿಗೆ ಆ ಮನೆಗಳಲ್ಲಿ ಜಾತ್ರೆಯೋ ಜಾತ್ರೆ! ರಾಮಾಯಣ, ಮಹಾಭಾರತ ಟಿವಿಯಲ್ಲಿ ಪ್ರಾರಂಭವಾದಾಗಿನ ಕತೆಯನ್ನಂತೂ ಈಗಲೂ ನಾವು ಮೆಲುಕು ಹಾಕುತ್ತೇವೆ. ಅದೊಂದು ಸುವರ್ಣಯುಗ.

ಈಗ ಬಹಳ ಪ್ರೀತಿಯಿಂದ ನಾವು ನೆನಪಿಸಿಕೊಳ್ಳುವ ದೂರದರ್ಶನದ ಆ ದಿನಗಳು, ಅಂದಿನ ಪೋಷಕರಿಗೆ ದೊಡ್ಡ ತಲೆನೋವಿನ ದಿನಗಳಾಗಿದ್ದವು ಎಂದರೆ ನಂಬುತ್ತೀರ.

ಹೌದು! ಟಿವಿ ಎಲ್ಲರ ಮನೆಯಲ್ಲಿಯೂ ಸಾಮಾನ್ಯವಾಗ ತೊಡಗಿದಾಗ ನಿಜವಾದ ಸಮಸ್ಯೆ ಪ್ರಾರಂಭವಾಯಿತು ಎನ್ನಬಹುದು. ಆಗ ಹೆಚ್ಚು ಚಾನೆಲ್‌ಗಳು ಇರಲಿಲ್ಲ. ಒಂದಷ್ಟು ಹೊತ್ತು ಬೆಳಗ್ಗೆ ಮತ್ತು ಸಂಜೆ ಮಾತ್ರ ಟಿವಿಯಲ್ಲಿ ಕಾರ್ಯಕ್ರಮಗಳು ಬರುತ್ತಿದ್ದವು. ಕನ್ನಡ ಕಾರ್ಯಕ್ರಮಗಳಂತೂ ಬಹಳ ತಡವಾಗಿ ಶುರು ಆಗಿದ್ದು. ಆದರೂ ಮಕ್ಕಳು ಮೂರೂ ಹೊತ್ತು ಟಿವಿ ಮುಂದೆ ಕೂರುತ್ತಾರೆ, ಓದುವುದಿಲ್ಲ ಬರೆಯುವುದಿಲ್ಲ ಎಂಬ ದೂರು ಸದಾ ಅಮ್ಮಂದಿರಿಂದ ಬರುತ್ತಿತ್ತು. ಇದರ ಜೊತೆಗೆ ಮತ್ತೊಂದು ಗುರುತರವಾದ ಆರೋಪ ಟಿ.ವಿ.ಯ ಮೇಲೆ ಇದ್ದದ್ದೆಂದರೆ, ಟಿವಿ ವೀಕ್ಷಣೆಯಿಂದ ಮಕ್ಕಳಿಗೆ ದೃಷ್ಟಿ ದೋಷ ಬರುತ್ತಿದೆ ಎಂಬುದು. ನಂತರದ ದಿನಗಳಲ್ಲಿ ವಿವಿಧ ಚಾನೆಲ್‌ಗಳು ಬಂದಮೇಲೆ ಪೋಷಕರ ಅಸಹಾಯಕತೆ ಎಲ್ಲೆ ಮೀರಿತ್ತು.

ಇದು ನಮ್ಮ ಅನುಭವಕ್ಕೆ ಬಂದದ್ದಾದರೆ, ನಮ್ಮ ಅಪ್ಪ-ಅಮ್ಮ, ಅಜ್ಜಿ-ತಾತ ಇವರ ಅನುಭವಗಳನ್ನು ಕೇಳಿದರೆ, ಅವರ ಕಾಲದಲ್ಲಿಯೂ ಹೀಗೆ ಮಕ್ಕಳನ್ನು ಕೆಡಿಸುವ ಸಾಧನಗಳಿದ್ದೇ ಇದ್ದವು. ಗ್ರಾಮಾಫೋನ್ ಬಂದಾಗ, ಗ್ರಾಮಾಫೋನ್‌ಗೆ ಕಿವಿ ಹಚ್ಚಿ ಕೂತರೆ ಆಯಿತು, ಇನ್ನೇನೂ ಬೇಡ. ಆ ತಟ್ಟೆಗಳಿಗೆ ಅದೆಷ್ಟು ದುಡ್ಡು ಸುರಿಯುತ್ತಾನೆ? ಎಂಬ ಆಕ್ಷೇಪ ಇದ್ದದ್ದನ್ನು ನಮ್ಮ ತಾತಂದಿರು ನೆನೆಸಿಕೊಳ್ಳುತ್ತಾರೆ. (ಹೆಂಗಸರಿಗೆ ಆ ಸ್ವಾತಂತ್ರ್ಯ ಆಗ ಇರಲಿಲ್ಲವಲ್ಲ! ಹಾಗಾಗಿ ಸುರಿಯುತ್ತಾನೆ......! "ಳೆ" ಎಂದು ಹೇಳುವ ಹಾಗಿಲ್ಲ!)

ನಂತರ ರೇಡಿಯೋ ಬಂತು. ಆಗ ಮತ್ತದೇ, ಮನೆಯ ಹಜಾರಕ್ಕೆ ಬಂದು ಕುಳಿತ ರೇಡಿಯೋ, ಎಲ್ಲ ವಯೋಮಾನದವರನ್ನೂ ತನ್ನ ತೆಕ್ಕೆಗೆ ಬೇಷರತ್ತಾಗಿ ತೆಗೆದುಕೊಂಡುಬಿಟ್ಟಿತು. ರೇಡಿಯೋ ಪ್ರಸಾರ ಮಾಡುತ್ತಿದ್ದ, ವಾರ್ತೆಗಳು, ಭಾವಗೀತೆಗಳು, ಭಕ್ತಿಗೀತೆಗಳು, ಹರಿಕಥೆ, ರೇಡಿಯೋ ಡಾಕ್ಟರ್, ಚಿತ್ರಗೀತೆಗಳು, ಕ್ರಿಕೆಟ್ ಕಾಮೆಂಟ್ರಿ, ಶಾಸ್ತ್ರೀಯ ಸಂಗೀತ, ಚಲನಚಿತ್ರ ಧ್ವನಿವಾಹಿನಿ ಹೀಗೆ ಅದರಲ್ಲಿ ಪ್ರಸಾರವಾಗುವ ವೈವಿಧ್ಯಮಯ ಕಾರ್ಯಕ್ರಮಗಳು ಎಲ್ಲ ವರ್ಗದ ಶ್ರೋತೃಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡುಬಿಟ್ಟಿದ್ದು ಈಗ ಸುಮಧುರ ನೆನಪು. ಇನ್ನೂ ಅದೇ ತೆಕ್ಕೆಗೆ ಪ್ರೀತಿಯಿಂದ ಜೋತುಬಿದ್ದವರು ಇದ್ದಾರೆ.

ನಂತರದ ದಿನಗಳಲ್ಲಿ ಲೈಬ್ರರಿಗಳ ಅಂದರೆ ಗ್ರಂಥಾಲಯಗಳ ಸಂಖ್ಯೆಗಳು ಹೆಚ್ಚಾದವು. ಜನರಲ್ಲಿ ಓದುವ ಅಭ್ಯಾಸ ಹೆಚ್ಚಿಸಲು ಸರ್ಕಾರ ಗ್ರಂಥಾಲಯಗಳನ್ನು ತೆರೆದರೆ, ಖಾಸಗಿಯಾಗಿ ಸರ್ಕ್ಯುಲೇಟಿಂಗ್ ಲೈಬ್ರರಿಗಳು ಪ್ರಾರಂಭವಾದವು. ಜನರಲ್ಲಿ ಸಾಕ್ಷರತೆ ಬಗ್ಗೆ ಮೂಡಿದ ಜಾಗೃತಿ ಅವರನ್ನು ಓದು ಬರಹ ಕಲಿಯುವಂತೆ ಮಾಡಿದ್ದು ಗ್ರಂಥಾ ಲಯಗಳಿಗೆ ಭೇಟಿ ನೀಡುವವರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಾಗಿಸಿತ್ತು. ಲೈಬ್ರರಿ ಕಾರ್ಡುಗಳನ್ನು ಮಾಡಿಸಿಕೊಂಡು ಎಲ್ಲ ವಯೋಮಾನದವರು ಪುಸ್ತಕಗಳನ್ನು ಎರವಲು ಪಡೆದು ಓದತೊಡಗಿ ದರು. ಗಂಭೀರ ದುರ್ಲಭ ಅಮೂಲ್ಯ ಪುಸ್ತಕಗಳನ್ನು ಗಂಭೀರ ಓದುಗರು ಎರವಲು ಪಡೆದರೆ, ಕತೆ-ಕಾದಂಬರಿಗಳನ್ನು ಯುವ ಸಮೂಹ, ಗೃಹಿಣಿಯರು, ಮಕ್ಕಳು ಓದಲಾರಂಭಿಸಿದರು. ಇದಕ್ಕೂ ಮನೆಯಲ್ಲಿ ಆಕ್ಷೇಪಣೆ ಮಾಡುವ ಹಿರಿಯರಿದ್ದರೆಂದು ನಮ್ಮ ಅಪ್ಪ- ಅಮ್ಮನ ಕಾಲದವರ ಅಳಲು. ಕೈಲಿ ಪುಸ್ತಕ ಇದ್ರೆ ಏನೂ ಬೇಕಾಗಿಲ್ಲ. ಹಾಳು ಕಾದಂಬರಿಗಳನ್ನ ಓದಿ ಹಾಳಾಗ್ತಾ ಇದಾರೆ ಮಕ್ಕಳು? ಅಂತಾ!

ನಂತರ ಟೇಪ್ ರೆಕಾರ್ಡರ್, ವಾಕ್‌ಮನ್‌ಗಳು ಬಂದವು, ಇದಕ್ಕೂ ಗ್ರಾಮಾಫೋನ್‌ಗೆ ಬೀಳುತ್ತಿದ್ದ ಬೈಗುಳಗಳೇ!

ಮೇಲೆ ಹೇಳಿದ ಎಲ್ಲ ಹವ್ಯಾಸಗಳು, ಅಭ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ವ್ಯಕ್ತಿತ್ವ ವಿಕಸನಕ್ಕೆ ದಾರಿಯಾಗಿವೆ. ನಮ್ಮ ಭಾಷೆ-ವೇಷಗಳನ್ನು ತಿದ್ದಿವೆ, ಜ್ಞಾನದ ಪರಿಧಿಯನ್ನು ಅಗಾಧವಾಗಿಸಿವೆ, ಆತ್ಮವಿಶ್ವಾಸ, ಸ್ಫೂರ್ತಿಯನ್ನು ಹೆಚ್ಚಿಸಿವೆ, ಗ್ರಹಿಕೆ-ಏಕಾಗ್ರತೆಯನ್ನು ಉತ್ತಮವಾಗಿಸಿವೆ. ಸಾಂಸ್ಕೃತಿಕವಾಗಿ ಸಾಹಿತ್ಯಿಕವಾಗಿ ನಮ್ಮ ಬೆಳವಣಿಗೆಗೆ ಕಾರಣವಾಗಿವೆ. ಇವುಗಳಿಂದ ಕಲಿತ ಈ ಎಲ್ಲವೂ ನಮ್ಮ ಸುಪ್ತಪ್ರಜ್ಞೆಯಲ್ಲಿ ನಿಧಿಯಂತೆ ಜೋಪಾನವಾಗಿ ಶೇಖರಣೆಯಾಗಿವೆ. ನಮಗೆ ಅಗತ್ಯವಿದ್ದಾಗ ನಮ್ಮ ಸಹಾಯಕ್ಕೆ ಬರುತ್ತವೆ.

ಹಾಗಾಗಿಯೇ ನಮಗೆ ಈ ಎಲ್ಲ ಮನರಂಜನಾ ಮಾಧ್ಯಮಗಳು ಕಲಿಕೆಯ ಮಾಧ್ಯಮಗಳಂತೆ ನಮ್ಮ ಬೆಳವಣಿಗೆಯಲ್ಲಿ ಬಹಳಷ್ಟು ಕೊಡುಗೆ ನೀಡಿವೆ. ಆದ್ದರಿಂದಲೇ ಇನ್ನೂ ಜನರಿಗೆ ರೇಡಿಯೋ, ಟಿವಿ, ಟೇಪ್ ರೆಕಾರ್ಡರ್ ಎಂದರೆ ಮಾಸದ ಪ್ರೇಮವಿರುವುದು.

ಇಂತಹ ಬಲಾಢ್ಯ ಪ್ರೇಮ ಬದಲಾದದ್ದು ಇಂಟರ್ನೆಟ್ ಕ್ರಾಂತಿಯಿಂದ. ಕಂಪ್ಯೂಟರ್‌ನ ಆವಿಷ್ಕಾರವು ಒಂದು ಕ್ರಾಂತಿಯಾದರೆ, ಇಂಟರ್ನೆಟ್‌ನ ಸಂಶೋಧನೆ ಇಡೀ ಪ್ರಪಂಚವನ್ನೇ ಶಾಶ್ವತವಾಗಿ ಬದಲಿಸಿಬಿಟ್ಟಿತು. ಇಂಟರ್ನೆಟ್ ಕೂಡಾ ಮನುಷ್ಯನ ಜೀವನವನ್ನು ಚಂದವಾಗಿಸಿತು. ಅಲಭ್ಯವಾದ ಮಾಹಿತಿಗಳು, ಜ್ಞಾನ, ಮನರಂಜನೆಗಳನ್ನು ಎಲ್ಲರ ಕೈಗೆ ಸುಲಭವಾಗಿ ಎಟುಕುವಂತೆ ಇಂಟರ್ನೆಟ್ ಕೈಗೂಡಿಸಿತು. ಅದ್ಭುತವಾದ ಬೆರಗಿನ ಲೋಕವನ್ನು ಕಣ್ಣೆದುರಿಗೆ ತಂದಿಟ್ಟು, ಮಾನವಜಾತಿಗೆ ವರವೆನ್ನಿಸಿದ್ದ ಇಂಟರ್ನೆಟ್, ಶಾಪವೇನೋ ಎನ್ನುವ ತರ ಪರಿವರ್ತಿತವಾಗಿದ್ದು ಎಲ್ಲರ ಕೈಗೂ ಸ್ಮಾರ್ಟ್ ಫೋನ್‌ಗಳು ಬಂದಾಗ! ಅಲ್ಲಿಯೂ ಹಲ- ಕೆಲವು ಹಂತ ಗಳು! ಕೀ ಪ್ಯಾಡ್ ಫೋನ್‌ಗಳಿದ್ದಾಗ ಇಂಟರ್ನೆಟ್‌ನ ವೇಗ, ತರಂಗಗಳ ಗುಣಮಟ್ಟ ಅಷ್ಟಾಗಿ ಚೆನ್ನಾಗಿರಲಿಲ್ಲ. ಒಂದು ಫೋಟೋ ಒಂದು ವಿಡಿಯೋ ಡೌನ್‌ಲೋಡ್ ಆಗಬೇಕೆಂದರೆ ಗಂಟೆಗಟ್ಟಲೆ ಹಿಡಿಯುತ್ತಿತ್ತು.

ಹೀಗೆ G ಇಂದ 5G ವರೆಗಿನ ಪ್ರಯಾಣದೊಂದಿಗೆ ನಮ್ಮ ಜೀವನವೂ ಹಿಂತಿರುಗಿ ನೋಡಲಸಾಧ್ಯವಾಗುವಂತೆ ಸಾಗಿ ಬಂದುಬಿಟ್ಟಿತು. ಅದರ ಬಗ್ಗೆ ನಾನು ಹೆಚ್ಚಿಗೆ ವಿವರಿಸುವ ಅಗತ್ಯವೇ ಇಲ್ಲ. ನಾವೆಲ್ಲರೂ ಈ ಬದಲಾಣೆಯನ್ನು ಸಾಕ್ಷೀಕರಿಸುತ್ತಿದ್ದೇವೆ.

ಕೋವಿಡ್ ಪ್ರಕೋಪದ ಪರಿಸ್ಥಿತಿಯಲ್ಲಿ ಮೊಬೈಲ್‌ಗೆ ಪ್ರತಿಯೊಬ್ಬರೂ ಅಂಟಿಕೊಂಡರು. ಮನೆಯಲ್ಲಿ ಒಂದೋ ಎರಡೋ ಫೋನ್‌ಗಳು ಮನೆಯ ದೊಡ್ಡವರ ಬಳಿ ಇರುತ್ತಿದ್ದವು. ಕೋವಿಡ್ ಸಮಯದಲ್ಲಿ ನರ್ಸರಿ ಮಕ್ಕಳ ಕೈಗೂ ಆನ್‌ಲೈನ್ ತರಗತಿಯ ನೆಪದಲ್ಲಿ ಮೊಬೈಲ್ ಬಂದಿತು. ಇದರಿಂದ ಇಂದು ಪ್ರತಿ ಮಗುವಿಗೂ ಅದರದೇ ಆದ ವಾಟ್ಸಪ್, ಗೂಗಲ್ ಅಕೌಂಟ್‌ಗಳಿವೆ. ಶಾಲೆಗಳೂ ವಾಟ್ಸಪ್ ಮೂಲಕವೇ ಪೋಷಕರಿಗೆ ಮತ್ತು ಮಕ್ಕಳಿಗೆ ತರಗತಿ ಸಂಬಂಧಿತ ಮಾಹಿತಿಗಳನ್ನು ನೀಡುವುದನ್ನು ಅಭ್ಯಾಸ ಮಾಡಿಕೊಂಡಿರುವುದರಿಂದ ಕೋವಿಡ್ ಸಮಯ ಮುಗಿದರೂ ಮಕ್ಕಳ ಬಾಂಧವ್ಯ ಫೋನಿನ ಜೊತೆಗೇ ಮುಂದುವರೆಯಿತು. ಇಂದು ಮಕ್ಕಳು ಫೋನಿಗೆ ದಾಸರಾಗಿರುವುದು ಪೋಷಕರಲ್ಲಿ ಮಾತ್ರವಲ್ಲ, ವೈದ್ಯರು, ವಿಜ್ಞಾನಿಗಳು, ಸಮಾಜವಿಜ್ಞಾನಿಗಳಲ್ಲೂ ಆತಂಕಕ್ಕೆ ದೂಡಿದೆ.

ಫೋನ್‌ನ ಕಾರಣಕ್ಕೆ ಮಕ್ಕಳು ಮತ್ತು ಪೋಷಕರ ನಡುವೆ ಉಂಟಾಗುವ ಘರ್ಷಣೆಗಳು, ಅಂತರಗಳು ಅನೇಕ ಹಠಮಾರಿ ಮಕ್ಕಳ ಸಾವಿನೊಂದಿಗೆ ಕೊನೆಗೊಳ್ಳುತ್ತಿರುವುದು ದುರಂತ. ಇಂದು ಅಂಗೈನಲ್ಲಿ ಮಾತನಾಡುವ ಸಾಧನವಷ್ಟೇ ಅಲ್ಲ ನಾವು ಹಿಡಿಯುತ್ತಿರುವುದು, ಫೋನ್, ಕ್ಯಾಮೆರಾ, ಗಡಿಯಾರ, ಕ್ಯಾಲ್ಕುಲೇಟರ್, ಬಿಪಿ ಯಂತ್ರ, ಟೈಪ್ರೈಟರ್, ಪ್ರೊಜೆಕ್ಟರ್ ಮುಂದೆ ಇನ್ನೇನು ಬರಲಿದೆಯೋ?

ಹಿಂದೆಲ್ಲಾ ಮಕ್ಕಳಿಗೆ ಶಾಲೆಯಲ್ಲಿ ಮನೆಗೆಲಸ ಕೊಟ್ಟರೆ, ತಮಗೆ ತಿಳಿಯದ ವಿಷಯವನ್ನು ಮಕ್ಕಳು ಗ್ರಂಥಾಲಯಕ್ಕೆ ಹೋಗಿ ಪುಸ್ತಕಗಳನ್ನು ತಡಕಾಡಿ ತಿಳಿದು, ಅರಿತು, ಕಲಿತು ತಯಾರಾಗುತ್ತಿದ್ದರು. ಆದರೆ ಇಂದು ಮೊಬೈಲ್‌ನಲ್ಲಿ ಹುಡುಕಿ ಪ್ರಿಂಟ್ ಔಟ್ ತೆಗೆದು ಅಂಟಿಸಿ ಕೆಲಸ ಮುಗಿಸುತ್ತಾರೆ. ಅದರಲ್ಲಿ ಏನಿದೆ ಎಂಬ ಗೊಡವೆಗೂ ಕೆಲವು ಮಕ್ಕಳು ಹೋಗುವುದಿಲ್ಲ. ಮಕ್ಕಳಿಗೆ ಸಹಾಯ ಮಾಡುವುದಕ್ಕಾಗಿಯೇ ಇಂದು ಪಿಂಟ್ ರೆಸ್ಟ್‌ನಂತಹಾ ಹಲವು ಆ್ಯಪ್‌ಗಳು ಇದ್ದಾವೆ. ಇವೆಲ್ಲ ಬಂದ ಹೊಸತರಲ್ಲಿ, ಹೊಸ ಹೊಸ ಐಡಿಯಾಗಳು ತಿಳಿಯುತ್ತವೆ ಎಂದೆನಿಸಿತ್ತು. ಆದರೆ ಇವುಗಳಿಂದಾಗಿ ಮಕ್ಕಳಲ್ಲಿ ಸೃಜನಶೀಲತೆ, ಕ್ರಿಯಾಶೀಲತೆಯೇ ಹಾಳಾಗುತ್ತಿದೆ ಎಂದು ಬೇರೆ ಹೇಳಬೇಕಿಲ್ಲ

ವಿದ್ಯಾರ್ಥಿಗಳು ತಮಗೆ ಬೇಕಾದ ಮಾಹಿತಿ ಬೆರಳತುದಿಯಲ್ಲಿ ಸಿಗುವುದರಿಂದ, ಗ್ರಂಥಾಲಯಕ್ಕೆ ಹೋಗಿ ನೋಟ್ಸ್ ಮಾಡಿಕೊಳ್ಳುವ ಪರಿಪಾಠವನ್ನೇ ಬಿಟ್ಟುಬಿಟ್ಟಿದ್ದಾರೆ. ಮಕ್ಕಳ ಆಟದ ಸಮಯವನ್ನು ಕೋವಿಡ್‌ಗೆ ಮೊದಲು ಕಂಪ್ಯೂಟರ್ ಗೇಮ್‌ಗಳು ಕಸಿದಿದ್ದರೆ, ಈಗ...... ರೀಲ್ಸ್‌ಗಳು!!! ಒಂದರ ಮೇಲೊಂದರಂತೆ ನೋಡುತ್ತಾ ಗಂಟೆಗಟ್ಟಲೆ ಸಮಯವನ್ನು ಹಾಳು ಮಾಡುತ್ತಿರುವುದು ಮಕ್ಕಳು ಮಾತ್ರವಲ್ಲ, ದೊಡ್ಡವರು ಕೂಡ. ಫೇಸ್ ಬುಕ್, ಇನ್ಸ್ಟಾಗ್ರಾಮ್ ಗಳು ನಮ್ಮ ಜೀವನವನ್ನು ಆವರಿಸಿಕೊಂಡಿರುವುದು ಮಾತ್ರವಲ್ಲದೆ ನಮ್ಮನ್ನು ಅವುಗಳ ನಿಯಂತ್ರಣಕ್ಕೆ ಒಳಪಡಿಸಿಬಿಟ್ಟಿವೆ!

ನಾವು ಉಡುವುದು, ತೊಡಗುವುದು, ಉಣ್ಣುವುದು, ತಿರುಗು ವುದು ಎಲ್ಲವೂ ಸ್ಟೇಟಸ್‌ಗೋಸ್ಕರ ಆಗಿಬಿಟ್ಟಿದೆ. ಒಂದೆರಡು ದಿನಗಳ ಕಾಲ ಸ್ಟೇಟಸ್ ಹಾಕದೆ, ಜಾಲತಾಣಗಳಲ್ಲಿ ನಮ್ಮ ಹೆಜ್ಜೆ ಗುರುತು ಮೂಡಿಸದಿದ್ದರೆ ನಾವು ಜೀವಂತವಾಗಿ ಇದ್ದೇವೋ ಇಲ್ಲವೋ ಎಂದು ಜನ ಅನುಮಾನಪಡುವ ಹಾಗಾಗಿದೆ.

ಮೊಬೈಲ್‌ನಲ್ಲಿ ಕ್ಯಾಮೆರಾ ಇರುವುದು ಹೊಸತರಲ್ಲಿ ಖುಷಿ ಕೊಟ್ಟಿತು. ಈಗ ಎಲ್ಲರೂ ಕ್ಯಾಮರಾಮನ್‌ಗಳಾಗಿ, ಬರಿಗಣ್ಣಿನಿಂದ ನೋಡಿ ಯಾವ ಕಾಲವಾಯಿತೋ? ಎಲ್ಲವನ್ನೂ ರೆಕಾರ್ಡ್ ಮಾಡುವ ಅಥವಾ ಸೆರೆಹಿಡಿಯುವ ಹುಕಿ. ಮಕ್ಕಳು ವೇದಿಕೆ ಮೇಲೆ ಬಹುಮಾನ ತೆಗೆದುಕೊಳ್ಳುವುದೋ, ನರ್ತಿಸುವುದೋ, ನಾಟಕ ಮಾಡುವುದೋ ಇವ್ಯಾವುದನ್ನೂ ನೋಡಿ ಸಂತೋಷಿಸಿ ಚಪ್ಪಾಳೆಯನ್ನೂ ತಟ್ಟದೆ ರೆಕಾರ್ಡ್ ಮಾಡಿಕೊಳ್ಳುತ್ತಿರುತ್ತಾರೆ. ಎಲ್ಲೋ ಉತ್ತಮ ನೃತ್ಯವೋ ಮತ್ತೊಂದೋ ನಡೆಯುತ್ತಿರುತ್ತದೆ. ಇವರು ವಿಡಿಯೋ ಮಾಡದಿದ್ದರೆ ಅದೇ ಅಪರಾಧವಾಗುತ್ತದೆ ಎನ್ನುವ ಮಟ್ಟಿಗೆ ತಲ್ಲೀನರಾಗಿರುತ್ತಾರೆ. ಪಾಪ ಅಲ್ಲೆಲ್ಲೋ ಫೋಟೋಗ್ರಾಫರ್ ಪೆಚ್ಚು ಮೋರೆ ಹಾಕಿಕೊಂಡು ನಿಂತಿರುತ್ತಾನೆ.

ಸೂರ್ಯ ಹುಟ್ಟುವುದು-ಮುಳುಗುವುದು, ಪಕ್ಷಿ ಹಾರುವುದು, ನಾಯಿ ಬೊಗಳುವುದು, ಬೆಕ್ಕು ಮಿಯಾಂವ್ ಎನ್ನುವುದು, ನೀರು ಹರಿಯುವುದು ಇಂತಹ ವಿಷಯಗಳಲ್ಲದೆ; ನಾವು ಎದ್ದಾಗಿನಿಂದ ಮಾಡುವ ಎಲ್ಲ ಕೆಲಸಗಳನ್ನೂ ಜಾಲತಾಣಕ್ಕೆ ಹರಿಬಿಡುವ ಕೆಟ್ಟ ಅಭ್ಯಾಸ ಎಲ್ಲರಿಗೂ ಆಗಿದೆ. ಮನೆ ಜಗಳಗಳು, ವೈಮನಸ್ಯಗಳು, ಸೂಕ್ಷ್ಮ ಅಥವಾ ಆಪ್ತ ಕ್ಷಣಗಳೂ ಇದಕ್ಕೆ ಹೊರತಾಗಿಲ್ಲ. ಎಲ್ಲ ಸಂಬಂಧಗಳನ್ನೂ ಪ್ರದರ್ಶಕ್ಕೆ ಇಡುವ ಚಟ ಬೆಳೆದುಬಿಟ್ಟಿದೆ.

ಗೊತ್ತು ಗುರಿ ಇಲ್ಲದೆ ರೀಲ್ಸ್ ಮಾಡುವ ಮತ್ತು ನೋಡುವ ಚಟ ನಮ್ಮೆಲ್ಲರಲ್ಲಿನ ಸೂಕ್ಷ್ಮತೆಯನ್ನೇ ಕೊಲ್ಲುತ್ತಿದೆ. ಹೇಳಬಾರದ, ಹೇಳಲಾಗದ, ಸೌಜನ್ಯವಲ್ಲದ, ನೈತಿಕತೆಯಲ್ಲದ, ಮಾನವೀಯವಲ್ಲದ ವಿಷಯಗಳ ಮೇಲೂ ರೀಲ್ಸ್, ಶಾಟ್ಸ್ ಮಾಡಿಕೊಂಡು ನಮ್ಮನ್ನು ನಾವು ಧೈರ್ಯಶಾಲಿಗಳು, ನೇರನುಡಿಯವರು, ನಿರ್ಭಯರು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅನುಭವಿಸುವವರು ಎಂದು ಭ್ರಮಿಸಿಕೊಂಡು ಹುಂಬತನದಿಂದ ವರ್ತಿಸುತ್ತಾ ಇರುವ ಎಷ್ಟೋ So Called Content Creators ಮತ್ತು Influencers ತಾವು ನಿರೀಕ್ಷೆ ಮಾಡಿದಷ್ಟು ಲೈಕುಗಳು ಕಮೆಂಟುಗಳು ಬರದಿದ್ದಾಗ ಖಿನ್ನತೆಗೆ ಜಾರುವುದು, ಆತ್ಮಹತ್ಯೆಗೆ ಪ್ರಯತ್ನಿಸುವುದು ಸರ್ವೇಸಾಮಾನ್ಯವಾಗಿದೆ. ಮೊಬೈಲ್ ನ ನಿರಂತರ ನೋಡುವಿಕೆಯಿಂದ ಉಂಟಾಗುವ ದೈಹಿಕ ನ್ಯೂನತೆಗಳು ಮಾನವರ ಜೀನ್ಸ್ ಅನ್ನೇ ಮಾರ್ಪಾಡು ಮಾಡುವಷ್ಟು ಪರಿಣಮಕಾರಿಯಾಗಿದೆ ಎಂಬುದು ಸಂಶೋಧನೆಯಿಂದ ಸಾಬೀತಾಗಿದೆ.

ಖಂಡಿತವಾಗಿ ಮೊಬೈಲ್ ವರಸಮಾನವಾದ ಆವಿಷ್ಕಾರ. ಆದರೆ ಮರ್ಕಟ ಬುದ್ಧಿಯವರಾದ ನಾವು ವರವನ್ನೂ ಶಾಪವನ್ನಾಗಿ ಪರಿವರ್ತಿಸಿರುವುದು ನಮ್ಮ ಅಗ್ಗಳಿಕೆ! ರೀಲ್ಸ್ ಶಾಟ್ಸ್, ಫೇಸ್ಬುಕ್ ಇನ್ಸ್ಟಾಗ್ರಾಮ್ ಗಳಲ್ಲೂ ಜ್ಞಾನದ ಹಸಿವಿಗೆ ಆಹಾರವಾಗುವಂತಹ ಅನೇಕ ಪೇಜ್‌ಗಳಿವೆ. ಶ್ರದ್ಧೆಯಿಂದ ಓದಿ ಐಎಎಸ್, ಕೆಎಎಸ್ ಪಾಸ್ ಮಾಡಿರುವ ಹಲವರು ಇಂತಹ ವಿಡಿಯೋಗಳಿಗೆ ಆಭಾರಿಯಾಗಿದ್ದಾರೆ.

ಮುಖ್ಯವಾಗಿ ಮಕ್ಕಳನ್ನು ಯುವ ಜನತೆಯನ್ನು ಈ ಇಂಟರ್ನೆಟ್ ಮತ್ತು ಮೊಬೈಲ್ ಕಬಂಧಬಾಹುಗಳಿಂದ ಹೇಗೆ ಕಾಪಾಡಬೇಕೆಂಬುದರ ಬಗ್ಗೆ ಚಿಂತನೆಗಳು ನಡೆಯುತ್ತಿದ್ದು, ಶಾಲೆಗಳಲ್ಲಿ, ಮನೆಗಳಲ್ಲಿ ಇದಕ್ಕೆ ಅಡಿಪಾಯ ಹಾಕಬೇಕಿದೆ. 16 ವರ್ಷದಿಂದ ಕೆಳಗಿನ ಮಕ್ಕಳಿಗೆ ಆಸ್ಟ್ರೇಲಿಯಾವು ಮೊಬೈಲ್ ಫೋನನ್ನು ನಿಷೇಧಿಸುವ ದಿಟ್ಟ ನಿರ್ಧಾರ ಕೈಗೊಂಡಿರುವ ಹಾಗೆ ಇಲ್ಲಿ ಮಾತ್ರವಲ್ಲ, ಎಲ್ಲೆಡೆ ಆಗಬೇಕು. ನೆದರ್‌ಲ್ಯಾಂಡ್ ಶಿಕ್ಷಣದ ಡಿಜಿಟಲೀಕರಣವನ್ನು ನಿಲ್ಲಿಸಿ ಮತ್ತೆ ಮುದ್ರಿತ ಪಠ್ಯಪುಸ್ತಕದ ಮೊರೆ ಹೋಗಿದೆ.

ಮೊಬೈಲ್ ಗೀಳನ್ನು ಬಿಡಿಸಲು ಈಗಾಗಲೇ ನೂರಾರು ಆಸ್ಪತ್ರೆಗಳಲ್ಲಿ ವಿಶೇಷ ವಿಭಾಗ ತೆರೆಯಲಾಗಿದ್ದು, ಅವುಗಳ ಸಂಖ್ಯೆ ಹೆಚ್ಚದಂತೆ ನೋಡಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯವಷ್ಟೇ ಅಲ್ಲ, ಈ ಹೊತ್ತಿನಲ್ಲಿ ಜರೂರಾಗಿ ಆಗಲೇಬೇಕಾದ ಕೆಲಸವಾಗಿದೆ. ಮೊಬೈಲ್ ನೋಡಿಕೊಂಡೇ ಮಕ್ಕಳನ್ನು ನಿರ್ಬಂಧಿಸುವ ಪೋಷಕರು ಬೇಡ. ಪುಸ್ತಕ ಓದಿಕೊಂಡು, ಇತರೇ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಪೋಷಕರು ಇಂದು ಮಕ್ಕಳಿಗೆ ಮಾದರಿಯಾಗಬೇಕಾಗಿದೆ.

ಇಂದಿನ ಯುವ ಸಮೂಹವನ್ನು Hollow Generation ಎಂದು ಕರೆಯುತ್ತಾರೆ. ಎಲ್ಲದರಲ್ಲೂ ಶ್ರದ್ಧೆ ಆಸಕ್ತಿ ಕಳೆದುಕೊಂಡಿರುವ ಈಗಿನ ಯುವಕ-ಯುವತಿಯರನ್ನು ಮರಳಿ ಬಿಸಿರಕ್ತದ ಸಂಪತ್ತನ್ನಾಗಿ ಮಾಡಬೇಕೆಂದರೆ, ಮೊಬೈಲ್ ಮತ್ತು ಇಂಟರ್ನೆಟ್‌ನ ಸದ್ಬಳಕೆಯನ್ನು ಮಾಡಲು ಅವರು ಕಲಿಯಬೇಕಾಗಿದೆ. ಅದಕ್ಕೆ ತಕ್ಕ ವೇದಿಕೆ ಒದಗಿಸಿಕೊಡುವ ನಿಟ್ಟಿನಲ್ಲಿ ನಮ್ಮ ಪ್ರಯತ್ನವಿರಬೇಕಿದೆ. ಪ್ರಯತ್ನವಷ್ಟೇ ಅಲ್ಲ ಕಾರ್ಯರೂಪಕ್ಕಿಳಿಯಬೇಕಿದೆ.

ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಬೆಂಗಳೂರಿನ ಕೆ.ಆರ್.ಮಾರುಕಟ್ಟೆ ಬಳಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವುದನ್ನು ಖಂಡಿಸಿ ಗಂಧದಗುಡಿ ಫೌಂಡೇಷನ್ ವತಿಯಿಂದ ನಗರದ ಗಾಂಧಿವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜ.22(ಜಿಎ)-ಬೆಂಗಳೂರಿನ ಕೆ.ಆರ್.ಮಾರುಕಟ್ಟೆ ಬಳಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವುದನ್ನು ಖಂಡಿಸಿ ಗಂಧದಗುಡಿ ಫೌಂಡೇಷನ್ ವತಿಯಿಂದ ನಗರದ ಗಾಂಧಿವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯದಲ್ಲಿ ದಿನೇ ದಿನೆ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯಂತಹ ಜನನಿಬಿಡ ಪ್ರದೇಶದಲ್ಲಿ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿರುವುದು ಖಂಡನೀಯ. ಇತ್ತೀಚೆಗೆ ದರೋಡೆ, ಅತ್ಯಾಚಾರದಂತಹ ಪ್ರಕರಣಗಳು ಹೆಚ್ಚುತ್ತಿದ್ದರೂ ಪೊಲೀಸರು ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು ವಿಫಲರಾಗಿದ್ದಾರೆ ಎಂದು ಕಿಡಿಕಾರಿದರು.

ರಾತ್ರಿ ವೇಳೆ ಒಂದು ಹೆಣ್ಣು ಒಬ್ಬಂಟಿಯಾಗಿ ಓಡಾಡಲು ಕಷ್ಟವಾಗಿದೆ. ಗಾಂಧೀಜಿ ಕಂಡ ರಾಮರಾಜ್ಯದ ಕನಸು ಬೆಂಗಳೂರಿನಲ್ಲಿ ಇಲ್ಲ. ಅಂತೆಯೇ ಬೀದರ್, ಮಂಗಳೂರು, ಮೈಸೂರಿನಲ್ಲಿ ದರೋಡೆ ನಡೆದಿದ್ದು, ವಿಜಯಪುರದಲ್ಲಿ ಕೂಲಿ ಕಾರ್ಮಿಕರ ಮೇಲೆ ಹಲ್ಲೆ ನಡೆದಿದೆ. ಇದೆಲ್ಲವೂ ಕಾನೂನು ಸುವ್ಯವಸ್ಥೆ ಹಾಳಾಗಿರುವುದರ ಸಂಕೇತ. ಕೂಡಲೇ ಅಪರಾಧಿಗಳನ್ನು ಬಂಧಿಸಿ ಕಾನೂನು ಸುವ್ಯವಸ್ಥೆ ಕಾಪಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ಉಪಾಧ್ಯಕ್ಷ ಮನೋಹರ್ ಗೌಡ, ನಗರ ಉಪಾಧ್ಯಕ್ಷ ಗೌತಮ್, ಮೇಘನ್ ರಾಜ್, ಅಭಿನಂದನ್ ಅರಸ್, ಅರ್ಜುನ್ ಪಾರ್ಥ, ಲೋಹಿತ್ ಶರ್ಮಾ, ಯಶೋಧಾ, ಸವಿತಾ, ಹೇಮಂತ್ ರಾವ್, ಚೇತನ್ ಶೆಟ್ಟಿ ಪಾಲ್ಗೊಂಡಿದರು.

ಜ.26, ಕ್ಯಾಂಡಲ್ ಲೈಟ್ ಮಾರ್ಚ್

ಮೈಸೂರು, ಜ.22-ಮೈಸೂರಿನ ಯಾದವಗಿರಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸ್ವಚ್ಛ ಮತ್ತು ಹಸಿರು ಯಾದವಗಿರಿಗಾಗಿ ಜ.26ರಂದು ಸಂಜೆ 7 ಗಂಟೆಗೆ ಯಾದವಗಿರಿಯ ಜಾಯ್ ಸರ್ಕಲ್‌ನಿಂದ 'ಕ್ಯಾಂಡಲ್ ಲೈಟ್ ಮಾರ್ಚ್' ಆಯೋಜಿಸಲಾಗಿದೆ. ಜಾಥಾಗೆ ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ಉಪಸ್ಥಿತರಿರಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಎಸ್.ಕೆ.ದಿನೇಶ್ 9845110202, ಭಾಮಿ ವಿ.ಶೆಣೈ 8861096205 ಸಂಪರ್ಕಿಸಲು ಪ್ರಕಟಣೆ ಕೋರಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮಂಡ್ಯಕ್ಕೆ ಕೃಷಿ ವಿವಿ; ಸಿಎಂ, ಡಿಸಿಎಂಗೆ ಅಭಿನಂದನೆ




ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಹಾಗೂ ಸರ್ಕಾರಿ ಸ್ವಾಮ್ಯದ ಮೈಸೂರು ಸಕ್ಕರೆ ಕಾರ್ಖಾನೆ ಕಳೆದ 24 ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದ ವಿದ್ಯುತ್ ಬಿಲ್ ರೂ. 52 ಕೋಟಿ ಮನ್ನಾ ಮಾಡಿರುವ ಹಿನ್ನೆಲೆಯಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಮಂಡ್ಯ ಜಿಲ್ಲೆಯ ಶಾಸಕರು ಬುಧವಾರ ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸಿದರು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಶಾಸಕರಾದ ನರೇಂದ್ರಸ್ವಾಮಿ, ರಮೇಶ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಉದಯಗೌಡ, ರವಿಶಂಕರ್, ಕೆ.ಹರೀಶ್‌ಗೌಡ, ದಿನೇಶ್ ಗೂಳೀಗೌಡ, ಮಧು ಮಾದೇಗೌಡ, ಮೈಷುಗರ್ ಅಧ್ಯಕ್ಷ ಗಂಗಾಧರ್ ಮತ್ತಿತರರು ಉಪಸ್ಥಿತರಿದ್ದರು.

ಸಂಪುಟದಿಂದ ಒಂದಿಬ್ಬರ ಕಿತ್ತಾಕಿ...!

- ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್
- ಒಂದಿಬ್ಬರ ಕಿತ್ತಾಕಿದರೆ ಎಲ್ಲವೂ ಸರಿಹೋಗುತ್ತೆ; ಧ್ವನಿಗೂಡಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ
- ನಾಯಕತ್ವ, ಪಕ್ಷ ಸಂಘಟನೆ ಬಗ್ಗೆ ಅಪಸ್ವರ ಎತ್ತುವವರಿಗೆ ಖಡಕ್ ಸಂದೇಶ ನೀಡಿದ ವರಿಷ್ಠರು

ಬೆಂಗಳೂರು, ಜ.22(ಕೆಎಂಶಿ)– ನಾಯಕತ್ವ ಮತ್ತು ಪಕ್ಷ ಸಂಘಟನೆಗೆ ಅಪಸ್ವರ ಎತ್ತುವ ಒಂದಿಬ್ಬರು ಸಚಿವರನ್ನು ಸಂಪುಟದಿಂದ ಕೈಬಿಡಿ ಎಂದು ಎಐಸಿಸಿ ವರಿಷ್ಠರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರುಗಳಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ.



ಬೆಳಗಾವಿಯಲ್ಲಿ ನಡೆದ ಗಾಂಧಿ ಭಾರತ ಸಮಾವೇಶದ ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸಮ್ಮುಖದಲ್ಲೇ ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಖಡಕ್ಕಾಗಿ ಈ ವಿಷಯ ತಿಳಿಸಿದ್ದಾರೆ.

ವೇಣುಗೋಪಾಲ್ ಮಾತಿನ ವೇಳೆ ಮಧ್ಯೆ ಪ್ರವೇಶಿಸಿದ ಖರ್ಗೆ, ಪರೀಕ್ಷೆ ಬರೆಯದವರನ್ನು ನಾವು ಪಾಸು ಮಾಡಲು ಸಾಧ್ಯವಿಲ್ಲ. ಪರೀಕ್ಷೆ ಬರೆದವರಿಗೆ ಹುದ್ದೆ ದೊರೆಯುತ್ತದೆ, ಏನೂ ಮಾಡದೆ, ಅಧಿಕಾರ ಬೇಕು ಎಂದರೆ, ನಮ್ಮಲ್ಲಿ ದೊರೆಯದು. ಒಂದಿಬ್ಬರನ್ನು ಕಿತ್ತಾಕಿ, ಎಲ್ಲವೂ ಸರಿಹೋಗುತ್ತೆ, ಅವರಿಂದ ಪಕ್ಷ ಮತ್ತು ಸರ್ಕಾರಕ್ಕೆ ಏನೂ ಆಗದು ಎಂದು ಖಾರವಾಗಿ ತಿಳಿಸಿದ್ದಾರೆ.

ಮುಂದುವರೆದು ಮಾತನಾಡಿದ ವೇಣುಗೋಪಾಲ್, ಹಣಕಾಸು ಖಾತೆಯನ್ನೂ ಹೊಂದಿರುವ ಸಿದ್ದರಾಮಯ್ಯ, ವಿಧಾನ ಮಂಡಲದಲ್ಲಿ 2025–26ನೇ ಸಾಲಿನ ಮುಂಗಡಪತ್ರ ಮಂಡಿಸಿ ಅನುಮತಿ ಪಡೆದುಕೊಳ್ಳುವವರೆಗೂ ಕರ್ನಾಟಕದ ಮಟ್ಟಿಗೆ ಯಾವುದೇ ರಾಜಕೀಯ ನಿರ್ಧಾರಗಳನ್ನು ಪಕ್ಷ ತೆಗೆದುಕೊಳ್ಳುವುದಿಲ್ಲ ಎಂದರು.

ಸಚಿವರು, ಮುಖಂಡರಲ್ಲಿ ನಾಯಕರ ಬಗ್ಗೆ ಅಸಮಾಧಾನ ಇದ್ದಲ್ಲಿ, ಅದನ್ನು ವರಿಷ್ಠರ ಮುಂದೆ ತೋಡಿಕೊಳ್ಳಲಿ, ಅದು ಬಿಟ್ಟು ಬಹಿರಂಗ ಹೇಳಿಕೆ ನೀಡಿದರೆ ಇನ್ನು ಮುಂದೆ ನಾವು ಸಹಿಸುವುದಿಲ್ಲ.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಹಾಗೂ ನಾಯಕತ್ವ ವಿಚಾರಕ್ಕೆ ಸಂಬಂಧಿಸಿದಂತೆ ಮೂರ್ನಾಲ್ಕು ಸಚಿವರು ಪದೇ ಪದೇ ಹೇಳಿಕೆ ನೀಡುತ್ತಿದ್ದಾರೆ.

ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಖುದ್ದಾಗಿ, ಇವರನ್ನು ಭೇಟಿ ಮಾಡಿ, ಇಲ್ಲವೇ ಸಂಪರ್ಕಿಸಿ, ವರಿಷ್ಠರ ನಿಲುವು ಏನೆಂಬುದನ್ನು ತಿಳಿಸಿದ್ದಾರೆ.

ಉಸ್ತುವಾರಿಗಳ ಮಾತಿಗೂ ಮನ್ನಣೆ ನೀಡದೆ, ನಾಯಕತ್ವದ ಬಗ್ಗೆ ಬಹಿರಂಗವಾಗಿ ಅಪಸ್ವರ ಎತ್ತಿರುವ ಇಬ್ಬರು ಸಚಿವರನ್ನು ಸಂಪುಟದಿಂದ ಕಿತ್ತೊಗೆಯಿರಿ ಎಂದು ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಿಗೆ ವೇಣುಗೋಪಾಲ್ ಸ್ಪಷ್ಟವಾಗಿ ತಿಳಿಸಿದ್ದಾರೆ.

ಸುರ್ಜೇವಾಲ ಅವರು, ಅಪಸ್ವರ ಎತ್ತಿರುವವರ ಜೊತೆಗೆ ಸಮಾಲೋಚನೆಗೆ ಬರುವ ಸಮಯದಲ್ಲೇ ವರಿಷ್ಠರು ಈ ಸಂದೇಶವನ್ನು ನೀಡಿಯೇ ಕಳುಹಿಸಿದ್ದರು.

ಇದಾದ ನಂತರವೂ ಅವರುಗಳು ಅದನ್ನೇ ಮುಂದುವರೆಸಿದ್ದರೆ, ಇಂತಹವರು ಅಧಿಕಾರದಲ್ಲಿ ಇರುವುದು ಬೇಡ, ಅವರಿಲ್ಲದೆ ಪಕ್ಷಕ್ಕೆ ಯಾವ ಹಾನಿಯೂ ಇಲ್ಲ.

ಕರ್ನಾಟಕದ ಮಟ್ಟಿಗೆ ಸಂಘಟನಾತ್ಮಕವಾಗಿ ಪಕ್ಷ ಮತ್ತು ಸರ್ಕಾರ ಬಲಿಷ್ಠವಾಗಿದೆ, ಹೀಗಾಗಿ ನೀವು ಯಾವುದೇ ಮುಲಾಜಿಗೆ ಒಳಗಾಗಬೇಡಿ, ನಾವು, ನಿಮಗೆ ಮುಕ್ತ ಅವಕಾಶ ನೀಡಿದ್ದೇವೆ ಎಂದು ತಿಳಿಸಿದ್ದಾರೆ.

ಮಧ್ಯಪ್ರದೇಶ, ರಾಜಸ್ತಾನ ಹಾಗೂ ಹರಿಯಾಣದಲ್ಲಿ ನಾವು ಸ್ವಲ್ಪ ಸಡಿಲ ಕೊಟ್ಟಿದ್ದರಿಂದ ಅಧಿಕಾರವನ್ನೇ ಕಳೆದುಕೊಳ್ಳಬೇಕಾಯಿತು, ನಮಗೆ ವ್ಯಕ್ತಿ ಮುಖ್ಯವಲ್ಲ ಪಕ್ಷ ಮುಖ್ಯ.

ನಮ್ಮ ಬಲ ಹೆಚ್ಚಿರುವಾಗ ಈ ಸಚಿವರುಗಳಿಗೆ ನೀವು ಅಂಜುವುದು ಬೇಡ ಎಂದಿದ್ದಲ್ಲದೆ, ಕರ್ನಾಟಕದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆ ಇಲ್ಲ. ಏನಿದ್ದರೂ ವರಿಷ್ಠರು ತೀರ್ಮಾನ ಮಾಡುತ್ತಾರೆ ಎಂದು ವೇಣುಗೋಪಾಲ್ ಹೇಳಿದ್ದಾರೆ.

ಸಮಾವೇಶಕ್ಕೂ ಮುನ್ನ ಖರ್ಗೆ ಅವರು, ಅಪಸ್ವರ ಎತ್ತದೆ, ಕೊಟ್ಟಿರುವ ಕೆಲಸವನ್ನು ಬಾಯಿ ಮುಚ್ಚಿಕೊಂಡು ಮಾಡಿ ಎಂದು ಕೆಲವು ಸಚಿವರಿಗೆ ಖಡಕ್ಕಾಗಿ ತಿಳಿಸಿದ್ದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಶಿವಕುಮಾರ್ ಕೆಳಗಿಳಿಯಬೇಕು, ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಅಧಿಕಾರದಲ್ಲಿ ಮುಂದುವರೆಯಬೇಕು ಎಂದು ಕೆಲವು ವಾದಿಸಿದ್ದರು.

ಅನ್ನದಾತ ಸುಖೀಭವ ರೈತ ನಮನ ಕಾರ್ಯಕ್ರಮ

ಮೈಸೂರು: ರೈತರು ಪ್ರತಿ ದಿನ ತಮ್ಮ ತೋಟ, ಹೊಲ ಗದ್ದೆಗಳಲ್ಲಿ ಉತ್ತು,ಬಿತ್ತಿ ಬೆವರು ಸುರಿಸಿ ಬೆಳೆ ಬೆಳೆಯುವುದರ ಫಲವೇ ನಮ್ಮೆಲ್ಲರ ಜೀವಾಳವಾಗಿದೆ ಎಂದು ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಹೇಳಿದರು.



ಮೈಸೂರಿನ ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಅನ್ನದಾತ ಸುಖೀಭವ ರೈತನಮನ ಕಾರ್ಯಕ್ರಮ ನಡೆಯಿತು.

ಸಂಸ್ಥೆಯು ಪರಿಸರ ದೀವಿಗೆ ಕಾರ್ಯಕ್ರಮದಡಿಯಲ್ಲಿ ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಏರ್ಪಡಿಸಿದ್ದ ಅನ್ನದಾತ ಸುಖೀಭವ ರೈತನಮನ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಅವರು, ಸೂಪರ್ ಮಾರುಕಟ್ಟೆಗಳಲ್ಲಿ ಕೇಳಿದಷ್ಟು ಬೆಲೆ ಕೊಟ್ಟು ಔಷಧಿ ಸಿಂಪಡಿಸಿರುವ ಹಣ್ಣು ತರಕಾರಿಗಳಿಗೆ ಹೆಚ್ಚಿನ ಮಾನ್ಯತೆ ನೀಡದೆ ಮನೆಯ ಮುಂದೆ ಮಾರಿಕೊಂಡು ಬರುವ ಬಡ ರೈತರಿಗೆ ಹೆಚ್ಚು ಪ್ರೋತ್ಸಾಹವನ್ನು ಹೆಂಗಸರು ನೀಡಬೇಕು ಎಂದರು. ಮಕ್ಕಳ ಹುಟ್ಟು ಹಬ್ಬ ಸಮಾರಂಭಗಳಲ್ಲಿ ಉಡುಗೊರೆಯಾಗಿ ಸಸಿಗಳನ್ನು ನೀಡುವ ಪರಿಪಾಠವನ್ನು ಇಂದಿನ ಮಕ್ಕಳಿಗೆ ಕಲಿಸಿಕೊಡಬೇಕು ಎಂದರು. ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕುವೆಂಪುನಗರ ಕೂಟದ ಸದಸ್ಯರು ತಾವು ಬೆಳೆದ ಮೊದಲ ಗಿಡದ ಬಗ್ಗೆ ಅನುಭವ ಹಂಚಿಕೊಂಡರು. ನಂತರ ಸಾಹಿತಿ ಶ್ರೀಮತಿ ನಾಗರತ್ನ, ಬಾಳೆ ಕುರಿತು ಉಪಯುಕ್ತ ಮಾಹಿತಿ ನೀಡಿದರು. ಶಾರದಾ ಮತ್ತು ಕಾತ್ಯಾಯಿನಿಯವರು ರೈತಗೀತೆಗಳನ್ನು ಹಾಡಿದರು. ಸಮಾರಂಭದಲ್ಲಿ ಎಲ್ಲಾ ಸಖಿಯರು ತಾವು ಮಾಡಿತಂದ ತಿನಿಸುಗಳನ್ನು ಹಂಚಿ 'ಅನ್ನದಾತ ಸುಖೀಭವ' ಎಂದು ರೈತರನ್ನು ಸ್ಮರಿಸಿದರು.

ಶಾಸಕ ಕೆ.ಹರೀಶ್‌ಗೌಡರಿಂದ ಸಂಚಾರಿ ರಕ್ತದಾನ; ಸಂಗ್ರಹಣ ವಾಹನ ಲೋಕಾರ್ಪಣೆ

ಮೈಸೂರು,ಜ.22–ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ರಕ್ತದಾನಿಗಳ ಅನುಕೂಲಕ್ಕಾಗಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಸಂಚಾರಿ ರಕ್ತದಾನ ಹಾಗೂ ಸಂಗ್ರಹಣ ವಾಹನದ ಲೋಕಾರ್ಪಣೆಯನ್ನು ಶಾಸಕ ಕೆ.ಹರೀಶ್ ಗೌಡ ನೆರವೇರಿಸಿದರು

ಬಳಿಕ ಮಾತನಾಡಿದ ಅವರು, ರಕ್ತದಾನ ಮಾಡಿದರೆ ದುರ್ಬಲರಾಗುತ್ತಾರೆ ಎಂಬುದು ಬರೀ ಸುಳ್ಳು, ಹಾಗೇನು ಆಗಲ್ಲ. ಅನೇಕ ತಪ್ಪು ಕಲ್ಪನೆಗಳಿಂದ ಜನ ರಕ್ತದಾನ ಮಾಡಲು ಮುಂದೆ ಬರುತ್ತಿಲ್ಲ ಎಂದು ತಿಳಿಸಿದ ಅವರು, ಈ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿದರೆ ಶೇ.100ರಷ್ಟು ರಕ್ತ ಪೂರೈಕೆ ಮಾಡಲು ಸಾಧ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಹೆಚ್ಚು ಜನ ರಕ್ತದಾನ ಮಾಡುವಂತೆ ಅದರಲ್ಲೂ ವಿಶೇಷವಾಗಿ ಯುವಕರು ರಕ್ತದಾನ ಮಾಡುವಂತೆ ಪ್ರೋತ್ಸಾಹಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎಂದು ವಿವರಿಸಿದರು. ಸಂಚಾರಿ ರಕ್ತದಾನ ಹಾಗೂ ಸಂಗ್ರಹಣ ವಾಹನ ಮೈಸೂರಿಗರಿಗೆ ಅವಶ್ಯಕತೆ ಇದೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು



ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಸಂಚಾರಿ ರಕ್ತದಾನ, ಸಂಗ್ರಹಣ ವಾಹನದ ಲೋಕಾರ್ಪಣೆಯನ್ನು ಶಾಸಕ ಹರೀಶ್‌ಗೌಡ ನೆರವೇರಿಸಿದರು.

ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಾರ್ವಜನಿಕರ ಅನುಕೂಲಕ್ಕಾಗಿ ರಕ್ತ ಸಂಗ್ರಹ ವಾಹನವನ್ನು ಲೋಕಾರ್ಪಣೆಗೊಳಿಸಿದ್ದೇವೆ. ಯಾರಾದರೂ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಮಾಡುವವರು ಮೊಬೈಲ್ 98446 13407 ಸಂಪರ್ಕಿಸಬಹುದು ಎಂದರು

ಇದೇ ಸಂದರ್ಭದಲ್ಲಿ ಜಿಲ್ಲಾ ಏಡ್ಸ್ ಪ್ರಬಂಧ ಮತ್ತು ನಿಯಂತ್ರಣ ಘಟಕ ಅಧಿಕಾರಿ ಡಾ.ಜಯಂತ್, ಮುತ್ತಣ್ಣ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಬಿಜೆಪಿ ನಗರ ಉಪಾಧ್ಯಕ್ಷ ಜೋಗಿ ಮಂಜು, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ನಗರ ಪಾಲಿಕೆ ಮಾಜಿ ಸದಸ್ಯರಾದ ಕೆ.ಜೆ.ರಮೇಶ್, ಸವಿತಾ ಘಾಟ್ಕೆ ದೇವೇಂದರ್ ಪರಿಹಾರ, ನವೀನ್, ಸಚಿನ್ ನಾಯಕ್, ಮಹಾನ್ ಶ್ರೇಯಸ್, ಸದಾಶಿವ್, ಸೂರಜ್ ಹಾಗೂ ರಕ್ತನಿಧಿ ಕೇಂದ್ರದ ಸಿಬ್ಬಂದಿ ಹಾಜರಿದ್ದರು.

ವಿಶ್ವನಾಥ್ ಕಾಂಗ್ರೆಸ್ ಏಜೆಂಟ್ ಆಗಿ ಕೆಲಸ ಮಾಡುವ ಅಗತ್ಯವಿಲ್ಲ

ಮೈಸೂರು, ಜ.22–ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಅವರು ಕಾಂಗ್ರೆಸ್ ಏಜೆಂಟ್ ಆಗಿ ಕೆಲಸ ಮಾಡುವ ಅಗತ್ಯವಿಲ್ಲ. ಸಿದ್ದರಾಮಯ್ಯ ಅವರು ಪೂರ್ಣಾವಧಿ ಸಿಎಂ ಆಗಿಯೇ ಮುಂದುವರಿಯಲಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಹೇಳಿದ್ದಾರೆ.



ಸುಬ್ರಹ್ಮಣ್ಯ

ಡಿ.ಕೆ.ಶಿವಕುಮಾರ್ ಸಿಎಂ ಆಗೋದನ್ನ ತಪ್ಪಿಸೋಕೆ ಯಾರಿಂದಲೂ ಸಾಧ್ಯವಿಲ್ಲ ಎಂಬ ಬಿಜೆಪಿ ಎಂಎಲ್‌ಸಿ ವಿಶ್ವನಾಥ್ ಹೇಳಿಕೆಗೆ ಅವರು ತಿರುಗೇಟು ನೀಡಿದ್ದಾರೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಚೆನ್ನಾಗಿಯೇ ಇದ್ದಾರೆ ಎಂದಿದ್ದಾರೆ.

ವಿಶ್ವನಾಥ್ ಅವರು ತಮ್ಮ ಪಕ್ಷದಲ್ಲಿ ಏನಾಗುತ್ತಿದೆ ಎಂದು ನೋಡದೇ ಬೇರೆ ಪಕ್ಷಗಳ ಆಂತರಿಕ ವಿಚಾರಗಳಲ್ಲಿ ಮೂಗು ತೂರಿಸುತ್ತಿದ್ದಾರೆ. ಸಿದ್ದರಾಮಯ್ಯರನ್ನ ಸಿಎಂ ಮಾಡಿದ್ದು ವಿಶ್ವನಾಥ್ ಅವರಲ್ಲ. ಕಾಂಗ್ರೆಸ್‌ನ ಹೈಕಮಾಂಡ್ ಹಾಗೂ 136 ಶಾಸಕರು. ಅವರ ನೇತೃತ್ವದಲ್ಲೇ ಮುಂದುವರಿಯಲು ಪಕ್ಷದ ಎಲ್ಲ ಶಾಸಕರ ಒಮ್ಮತವಿದೆ. ಹೀಗಿದ್ದ ಮೇಲೆ ವಿಶ್ವನಾಥ್ ಅವರು ಕಾಂಗ್ರೆಸ್ ಏಜೆಂಟ್ ರೀತಿ ಮಾತನಾಡುವ ಅವಶ್ಯಕತೆಯಿಲ್ಲ ಅನ್ನಿಸುತ್ತದೆ ಎಂದು ಕುಟುಕಿದ್ದಾರೆ. ತಮ್ಮದೇ ಪಕ್ಷದಲ್ಲಿ ರಾಜ್ಯಾಧ್ಯಕ್ಷರ ಕುರ್ಚಿ ಅಲುಗಾಡುತ್ತಿದೆ. ಮನೆಯೊಂದು ಮೂರು ಬಾಗಿಲಾಗಿದೆ. ಬಣ ಬಣ ಅಂತ ಬಡಿದಾಡಿಕೊಳ್ಳುತ್ತಿದ್ದಾರೆ. ಮೊದಲ ಆ ಸಮಸ್ಯೆ ಬಗೆಹರಿಸಿಕೊಳ್ಳಿ ಎಂದು ತಿರುಗೇಟು ನೀಡಿದ್ದಾರೆ.

ನಾಳೆ ಪೂರ್ವಭಾವಿ ಸಭೆ

ಮೈಸೂರು,ಜ.22– ಕಡಕೊಳ ಪಟ್ಟಣ ಪಂಚಾಯಿತಿ ಕಾರ್ಯಾಲಯದ ವತಿಯಿಂದ 2025–26ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆಯನ್ನು ಜ.24 ರಂದು ಬೆಳಗ್ಗೆ 11 ಗಂಟೆಗೆ ಕಡಕೊಳ ಪಟ್ಟಣದ ಪಂಚಾಯಿತಿಯ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸಭೆಗೆ ಕಡಕೊಳ ಪಪಂ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಗ್ರಾಪಂ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮಾಜಿ ನಾಮ ನಿರ್ದೇಶಿತ ಸದಸ್ಯರು, ಸಾರ್ವಜನಿಕರು, ಸಂಘ ಸಂಸ್ಥೆಗಳ ಮುಖ್ಯಸ್ಥರು, ಎನ್‌ಜಿಒ ಹಾಗೂ ಸ್ವಸಹಾಯ ಸಂಘದವರು ಆಗಮಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ಪ್ರಕಟಣೆ ತಿಳಿಸಿದೆ.

ರಸ್ತೆ ಧೂಳಿಗೆ ಕಂಗಾಲಾದ ಜನರು; ಆಕ್ರೋಶ

ಮೈಸೂರು,ಜ,22–ಮೈಸೂರಿನ 50ನೇ ವಾರ್ಡ್ ವ್ಯಾಪ್ತಿಯ ಸುಣ್ಣದಕೇರಿ, ನಾರಾಯಣ ಶಾಸ್ತ್ರಿ ರಸ್ತೆ, ಅಗ್ರಹಾರ ಸರ್ಕಲ್ ಮುಂದೆ ಇರುವ ಚಿಕ್ಕ ಆಂಜನೇಯ ದೇವಸ್ಥಾನ ಬಳಿ, ಯಾದವಗಿರಿ ರೈಲ್ವೆ ಟ್ರ್ಯಾಕ್ ಬಳಿ, ಚೆಲುವಾಂಬ ಪಾರ್ಕ್ ಬಳಿ ಹಾಗೂ ಜಯನಗರ ನ್ಯಾಯಾಲಯದ ಮುಂದೆ ದಿನ ನಿತ್ಯ ಧೂಳು ತುಂಬಿದ ರಸ್ತೆಯಲ್ಲಿ ಸಾಗುವ ಪಾದಚಾರಿಗಳು ಹಾಗೂ ವಾಹನ ಸವಾರರು ಕಂಗೆಟ್ಟು ಹೋಗಿದ್ದಾರೆ. ಮನೆಯಿಂದ ಹೊರ ಬಂದವರು ಮನೆಗೆ ಹೋಗುವ ಹೊತ್ತಿಗೆ ಮೈತುಂಬಾ ಧೂಳು ಆವರಿಸಿಕೊಂಡಿರುತ್ತದೆ.

50ನೇ ವಾರ್ಡ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಯುಜಿಡಿ ಸಮಸ್ಯೆಯಾಗಿತ್ತು. ಅದನ್ನು ಈಗ ಸರಿಪಡಿಸಿದ್ದು ಗುಂಡಿ ತೆಗೆದ ಮಣ್ಣು ರಸ್ತೆಯ ಮೇಲ್ಭಾಗ ರಾಶಿ ಬಿದ್ದಿದೆ. ಧೂಳಿನ ಪ್ರಮಾಣ ಹೆಚ್ಚಾಗಿದೆ. ಸಣ್ಣಪುಟ್ಟ ಅಪಘಾತಗಳು ದಿನನಿತ್ಯ ಸಂಭವಿಸುತ್ತಿವೆ. ಧೂಳಿನಿಂದ ಜನರ ಆರೋಗ್ಯ ಹದಗೆಟ್ಟಿದೆ ಎಂದು ಸ್ಥಳೀಯ ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಮೈಸೂರಿನ 50ನೇ ವಾರ್ಡ್ ವ್ಯಾಪ್ತಿಯ ಹಲವು ರಸ್ತೆಗಳು ಧೂಳಿನಿಂದ ತುಂಬಿವೆ.

ಸಹಜವಾಗಿ ಇಲ್ಲಿ ವಾಹನಗಳ ಓಡಾಟ ಹೆಚ್ಚಾಗಿರುತ್ತದೆ. ಹೀಗಾಗಿ ಬೆಳಿಗ್ಗೆಯಿಂದ ರಾತ್ರಿವರೆಗೆ ವಾಹನಗಳ ಓಡಾಟದಿಂದ ಏಳುವ ಧೂಳು ಇಡೀ ಪ್ರದೇಶದಲ್ಲಿ ಮಂಜು ಮುಸುಕಿದಂತೆ ಭಾಸವಾಗುತ್ತದೆ.

ನಗರದಿಂದ ನಿತ್ಯ ನೂರಾರು ಮಂದಿ ವಿದ್ಯಾರ್ಥಿಗಳು ಶಾಲೆ–ಕಾಲೇಜುಗಳಿಗೆ ಹೋಗುತ್ತಾರೆ. ಕೆಲ ವಿದ್ಯಾರ್ಥಿಗಳು ಶಾಲಾ ವಾಹನದಲ್ಲಿ, ಮತ್ತೆ ಕೆಲ ವಿದ್ಯಾರ್ಥಿಗಳ ಪೋಷಕರು ದ್ವಿಚಕ್ರ ವಾಹನಗಳಲ್ಲಿ ಕರೆದುಕೊಂಡು ಹೋಗುತ್ತಾರೆ. ಈ ರಸ್ತೆಯ ಧೂಳಿನ ಮಧ್ಯೆಯೇ ಮಕ್ಕಳು ಶಾಲೆಗೆ ಹೋಗುವಂತಾಗಿದೆ. ಯುಜಿಡಿ ಕಾಮಗಾರಿಯೇನೋ ಮುಗಿದಿದೆ. ಹಾಗಾಗಿ, ಇಲ್ಲಿನ ಮಣ್ಣಿನಿಂದ ಬರುತ್ತಿರುವ ಧೂಳು ಮೇಲೇಳದಂತೆ ತಾತ್ಕಾಲಿಕವಾಗಿ ನೀರು ಸಿಂಪಡಿಸಿ ನಂತರ ಅದಷ್ಟು ಬೇಗ ಡಾಂಬರೀಕರಣ ಮಾಡಬೇಕೆಂದು ಆಮ್ ಆದ್ಮಿ ಪಾರ್ಟಿ ಜಿಲ್ಲಾಧ್ಯಕ್ಷ ರಂಗಯ್ಯ, ನಗರಾಧ್ಯಕ್ಷ ಸೋಮಶೇಖರ್, 50ನೇ ವಾರ್ಡ್ ಆಮ್ ಆದ್ಮಿ ಪಕ್ಷದ ಯುವ ಮುಖಂಡ ಹೇಮಂತ್‌ಕುಮಾರ್ ಆಗ್ರಹಿಸಿದ್ದಾರೆ.

ಬಿಜೆಪಿ, ಆರ್‌ಎಸ್‌ಎಸ್ ಏಜೆಂಟ್ ಅಂತೆ ಇಡಿ!

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪ

ಮೈಸೂರು, ಜ.22(ಬಿಎಲ್‌ಯು)– ಬಿಜೆಪಿ ಹಾಗೂ ಆರ್‌ಎಸ್‌ಎಸ್ ಏಜೆಂಟ್ ಅಂತೆ ಕೆಲಸ ಮಾಡುತ್ತಿರುವ ಇಡಿ ವಿರುದ್ಧ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದು ದೂರು ನೀಡಿರುವುದಾಗಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ತಿಳಿಸಿದ್ದಾರೆ.



ಎಂ.ಲಕ್ಷ್ಮಣ

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಇಡಿ ತೆಗೆದುಕೊಳ್ಳುತ್ತಿರುವ ತೀರ್ಮಾನಗಳನ್ನು ಅವಲೋಕಿಸಿದಾಗ ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಾಲಂಗೋಚಿಯಾಗಿ ಕೆಲಸ ಮಾಡುತ್ತಿರುವುದು ದೃಢಪಡುತ್ತದೆ ಎಂದು ಆರೋಪಿಸಿದರು.

ಮುಡಾ ಹಗರಣಗಳ ಬಗ್ಗೆ ತನಿಖೆ ಇನ್ನು ಪೂರ್ಣಗೊಂಡಿಲ್ಲ, ತನಿಖಾ ಹಂತದಲ್ಲಿರುವಾಗ ಇಡಿ ಪತ್ರಿಕಾ ಹೇಳಿಕೆ ನೀಡುವ ಔಚಿತ್ಯವೇನು ಎಂದು ಪ್ರಶ್ನಿಸಿದ ಲಕ್ಷ್ಮಣ, ಸಿಎಂ ಸಿದ್ದರಾಮಯ್ಯ ಅವರೇ ನಿವೇಶನದ ಮೂಲ ಮಾಲೀಕರು ಎಂಬಂತೆ ಇಡಿ ಬಿಂಬಿಸಿದೆ ಎಂದು ಆಪಾದಿಸಿದರು.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ಈಗಾಗಲೇ 14 ನಿವೇಶನಗಳನ್ನು ಮುಡಾಗೆ ವಾಪಸು ನೀಡಿದ್ದಾರೆ. ಇದು ಮುಡಾ ಜಪ್ತಿ ಮಾಡಿರುವ ನಿವೇಶನ ಲೆಕ್ಕಕ್ಕೆ ಬರುವುದಿಲ್ಲ. ಆದರೂ ಮೈಸೂರಿನ ವಿಜಯನಗರದಲ್ಲಿ ಚದರಡಿಗೆ 17 ಸಾವಿರ ರೂಪಾಯಿ ದರ ನಿಗದಿ ಮಾಡಿ ಒಟ್ಟಾರೆ 14 ನಿವೇಶನದ ಮೌಲ್ಯವನ್ನು 56 ಕೋಟಿ ರೂಪಾಯಿ ಎಂದು ಲೆಕ್ಕ ಮಾಡಿದ್ದಾರೆ. ಇಡಿ ದರ ನಿಗದಿ ಮಾಡಿರುವಂತೆ ವಾಸ್ತವದಲ್ಲಿ ವಿಜಯನಗರದಲ್ಲಿ ಚದರಡಿಗೆ 17 ಸಾವಿರ ರೂಪಾಯಿ ಮಾರುಕಟ್ಟೆ ದರ ಇದೆಯೇ ಎಂದು ಪ್ರಶ್ನಿಸಿದರು.

ಇಡಿ ಈಗ ಜಪ್ತಿ ಮಾಡಿರುವ 142 ನಿವೇಶನದಲ್ಲಿ 97 ನಿವೇಶನಗಳು ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಸೇರಿದೆ. ಇಡಿಗೆ ತಾಕತ್ತು ಇದ್ದರೆ 97 ನಿವೇಶನ ಪಡೆದವರ ಹೆಸರು ಬಹಿರಂಗ ಮಾಡಲಿ ಎಂದು ಸವಾಲು ಹಾಕಿದರು.

ಕೆಲವೇ ದಿನದಲ್ಲಿ ಇಡಿಯವರು ಸಿದ್ದರಾಮಯ್ಯಗೆ ನೋಟಿಸ್ ಜಾರಿ ಮಾಡುತ್ತಾರೆ. ತರುವಾಯ ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ರಂತೆ ಬೆಳಗ್ಗಿನಿಂದ ರಾತ್ರಿ ತನಕ ಸಿದ್ದರಾಮಯ್ಯ ಅವರನ್ನು ವಿಚಾರಣೆ ಮಾಡಿ ಮಾನಸಿಕ ಕಿರುಕುಳ ನೀಡುತ್ತಾರೆ ಎಂದು ಲಕ್ಷ್ಮಣ ಭವಿಷ್ಯ ನುಡಿದರು.

ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ತಮ್ಮ ಪರ ವಾದ ಮಾಡಲು ದೆಹಲಿಯಿಂದ ನಾಲ್ವರು ಸುಪ್ರೀಂ ಕೋರ್ಟ್ ವಕೀಲರನ್ನು ಬೆಂಗಳೂರಿಗೆ ಕರೆಸುತ್ತಾರೆ. ಒಬ್ಬ ವಕೀಲನಿಗೆ ಕನಿಷ್ಠ 25 ಲಕ್ಷ ರೂಪಾಯಿ ನೀಡಬೇಕು. ಈ ಹಣ ಸ್ನೇಹಮಯಿ ಕೃಷ್ಣನಿಗೆ ಹೇಗೆ ಬಂದಿದೆ, ಯಾರು ಕೊಟ್ಟಿದ್ದಾರೆ ಎಂಬುದು ಯಕ್ಷಪ್ರಶ್ನೆಯಾಗಿದ್ದು, ಶೀಘ್ರದಲ್ಲೇ ಇದರ ಮಾಹಿತಿ ಬಹಿರಂಗ ಮಾಡುತ್ತೇನೆ ಎಂದು ತಿಳಿಸಿದರು.

ನಾವು ಸ್ನೇಹಮಯಿ ಕೃಷ್ಣ ವಿರುದ್ಧ ದೂರು ನೀಡಿದರೆ ಪ್ರಕರಣ ದಾಖಲಿಸುವುದಿಲ್ಲ. ಅದೇ ಸ್ನೇಹಮಯಿ ಕೃಷ್ಣ ಬೆಳಿಗ್ಗೆ ದೂರು ನೀಡಿದರೆ ಅದೇ ದಿನ ಸಂಜೆ ವೇಳೆಗೆ ಪ್ರಕರಣ ದಾಖಲಿಸುತ್ತಾರೆ. ನಮ್ಮದು ಇಂತಹ ಪೊಲೀಸ್ ವ್ಯವಸ್ಥೆ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ ಅಸಮಾಧಾನ ವ್ಯಕ್ತಪಡಿಸಿದರು.


ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಹಾಗೂ ಮಾಧ್ಯಮ ವಕ್ತಾರ ಮಹೇಶ್ ಪತ್ರಿಕಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ರಾಜ್ಯದ ತಿರುಪತಿ ಭಕ್ತರಿಗೆ 132 ಕೊಠಡಿಗಳ ನೂತನ ಐಹೊಳೆ ವಸತಿ ಗೃಹ ಲೋಕಾರ್ಪಣೆ

ಬೆಂಗಳೂರು, ಜ.22– ತಿರುಪತಿಯಲ್ಲಿ ಕರ್ನಾಟಕ ರಾಜ್ಯ ಛತ್ರದಲ್ಲಿ ನೂತನವಾಗಿ ನಿರ್ಮಿಸಿರುವ 'ಐಹೊಳೆ' ಹೆಸರಿನ 132 ಕೊಠಡಿಗಳ ನೂತನ ಬ್ಲಾಕ್ ಅನ್ನು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಲೋಕಾರ್ಪಣೆಗೊಳಿಸಿದರು.

ಕರ್ನಾಟಕ ಸರ್ಕಾರವು ವೆಂಕಟೇಶ್ವರ ಸ್ವಾಮಿಯ ದರ್ಶನಕ್ಕಾಗಿ ಭೇಟಿ ನೀಡುವ ಯಾತ್ರಾರ್ಥಿಗಳಿಗೆ 200 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಮೂರು ವಸತಿ ಸಂಕೀರ್ಣಗಳು, ಒಂದು ಸುಸಜ್ಜಿತ ಕಲ್ಯಾಣ ಮಂಟಪ ಹಾಗೂ ಹಾಲಿ ಇದ್ದ ಪ್ರವಾಸಿ ಸೌಧವನ್ನು ಉನ್ನತೀಕರಿಸುವ ಕಾಮಗಾರಿ ಕೈಗೆತ್ತಿಕೊಂಡಿದ್ದು, ಮೊದಲ ಹಂತದಲ್ಲಿ ಕರ್ನಾಟಕ ರಾಜ್ಯ ಛತ್ರದಲ್ಲಿ ನೂತನವಾಗಿ ನಿರ್ಮಿಸಿರುವ ವಸತಿ ಸಂಕೀರ್ಣಗಳ ಪೈಕಿ 132 ಹವಾ ನಿಯಂತ್ರಣರಹಿತ ಕೊಠಡಿಗಳನ್ನು ಹೊಂದಿರುವ ಐಹೊಳೆ ಬ್ಲಾಕ್ ಲೋಕಾರ್ಪಣೆಗೊಳಿಸಲಾಗಿದೆ.

ಈಗಾಗಲೇ 110 ಎಸಿ ಕೊಠಡಿಗಳ ಬ್ಲಾಕ್–2 (ಹಂಪಿ ಬ್ಲಾಕ್) ಅನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಲೋಕಾರ್ಪಣೆಗೊಳಿಸಲಾಗಿದೆ. ಈ ಕಟ್ಟಡದಲ್ಲಿನ ಪ್ರತಿ ಕೊಠಡಿಗಳಿಗೆ 24 ಗಂಟೆಗಳ ಅವಧಿಗೆ ಕೊಠಡಿ ನಿರ್ವಹಣಾ ಶುಲ್ಕ 1,350 ರೂ. (ಜಿಎಸ್‌ಟಿ ಸೇರಿ) ನಿಗದಿಪಡಿಸಿದ್ದು, ಕಡಿಮೆ ಬೆಲೆಯಲ್ಲಿ ಸುಸಜ್ಜಿತ ಕೊಠಡಿಗಳನ್ನು ಯಾತ್ರಾರ್ಥಿಗಳಿಗೆ ಒದಗಿಸುವ ಮೂಲಕ ಅನುಕೂಲ ಮಾಡಿಕೊಡಲಾಗಿದೆ.



ಧಾರ್ಮಿಕ ದತ್ತಿ ಇಲಾಖೆಯ ಕರ್ನಾಟಕ ದೇವಾಲಯಗಳ ವಸತಿ ಕಾಯ್ದಿರಿಸುವಿಕೆಯ ವೆಬ್‌ಸೈಟ್ https://karnatakatemples accommodation.com/e/temples/karnataka-pravasi-saudha-tirumala ಮೂಲಕ ಶೇ.60ರಷ್ಟು ಹಾಗೂ ಶೇ.40ರಷ್ಟು ಕೊಠಡಿಗಳನ್ನು ಆಫ್‌ಲೈನ್ ಮೂಲಕ ಹಂಚಿಕೆ ಮಾಡಲಾಗುತ್ತಿದೆ.

ತಿರುಮಲದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ವಸತಿ ಸಂಕೀರ್ಣ ಮತ್ತು ಶ್ರೀಕೃಷ್ಣದೇವರಾಯ ಬ್ಲಾಕ್‌ನಲ್ಲಿನ 36 ಹವಾನಿಯಂತ್ರಿತ ಸೂಟ್‌ಗಳನ್ನು ಹಾಗೂ 500 ಆಸನಗಳ ಸಾಮರ್ಥ್ಯವುಳ್ಳ ತಿರುಮಲದಲ್ಲಿಯೇ ಬೃಹತ್ ಹಾಗೂ ನವೀನವಾದದ್ದರಿಂದ ಸುಸಜ್ಜಿತ ಕಲ್ಯಾಣ ಮಂಟಪವಾದ ಶ್ರೀ ಕೃಷ್ಣ ಒಡೆಯರ್ ಬ್ಲಾಕ್ ಕಟ್ಟಡಗಳ ಕಾಮಗಾರಿ ಮುಕ್ತಾಯಗೊಂಡಿದ್ದು, ಅಂತಿಮ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲಾಗುತ್ತಿದೆ.

ತಿರುಪತಿ ಹಾಗೂ ತಿರುಚನೂರಿನ ಕರ್ನಾಟಕ ರಾಜ್ಯ ಛತ್ರದಲ್ಲಿ ಹಾಲಿ ಇರುವ 24 ಕೊಠಡಿಗಳನ್ನು ಮತ್ತು ಕಲ್ಯಾಣ ಮಂಟಪಗಳನ್ನು ನವೀಕರಿಸಿ, ಯಾತ್ರಾರ್ಥಿಗಳಿಗೆ ಹಂಚಿಕೆ ಮಾಡುವ ಕಾರ್ಯ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ರಾಜ್ಯ ಛತ್ರದಲ್ಲಿ 50 ಸುಸಜ್ಜಿತ ಕೊಠಡಿಗಳು ಹಾಗೂ ವಾಣಿಜ್ಯ ಮಳಿಗೆಗಳನ್ನು ಒಳಗೊಂಡ ನೂತನ ಕಟ್ಟಡವನ್ನು ನಿರ್ಮಿಸಲು ಯೋಜನೆ ಸಿದ್ಧಗೊಳಿಸಲಾಗುತ್ತಿದೆ. ಕಲ್ಯಾಣ ಮಂಟಪ ಬ್ಲಾಕ್ ಹಾಗೂ ವಿವಿಐಪಿ ಕೊಠಡಿಗಳ ಬ್ಲಾಕ್ 2025ರ ಏಪ್ರಿಲ್ ಅಥವಾ ಮೇನಲ್ಲಿ ಸಂಪೂರ್ಣವಾಗಿ ಪೂರ್ಣಗೊಳ್ಳಲಿದ್ದು, ಈ ಕಟ್ಟಡಗಳ ಉದ್ಘಾಟನಾ ಸಮಾರಂಭವನ್ನು ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನೆರವೇರಿಸಲಾಗುತ್ತಿದೆ.

ಜೀವ ಉಳಿಸಿದ ಆಟೋ ಚಾಲಕನ ಭೇಟಿಯಾದ ನಟ ಸೈಫ್ ಅಲಿಖಾನ್

ಮುಂಬೈ,ಜ.22–ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದ ಆಟೋ ಚಾಲಕ ಭಜನ್ ಸಿಂಗ್ ರಾಣಾ ಅವರನ್ನು ನಟ ಸೈಫ್ ಅಲಿಖಾನ್ ಭೇಟಿಯಾಗಿ ಧನ್ಯವಾದಗಳನ್ನು ಸಲ್ಲಿಸಿದ್ದಾರೆ. ಲೀಲಾವತಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವ ಮುನ್ನ ಆಟೋ ಚಾಲಕ ಭಜನ್ ಸಿಂಗ್ ಅವರನ್ನು ಸೈಫ್ ಅಲಿಖಾನ್ ಕರೆಸಿಕೊಂಡಿದ್ದರು. ಭಜನ್ ಸಿಂಗ್ ರಾಣಾ ಹೆಗಲ ಮೇಲೆ ಕೈ ಹಾಕಿ ಸೈಫ್ ಅಲಿಖಾನ್ ಫೋಟೋ ಕ್ಲಿಕ್ಕಿಸಿಕೊಂಡಿದ್ದಾರೆ. ಸದ್ಯ ಫೋಟೋಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿವೆ. ಭಜನ್ ಸಿಂಗ್ ರಾಣಾ ಸಹ ನಗುತ್ತಾ ಫೋಟೋಗೆ ಪೋಸ್ ನೀಡಿದ್ದಾರೆ.



ಸೈಫ್ ಅಲಿಖಾನ್ ಭೇಟಿ ಬಳಿಕ ಮಾತನಾಡಿರುವ ಆಟೋ ಚಾಲಕ ಭಜನ್ ಸಿಂಗ್, ಮೊದಲು ಅವರ ಪಿಎ ಕಾಲ್ ಮಾಡಿ, ಭೇಟಿ ಮಾಡುವ ಸಮಯ ಹೇಳಿದ್ದರು. ಆಸ್ಪತ್ರೆ ಒಳಗೆ ಹೋಗುತ್ತಿದ್ದಂತೆ ಅಲ್ಲಿದ್ದ ಸೈಫ್ ಅಲಿಖಾನ್ ಕುಟುಂಬಸ್ಥರು, ಥ್ಯಾಂಕ್ ಯು ಎಂದು ಹೇಳಿದರು. ಅಲ್ಲಿ ಅವರ ಮಕ್ಕಳು ಸೇರಿದಂತೆ ತುಂಬಾ ಜನರಿದ್ದರು. ನಾನು ಹೆಚ್ಚು ಸಿನಿಮಾ ನೋಡದ ಕಾರಣ ನನಗೆ ಹಲವರ ಪರಿಚಯ ಇರಲಿಲ್ಲ. ವಾರ್ಡ್ ಒಳಗೆ ಹೋದಾಗ ಸೈಫ್ ಮತ್ತು ಅವರ ತಾಯಿ ಸಹ ಇದ್ದರು. ತುಂಬಾ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ತಾಯಿ–ಮಗ ಧನ್ಯವಾದಗಳನ್ನು ಸಲ್ಲಿಸಿದರು. ನನ್ನನ್ನು ಕರೆಸಿ ಮಾತನಾಡಿದ್ದಕ್ಕೆ ತುಂಬಾ ಖುಷಿಯಾಯ್ತು. ಸೈಫ್ ಅಲಿಖಾನ್ ಆರೋಗ್ಯ ಸುಧಾರಣೆ ಆಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಆಟೋದಲ್ಲಿ ಹೋಗುವಾಗ ನಿಧಾನಕ್ಕೆ ಹೋಗು ಎಂದು ಸೈಫ್ ಹೇಳುತ್ತಿದ್ದರು. ಗಾಯವಾಗಿದ್ದರಿಂದ ಸೈಫ್ ಅಲಿಖಾನ್ ಅವರಿಗೆ ನೋವು ಆಗುತ್ತಿತ್ತು. ಮುಂದೆ ಯಾವುದೇ ಸಹಾಯ ಬೇಕಾದರೂ ತಮ್ಮನ್ನು ಭೇಟಿಯಾಗುವಂತೆ ಹೇಳಿದ್ದು ಖುಷಿಯಾಯಿತು. ಸೆಲ್ಫಿ ಕೇಳಿದಾಗ ತಮ್ಮ ಸಹಾಯಕನಿಗೆ ಹೇಳಿ ನನ್ನ ಜೊತೆ ಫೋಟೋ ಕ್ಲಿಕ್ಕಿಸಿಕೊಂಡರು ಎಂದು ಭಜನ್ ಸಿಂಗ್ ಹೇಳಿದರು.

ಜನವರಿ 16ರ ಬೆಳಗಿನ ಜಾವ ಸೈಫ್ ಅಲಿಖಾನ್ ಮೇಲೆ ಚಾಕುವಿನಿಂದ ದಾಳಿ ನಡೆಸಲಾಗಿತ್ತು. ಮನೆಯಲ್ಲಿ ಯಾವುದೇ ಕಾರು ಲಭ್ಯವಿರದ ಕಾರಣ, ಗಾಯಗೊಂಡಿದ್ದ ಸೈಫ್ ಅಲಿಖಾನ್ ಅವರನ್ನು ಆಟೋ ಮೂಲಕ ಲೀಲಾವತಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ವೇಳೆ ಭಜನ್ ಸಿಂಗ್ ರಾಣಾ ಯಾವುದೇ ಶುಲ್ಕ ಪಡೆಯದೇ ಹಿಂದಿರುಗಿದ್ದರು.


ಸಂಸ್ಥೆಯಿಂದ ನಗದು ಬಹುಮಾನ: ಖಾಸಗಿ ಸಂಸ್ಥೆಯೊಂದು ಭಜನ್ ಸಿಂಗ್ ರಾಣಾ ಅವರನ್ನು ಸನ್ಮಾನಿಸಿ 11 ಸಾವಿರ ರೂಪಾಯಿ ಚೆಕ್ ವಿತರಿಸಿ ಗೌರವಿಸಿದೆ. ಆಟೋ ಚಾಲಕ ಭಜನ್ ಸಿಂಗ್ ರಾಣಾ ಮೂಲತಃ ಉತ್ತರಾಖಂಡದವರಾಗಿದ್ದು, ಕಳೆದ ಹಲವು ವರ್ಷಗಳಿಂದ ಮುಂಬೈನಲ್ಲಿ ನೆಲೆಸಿದ್ದಾರೆ. ಸೈಫ್ ಅಲಿಖಾನ್ ಪ್ರಕರಣದ ನಂತರ ಭಜನ್ ಸಿಂಗ್ ರಾಣಾ ಹೆಸರು ಮುನ್ನೆಲೆಗೆ ಬಂದಿದೆ.

ಬೀಡಿ, ಸಿಗರೇಟ್, ಸಕ್ಕರೆ, ಟೀ ಪುಡಿ ಕದ್ದ ಕಳ್ಳ

ಕೆ.ಆರ್.ಪೇಟೆ,ಜ.22– ಎಸ್‌ಎಲ್‌ಎನ್ ಸ್ಟೀಲ್ ಅಂಗಡಿಯಲ್ಲಿದ್ದ ಚಿಲ್ಲರೆ ಹಣ, ಟೀ ಅಂಗಡಿಯಲ್ಲಿ ಬೀಡಿ, ಸಿಗರೇಟ್, ಸಕ್ಕರೆ ಮತ್ತು ಟೀಪುಡಿಯನ್ನು ಕಳ್ಳ ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಮಂಗಳವಾರ ರಾತ್ರಿ ಸಂಭವಿಸಿದೆ.

ಸಿಂಧಘಟ್ಟ ಲೋಹಿತ್ ಅವರಿಗೆ ಸೇರಿದ ಪಟ್ಟಣದ ಎಸ್‌ಎಲ್‌ಎನ್ ಕಬ್ಬಿಣ ಮತ್ತು ಸಿಮೆಂಟ್ ಅಂಗಡಿಯ ರೋಲಿಂಗ್ ಶೆಟ್ಟರ್ ಮುರಿದು ಒಳ ನುಗ್ಗಿರುವ ಕಳ್ಳರು ಹೆಚ್ಚು ಹಣ ಸಿಗದೆ ಇದ್ದುದ್ದರಿಂದ ಸಿಕ್ಕಷ್ಟು ಚಿಲ್ಲರೆ ಕಾಸನ್ನೇ ಕಳ್ಳತನ ಮಾಡಿಕೊಂಡು ಹೋಗಿದ್ದಾನೆ. ಅಲ್ಲದೆ ಇದೇ ಅಂಗಡಿ ಪಕ್ಕದಲ್ಲಿಯೇ ಇರುವ ಟೀ ಕ್ಯಾಂಟೀನ್‌ಗೂ ಕನ್ನ ಹಾಕಿರುವ ಕಳ್ಳ ಅಲ್ಲಿದ್ದ ಸುಮಾರು ಏಳೆಂಟು ಸಾವಿರ ಬೆಲೆ ಬಾಳುವ ಬೀಡಿ, ಸಿಗರೇಟು ಪ್ಯಾಕುಗಳು, ಸಕ್ಕರೆ, ಟೀ ಪುಡಿ, ಕಾಫಿ ಪುಡಿ ಪೊಟ್ಟಣಗಳನ್ನೇ ಕದ್ದು ಪರಾರಿಯಾಗಿದ್ದಾನೆ.

ಗಸ್ತು ಹೆಚ್ಚಿಸಲು ನಾಗರೀಕರ ಆಗ್ರಹ: ಮುಖ್ಯ ರಸ್ತೆಯಲ್ಲಿಯೇ ಕಳ್ಳತನ ನಡೆದಿರುವ ಕಾರಣ ಪೊಲೀಸ್ ಅಧಿಕಾರಿಗಳು ರಾತ್ರಿ ವೇಳೆ ಗಸ್ತು ವ್ಯವಸ್ಥೆಯನ್ನು ಮತ್ತಷ್ಟು ಹೆಚ್ಚಿಸಬೇಕು. ರಾತ್ರಿ ವೇಳೆ ಅನುಮಾನಾಸ್ಪದವಾಗಿ ಓಡಾಡುವ ವ್ಯಕ್ತಿಗಳ ಬಗ್ಗೆ ನಿಗಾ ಇಡಬೇಕು. ಅಂತಹವರನ್ನು ಠಾಣೆಗೆ ಕರೆದು ವಿಚಾರಣೆಗೆ ಗುರಿಪಡಿಸಬೇಕು. ಈ ಮೂಲಕ ಕಳ್ಳತನಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ವ್ಯಾಪಾರಿಗಳು ಒತ್ತಾಯ ಮಾಡಿದ್ದಾರೆ.



ಕಳ್ಳ ಎಸ್‌ಎಲ್‌ಎನ್ ಸ್ಟೀಲ್ ಅಂಗಡಿಯ ಬಾಗಿಲು ಮುರಿದು ಕಳ್ಳತನ ಮಾಡುತ್ತಿರುವ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿರುವುದು.

ನಾಳೆ ಉದ್ಯೋಗಕ್ಕಾಗಿ ನೇರ ಸಂದರ್ಶನ

ಮಂಡ್ಯ, ಜ.22– ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಹಾಗೂ ಮೆ॥ ಚೈತನ್ಯ ಇಂಡಿಯಾ ಫಿನ್ ಕ್ರೆಡಿಟ್ ಪ್ರೈ., ಲಿ, ಮೆ॥ ಕ್ವಸ ಟೆನೆಂಟ್ ಸಲ್ಯೂಷನ್ ಪ್ರೈ., ಲಿ, ಮೆ॥ ಕಾಡ್‌ಮ್ಯಾಕ್ಸ್ ಸಲ್ಯೂಷನ್ ಎಜುಕೇಷನ್ ಟ್ರಸ್ಟ್, ಮೆ॥ ಹೆಚ್.ಡಿ.ಎಫ್.ಸಿ ಲೈಫ್ ಇನ್ಶೂರೆನ್ಸ್ ಮತ್ತು ಮುತ್ತೂಟ್ ಫೈನಾನ್ಸ್ ಲಿ., ಸಂಸ್ಥೆಗಳ ಸಹಯೋಗದಲ್ಲಿ ಜ.2ರಂದು ನೇರ ಸಂದರ್ಶನ ನಡೆಯಲಿದೆ.

ತಮ್ಮ ಸಂಸ್ಥೆಯಲ್ಲಿ ಖಾಲಿಯಿರುವ "ಕಸ್ಟಮರ್ ರಿಲೇಷನ್ ಶಿಪ್ ಎಕ್ಸಿಕ್ಯೂಟಿವ್, ಹೆಚ್.ಆರ್ ರಿಕ್ರೂಟರ್, ಅಪ್ರೆಂಟಿಸ್ ಟ್ರೈನಿ, ಫೈನಾನ್ಷಿಯಲ್ ಕನ್ಸಲ್ಟೆಂಟ್ & ಇಂಟರ್ನ್‌ಶಿಪ್ ಟ್ರೈನಿಂಗ್"ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ, ಐ.ಟಿ.ಐ& ಯಾವುದೇ ಸ್ನಾತಕೋತ್ತರ ಪದವಿ ಉತ್ತೀರ್ಣರಾದ 18 ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಜನವರಿ 24ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಆರ್‌ಟಿಓ ಕಛೇರಿ ಎದುರು, ಮಂಡ್ಯ, ಇಲ್ಲಿ ತಮ್ಮ ರೆಸ್ಯೂಮೆ, ಬಯೋಡೇಟಾಗಳೊಂದಿಗೆ ನೇರ ಸಂದರ್ಶನದಲ್ಲಿ ಹಾಜರಾಗಿ ಉದ್ಯೋಗ ಪಡೆಯಬಹುದಾಗಿದೆ ಎಂದು ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08232–295124 ಮತ್ತು 9164642684, 8970666629 & 8660061488 ಸಂಖ್ಯೆಗಳಿಗೆ ಸಂಪರ್ಕಿಸಬಹುದಾಗಿದೆ.

ನಾಳೆಯಿಂದ ಮಂಡ್ಯದಲ್ಲಿ ಫಲಪುಷ್ಪ ಪ್ರದರ್ಶನ

ಫಲಪುಷ್ಪ ಪ್ರದರ್ಶನದ ಪ್ರಮುಖ ಆಕರ್ಷಣೆಗಳು

ಪ್ರಸ್ತುತ ಸಾಲಿನ ಫಲಪುಷ್ಪ ಪ್ರದರ್ಶನದಲ್ಲಿ 9ಲಕ್ಷ ವಿವಿಧ ಬಣ್ಣದ ಸೇವಂತಿಗೆ ಮತ್ತು ವಿವಿಧ ಬಣ್ಣದ ಗುಲಾಬಿ ಹೂವುಗಳನ್ನು ಬಳಸಿ ಪ್ರಸಿದ್ಧ ದೇವಾಲಯ ಹಾಗೂ ಪ್ರಸಿದ್ಧ ಪ್ರವಾಸಿ ತಾಣಗಳನ್ನು ನಿರ್ಮಿಸಿ ಆಕರ್ಷಿಸಲಾಗುವುದು. ಜಿಲ್ಲೆಯ ಪ್ರಸಿದ್ಧ ದೇವಾಲಯವಾದ ಮೇಲುಕೋಟೆಯ ಯೋಗನರಸಿಂಹ ಸ್ವಾಮಿ ದೇವಾಲಯ, ಕರ್ನಾಟಕ ಪ್ರಸಿದ್ಧ ಪ್ರವಾಸಿ ತಾಣವಾದ ರಂಗನತಿಟ್ಟು, ಹಳ್ಳಿ ಸೊಗಡಿನ ರೈತನ ಮನೆ, ಏಳು ಬೆಟ್ಟದ ಒಡೆಯ ಮಲೆ ಮಹದೇಶ್ವರ ದೇವಾಲಯಗಳು, ಫಲಪುಷ್ಪ ಪ್ರದರ್ಶನದ ಆಕರ್ಷಣೆಗಳಾಗಲಿವೆ. ಯುವ ಜನತೆಯನ್ನು ಸೆಳೆಯಲು ಹತ್ತು ವಿವಿಧ ಕಡೆಗಳಲ್ಲಿ ಸೆಲ್ಫಿ ಪಾಯಿಂಟ್, ಹೂವಿನ ಆಕೃತಿಯ ಕ್ಷಯ ರೋಗ ಕುರಿತು ಜಾಗೃತಿ, ನರೇಗಾ ಯೋಜನೆಯ ಮಾಹಿತಿ ಯೊಳಗೊಂಡ ಸ್ತಬ್ಧ ಚಿತ್ರ, ವಿವಿಧ ಆರ್ಕಿಡ್ ಬಗೆಯ ಅಡೆನಿಯಂ ಗಿಡಗಳ ಪ್ರದರ್ಶಿಕೆ, ಬೋನ್ಸಾಯ್ ಗಿಡಗಳ ಪ್ರದರ್ಶಿಕೆ, ವಿವಿಧ ತರಕಾರಿ ಹಣ್ಣುಗಳನ್ನು ಬಳಸಿ ಕಲಾಕೃತಿಗಳ ಕೆತ್ತನೆ ಹಾಗೂ ಇಕೆಬಾನ ಜೋಡಣೆ ಆಕರ್ಷಿಸಲಿವೆ.

9 ಲಕ್ಷ ವಿವಿಧ ಬಣ್ಣದ ಸೇವಂತಿಗೆ ಮತ್ತು ಗುಲಾಬಿ ಹೂವುಗಳಿಂದ ಪ್ರವಾಸಿ ತಾಣ, ದೇವಾಲಯಗಳ ನಿರ್ಮಾಣ


ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಮಂಡ್ಯ, ಜ.22– ಜಿಲ್ಲಾ ಪಂಚಾಯತ್, ತೋಟಗಾರಿಕಾ ಸಂಸ್ಥೆ, ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಪ್ರತಿ ತುತ್ತೂ ರೈತರನ್ನು ಸ್ಮರಿಸೋಣ ಶೀರ್ಷಿಕೆಯಡಿ ಜನವರಿ 24 ರಿಂದ 28 ರವರೆಗೆ ನಗರದ ತೋಟಗಾರಿಕೆ ಇಲಾಖೆ ಆವರಣದಲ್ಲಿ ಫಲಪುಷ್ಪ ಪ್ರದರ್ಶನ–2025 ನಡೆಯಲಿದೆ ಎಂದು ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್ ತಿಳಿಸಿದರು.

ತೋಟಗಾರಿಕೆ ಇಲಾಖೆ ಆವರಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಐದು ದಿನಗಳ ಕಾಲ ನಡೆಯುವ ಜಿಲ್ಲಾ ಮಟ್ಟದ ಫಲಪುಷ್ಪ ಪ್ರದರ್ಶನಕ್ಕೆ ಜಿಲ್ಲೆಯ ರೈತರು, ಸಾರ್ವಜನಿಕರು, ನಾಗರೀಕರು ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಫಲಪುಷ್ಪ ಪ್ರದರ್ಶನ ಯಶಸ್ವಿ ಸಹಕರಿಸಬೇಕೆಂದು ಮನವಿ ಮಾಡಿದರು.

ತೋಟಗಾರಿಕೆ ಕಚೇರಿ ಆವರಣ ಹಾಗೂ ಕಾವೇರಿ ಉದ್ಯಾನವನದಲ್ಲಿ ಮನಸೂರೆಗೊಳ್ಳುವ ವಿವಿಧ ಹೂ, ಅಲಂಕಾರಿಕ ಕುಂಡಗಳ ಜೋಡಣೆ, ವಿವಿಧ ತರಕಾರಿ ಬೆಳೆಗಳು ಮತ್ತು ಪೌಷ್ಠಿಕ ಕೈತೋಟ ಮಾದರಿ ಹಾಗೂ ತರಕಾರಿ ಕೆತ್ತನೆ ಪ್ರದರ್ಶನ ಮತ್ತು ಜಿಲ್ಲೆಯ ತೋಟಗಾರಿಕೆ ಬೆಳೆಗಳ ವೈವಿಧ್ಯತೆಯ ಕುರಿತು ಗ್ರಾಹಕರಿಗೆ ಪ್ರದರ್ಶನ ಹಾಗೂ ಮಳಿಗೆಗಳಲ್ಲಿ ನೇರ ಮಾರಾಟ ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳ ಸಮಗ್ರ ಮಾಹಿತಿಯನ್ನು ಫಲಪುಷ್ಪ ಪ್ರದರ್ಶನದಲ್ಲಿ ನೀಡಲಾಗುವುದು ಎಂದು ಹೇಳಿದರು.

ಪ್ರತಿ ದಿನ ಬೆಳಗ್ಗೆ 10 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ದಿನ ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಯಸ್ಕರಿಗೆ ಟಿಕೆಟ್ ದರ 30, 6–12 ವರ್ಷದ ಮಕ್ಕಳಿಗೆ 20 ಹಾಗೂ ಸಮವಸ್ತ್ರ ಧರಿಸಿ ಬರುವ ಶಾಲಾ ಮಕ್ಕಳ ಗುಂಪುಗಳಿಗೆ ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಪ್ರವೇಶ ಉಚಿತ ಎಂದರು.

ವಿಶೇಷ ಆಕರ್ಷಣೆಗಳು: 35 ಸಾವಿರಕ್ಕೂ ಹೆಚ್ಚು 40 ಬಗೆಯ ವಿವಿಧ ಜಾತಿಯ ಹೂವುಗಳ ಅಲಂಕಾರಿಕ ಕುಂಡಗಳ ಜೋಡಣೆ, 1.50 ಲಕ್ಷ ವಿವಿಧ ಜಾತಿಯ ಅಲಂಕಾರಿಕ ಗಿಡಗಳಾದ ಪೆಟೋನಿಯಾ, ಸಾಲ್ವಿಯಾ, ಆಂಟ್ರೈನಮ್, ಸೆಲೋಶಿಯಾ, ಮಾರಿಗೋಲ್ಡ್, ಜಿನಿಯಾ, ಸೇವಂತಿಗೆ, ಡಯಾಂತಸ್ ಹೂವುಗಳನ್ನು ಜೋಡಿಸಲಾಗುವುದು ಎಂದು ತಿಳಿಸಿದರು.

ಫಲಪುಷ್ಪ ಪ್ರದರ್ಶನದಲ್ಲಿ ವಿವಿಧ ಜಿಲ್ಲೆಗಳ ಕೈಮಗ್ಗ, ನೇಕಾರರ ಸಹಕಾರ ಸಂಘಗಳು ಭಾಗವಹಿಸಿ, ಕೈ ಮಗ್ಗ ನೇಕಾರರಿಂದ ತಯಾರಿಸಿರುವ ಹತ್ತಿ, ರೇಷ್ಮೆ, ಮೊಳಕಾಲ್ಮೂರು ರೇಷ್ಮೆ ಸೀರೆ, ಚಂದಾಪುರ ರೇಷ್ಮೆ ಸೀರೆ, ಕಾಟನ್ ಸೀರೆ, ಪಂಚೆ, ಬೆಡ್‌ಶೀಟ್, ಟವಲ್, ಲುಂಗಿ ಹಾಗೂ ಇತರೆ ಕೈ ಮಗ್ಗ ಉತ್ಪನ್ನಗಳನ್ನು ಶೇ.20 ರಿಯಾಯಿತಿ ದರದಲ್ಲಿ ಮಾರಾಟ ಮಾಡಲಿದ್ದಾರೆ ಎಂದು ಹೇಳಿದರು.

ಕೃಷಿ ಇಲಾಖೆ, ಮೀನುಗಾರಿಕೆ ಇಲಾಖೆ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಪಶು ಸಂಗೋಪನೆ ಇಲಾಖೆ, ಆರೋಗ್ಯ ಇಲಾಖೆ, ಕೈಗಾರಿಕೆ ಹಾಗೂ ಮತ್ತು ಖಾದಿ ಮತ್ತು ಗ್ರಾಮೋದ್ಯೋಗ ವತಿಯಿಂದ ಕಲಾಕೃತಿಗಳನ್ನು ಹಾಗೂ ಪ್ರಾತ್ಯಕ್ಷತೆಯನ್ನು ಪ್ರದರ್ಶಿಸಲಾಗುವುದು. ಜಿಲ್ಲಾ ವ್ಯಾಪ್ತಿಯ ತಾಲೂಕುಗಳಲ್ಲಿ ರೈತರು ಬೆಳೆದಿರುವ ವಿವಿಧ ಹಣ್ಣು, ತರಕಾರಿ ಮತ್ತು ಪ್ಲಾಂಟೇಷನ್ ಹಾಗೂ ಇತರೆ ತೋಟಗಾರಿಕೆ ಬೆಳೆಗಳ ಮಾದರಿಗಳ ಪ್ರದರ್ಶನವಿರುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೆ.ಎನ್.ರೂಪಶ್ರೀ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಬಿ.ಎನ್.ಸುವೇದ, ಜಿಲ್ಲಾ ತೋಟಗಾರಿಕೆ ಸಂಘದ ಜಂಟಿ ಕಾರ್ಯದರ್ಶಿ ಎಸ್.ಪಿ. ಶ್ರೀಧರ್ ಹಾಗೂ ನಿರ್ದೇಶಕರಾದ ಎಂ.ಆರ್. ಅರವಿಂದ್ ಹಾಜರಿದ್ದರು.

ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ಜಿಲ್ಲಾಧಿಕಾರಿ ದಿಢೀರ್ ಭೇಟಿ

ಅವ್ಯವಸ್ಥೆ ಕಂಡು ಅಸಮಾಧಾನ, ರೋಗಿಗಳಿಗೆ ವೈದ್ಯಕೀಯ ಸೇವೆಯ ಜೊತೆಗೆ ಮೂಲ ಸೌಕರ್ಯ ಕಲ್ಪಿಸಲು ಸೂಚನೆ

ಮಂಡ್ಯ, ಜ.22–ಮಿಮ್ಸ್ ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ.ಕುಮಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿ ಅವ್ಯವಸ್ಥೆ ಕಂಡು ಅಸಮಾಧಾನ ವ್ಯಕ್ತಪಡಿಸಿದರಲ್ಲದೆ ರೋಗಿ ಗಳ ಆರೋಗ್ಯ ಹಾಗೂ ಮೂಲ ಸೌಕರ್ಯ ಗಳ ಬಗ್ಗೆ ಮಾಹಿತಿ ಪಡೆದು ಅಧಿಕಾರಿಗ ಳೊಂದಿಗೆ ಸಭೆ ನಡೆಸಿದರು.

ಜಿಲ್ಲಾಧಿಕಾರಿಗಳು ಆಸ್ಪತ್ರೆಯ ಶೌಚಾಲಯ ಹಾಗೂ ನೀರಿನ ವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಅಧಿಕಾರಿಗಳಿಗೆ ಇನ್ನೂ ಮುಂದೆ ರೋಗಿಗಳಿಗೆ ಮೂಲ ಸೌಕರ್ಯಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು.

ರೋಗಿಗಳನ್ನು ಮಾನವೀಯ ದೃಷ್ಟಿಯಿಂದ ನೋಡಿ. ಮಿಮ್ಸ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸುಮಾರು 105 ಸ್ವಚ್ಛತಾ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಆಸ್ಪತ್ರೆಯ ಸ್ವಚ್ಛತಾ ಕೆಲಸಗಳನ್ನು ಅವರು ನಿರ್ವಹಿಸುತ್ತಿರುವ ಬಗ್ಗೆ ಅಧಿಕಾರಿಗಳು ಪ್ರತಿದಿನ ಮೇಲ್ವಿಚಾರಣೆ ನಡೆಸದೇ ಇದ್ದಲ್ಲಿ ಕೆಲಸಗಳು ಸುಸೂತ್ರವಾಗಿ ನಡೆಯುವುದಿಲ್ಲ ಹಾಗೂ ಆಸ್ಪತ್ರೆಗೆ ಬರುವ ರೋಗಿಗಳು ತಮಗೆ ಸರಿಯಾದ ಸೌಲಭ್ಯ ಸಿಗುತ್ತಿಲ್ಲ ಎಂದು ದೂರು ಸಲ್ಲಿಸುತ್ತಾರೆ ಎಂದರು. ತುರ್ತು ಚಿಕಿತ್ಸೆಯ ಸಂದರ್ಭದಲ್ಲಿ ವೀಲ್ ಚೇರ್ ಮೂಲಕ ರೋಗಿಗಳನ್ನು ಕರೆದು ಕೊಂಡು ಹೋಗಲು 20 ವಾರ್ಡ್ ಬಾಯ್‌ಗಳಿದ್ದಾರೆ. ಕೆಲವು ಸಂದರ್ಭದಲ್ಲಿ ಹೆಚ್ಚಿನ ರೋಗಿಗಳು ಬಂದಾಗ ಒಟ್ಟಿಗೆ ಕರೆದೊಯ್ಯುವ ಕೆಲಸ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ರೋಗಿಗಳೊಂದಿಗೆ ಸಹನೆಯಿಂದ ವರ್ತಿಸಿ ಕೆಲಸ ನಿರ್ವಹಿಸಲು ತಿಳಿಸಿ ಎಂದರು.


ರೋಗಿಗಳಿಂದ ಮಾಹಿತಿ ಸಂಗ್ರಹಿಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ್.

ಪರಿಶೀಲನೆಯ ಸಂದರ್ಭದಲ್ಲಿ ಕೆಲವು ಶೌಚಾಲಯಗಳ ಬಾಗಿಲು ಮುರಿದು ಹೋಗಿರುವುದು, ಸ್ವಚ್ಛತೆ ಇಲ್ಲದಿರುವುದು, ಸ್ನಾನ ಗೃಹದಲ್ಲಿ ಬಕೆಟ್, ಮಗ್ ಇಲ್ಲದಿರುವುದು, ಕೈ ತೊಳೆಯುವ ಸಿಂಕ್ ನಲ್ಲಿಗಳು ಮುರಿದು ಹೋಗಿರುವುದು ಕಂಡುಬಂದಿದೆ. ಇವುಗಳು ಸಣ್ಣ ಪುಟ್ಟ ಕೆಲಸಗಳಾಗಿರುತ್ತದೆ. ಅವುಗಳನ್ನು ಕಚೇರಿ ವೆಚ್ಚದಲ್ಲಿ ಸರಿಪಡಿಸಬಹುದು– ಡಾ.ಕುಮಾರ್

ಜೂನ್‌ನಲ್ಲಿ ವೈದ್ಯಕೀಯ ಶಿಕ್ಷಣ ಸಚಿವರು ಸಭೆ ನಡೆಸಿದಾಗ 3 ತಿಂಗಳೊಳಗೆ ಕ್ಯಾನ್ಸರ್ ಆಸ್ಪತ್ರೆ ಕೆಲಸ ಪೂರ್ಣಗೊಳಿಸುವಂತೆ ಸೂಚನೆ ನೀಡಿದ್ದರು. ಇನ್ನೂ ಪೂರ್ಣಗೊಂಡಿರುವುದಿಲ್ಲ ಫೆಬ್ರವರಿ ಅಂತ್ಯದೊಳಗೆ ಸಿವಿಲ್ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಸಿಟಿ ಸ್ಕ್ಯಾನ್, ಎಂಆರ್‌ಐ, ಅಲ್ಟ್ರಾ ಸೌಂಡ್, ಡಯಾಲಿಸಿಸ್, ಅಂಬ್ಯೂಲೆನ್ಸ್, ಮಿಮ್ಸ್‌ನಲ್ಲಿ ನಡೆಯುತ್ತಿರುವ ಕ್ರಿಟಿಕಲ್ ಕೇರ್ ಯುನಿಟ್, ಗ್ರಂಥಾಲಯ, ಆರೋಗ್ಯ ಧಾಮ, ಹೊರ ಗುತ್ತಿಗೆ ನೌಕರರಿಗೆ ಪಿ.ಎಫ್ ಪಾವತಿ ಸೇರಿದಂತೆ ವಿವಿಧ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು.

ಸಿವಿಲ್ ಕಾಮಗಾರಿ ಪೂರ್ಣಗೊಂಡ ನಂತರ ಎಫ್‌ಡಿ ಅವರು ಸಿಬ್ಬಂದಿಗಳ ನೇಮಕಾತಿಗೆ ಅನುಮತಿ ನೀಡುತ್ತಾರೆ. ಬಂಕರ್ ಇನ್ಸ್ಟಾಲ್ ಮಾಡಲು ಸುಮಾರು 3 ತಿಂಗಳು ಬೇಕಾಗುತ್ತದೆ ಎಂದು ಮಿಮ್ಸ್ ಡೀನ್ ಡಾ.ನರಸಿಂಹಸ್ವಾಮಿ.ಪಿ ಮಾಹಿತಿ ನೀಡಿದರು.

ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರಗೆ ಅತ್ಯುತ್ತಮ ಜಿಲ್ಲಾ ಚುನಾವಣಾಧಿಕಾರಿ ಪ್ರಶಸ್ತಿ



ಮಂಡ್ಯ: ಚುನಾವಣಾ ಆಯೋಗವು ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿ ಡಾ. ಕುಮಾರ ಅವರಿಗೆ 2024–25ನೇ ಸಾಲಿನ ಅತ್ಯುತ್ತಮ ಜಿಲ್ಲಾ ಚುನಾವಣಾಧಿಕಾರಿ ಎಂದು ಪ್ರಶಸ್ತಿ ನೀಡಿದೆ.

ಜಿಲ್ಲಾಧಿಕಾರಿಗಳಿಗೆ 2024–25ನೇ ಸಾಲಿನಲ್ಲಿ ನಡೆಸಿದ ಲೋಕಸಭಾ ಚುನಾವಣೆ, ಮತದಾರರ ಪಟ್ಟಿ ಪರಿಷ್ಕರಣೆ ಸೇರಿದಂತೆ ಜಿಲ್ಲೆಯಲ್ಲಿ ನಡೆಸಿದ ಚುನಾವಣಾ ಕೆಲಸಗಳನ್ನು ಪರಿಗಣಿಸಿ ರಾಜ್ಯ ವಿಭಾಗದಲ್ಲಿ ಪ್ರಶಸ್ತಿ ದೊರೆತ್ತಿದೆ. ಈ ಪ್ರಶಸ್ತಿಯನ್ನು ಜ.25ರಂದು ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಮತದಾರರ ದಿನಾಚರಣೆಯಲ್ಲಿ ನೀಡಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ತೀರ್ಥಪ್ರಸಾದ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಜ.22–ಡಾ.ಎನ್.ಎಂ.ತಳವಾರ ಅವರ ಮಾರ್ಗದರ್ಶನದಲ್ಲಿ ತೀರ್ಥಪ್ರಸಾದ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಎನ್. ಬೋರಲಿಂಗಯ್ಯ ಅವರ ಬದುಕು–ಬರಹ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ ಎಂದು ಮೈಸೂರು ವಿವಿ ಕುಲಸಚಿವರ ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ನನ್ನ ಮುಗಿಸಲು ಪ್ಲಾನ್ ಮಾಡ್ತಿದ್ದಾರೆ...!

ನೀವು ಹೇಳಬೇಕಿತ್ತು ಎಂದರು ಎಂದು ಮೂಲಗಳು ತಿಳಿಸಿವೆ.

ಆಪ್ತ ಮಿತ್ರರು: ಶ್ರೀರಾಮುಲು ಮತ್ತು ಜನಾರ್ಧನ ರೆಡ್ಡಿ ಬಹು ಕಾಲದಿಂದ ಆಪ್ತ ಮಿತ್ರರು. ಮಾಜಿ ಸಂಸದ ಕಾಂಗ್ರೆಸ್‌ನ ಕೆ.ಸಿ.ಕೊಂಡಯ್ಯ ಹಿಡಿತದಲ್ಲಿದ್ದ ಬಳ್ಳಾರಿಯಲ್ಲಿ ಬಿಜೆಪಿ ಭದ್ರಕೋಟೆ ಮಾಡಿದ್ದೇ ಈ ಜೋಡಿ. ಸೋನಿಯಾ ಗಾಂಧಿಯವರು ಬಳ್ಳಾರಿಯಲ್ಲಿ ಸ್ಪರ್ಧಿಸಿದ್ದಾಗ ಬಿಜೆಪಿ ಅಭ್ಯರ್ಥಿಯಾಗಿದ್ದ ಸುಷ್ಮಾ ಸ್ವರಾಜ್ ಪರವಾಗಿ ಗಟ್ಟಿಯಾಗಿ ನಿಂತ ಜನಾರ್ಧನರೆಡ್ಡಿ ಮತ್ತು ಶ್ರೀರಾಮುಲು ಅವರನ್ನು ಬಳ್ಳಾರಿ ಸಹೋದರರು ಎಂದೇ ಕರೆಯಲಾಗುತ್ತಿತ್ತು. ಆ ಚುನಾವಣೆಯಲ್ಲಿ ಸೋನಿಯಾ ಗಾಂಧಿ ಗೆದ್ದರಾದರೂ, ನಂತರ ಈ ಜೋಡಿ ಹಿಡಿತ ಸಾಧಿಸಿತು. ಪ್ರತಿ ವರ್ಷ ಸುಷ್ಮಾ ಸ್ವರಾಜ್ ಅವರನ್ನು ಬಳ್ಳಾರಿಗೆ ಕರೆಸಿ ಮಂಗಳಗೌರಿ ವ್ರತವನ್ನು ಹಬ್ಬ ಆಚರಿಸುತ್ತಿದ್ದರು. ಜನಾರ್ಧನ ರೆಡ್ಡಿ ಮತ್ತು ಶ್ರೀರಾಮುಲು ಅವರು ಸುಷ್ಮಾ ಸ್ವರಾಜ್ ಅವರ ಮಕ್ಕಳೆಂದೇ ಕರೆಸಿಕೊಳ್ಳುತ್ತಿದ್ದರು. ಗಣಿ ಹಗರಣದಲ್ಲಿ ಜನಾರ್ಧನ ರೆಡ್ಡಿ ಜೈಲು ಪಾಲಾದಾಗ ಅವರ ಸಹಾಯಕ್ಕೆ ಬಿಜೆಪಿ ಬಂದಿಲ್ಲವೆಂಬ ಕಾರಣಕ್ಕೆ ಶ್ರೀರಾಮುಲು ಅವರು ಬಿಜೆಪಿ ತೊರೆದು 2011ರಲ್ಲಿ ಬಿಎಸ್‌ಆರ್ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಇಂತಹ ಆಪ್ತ ಮಿತ್ರರ ನಡುವೆ ರಾಜಕೀಯ ಕಾರಣಕ್ಕಾಗಿ ಇದೀಗ ವೈರತ್ವ ಹುಟ್ಟಿಕೊಂಡಿದೆ.

ಜನಾರ್ಧನ ರೆಡ್ಡಿ ಅವರು ಮತ್ತೆ ಬಿಜೆಪಿಗೆ ಸೇರಲು ಶ್ರೀರಾಮುಲು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಇದರಿಂದಾಗಿ ಬಿಜೆಪಿ ಸೇರಲು ಸಾಧ್ಯವಾಗದೇ ರೆಡ್ಡಿ ಹೊಸ ಪಕ್ಷ ಕಟ್ಟಿ ಗಂಗಾವತಿಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ವಿಪರ್ಯಾಸವೆಂದರೆ ಶ್ರೀರಾಮುಲು ಆಗ ನಡೆದಿದ್ದ ವಿಧಾನಸಭೆ ಮತ್ತು ನಂತರದ ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡಿದ್ದರು.

ಬಣದಿಂದ ಆಂತರಿಕ ಸಹಿ ಸಂಗ್ರಹ

ಬಹಿರಂಗವಾಗಿ ಹೇಳಿಕೆ ನೀಡಲು ಮಾತ್ರ ಹಿಂಜರಿಯುತ್ತಿದ್ದಾರೆ. ಇದೀಗ ಇದರ ಮುಂದುವರಿದ ಭಾಗವಾಗಿ ಆಂತರಿಕವಾಗಿ ಅವರ ವಿರುದ್ಧ ಸಹಿಸಂಗ್ರಹ ಅಭಿಯಾನವೂ ಶುರುವಾಗಿದೆ ಎಂಬ ಮಾಹಿತಿಯನ್ನು ಕಾಂಗ್ರೆಸ್ ಮೂಲಗಳು ನೀಡುತ್ತಿವೆ. ಸುರ್ಜೇವಾಲ ಅವರು ಪಕ್ಷಪಾತಿ ಧೋರಣೆಗೆ ಅಸಮಧಾನ ಗೊಂಡಿರುವ ಸಿದ್ದರಾಮಯ್ಯ ಬಣ ಈ ಮೂಲಕ ವರಿಷ್ಠರಿಗೆ ದೂರು ನೀಡುವ ಸಾಧ್ಯತೆ ಇದೆ.

ಅಲ್ಲಗಳೆದಿದ್ದ ಡಿಕೆಶಿ: ಸುರ್ಜೇವಾಲ ವಿರುದ್ಧ ಸಿದ್ದರಾಮಯ್ಯ ಬಣ ಅಸಮಾಧಾನಗೊಂಡಿದೆ ಎಂಬ ವಾದವನ್ನು ಡಿಸಿಎಂ ಡಿಕೆ ಶಿವಕುಮಾರ್ ಅಲ್ಲಗಳೆದಿದ್ದಾರೆ. ಇವೆಲ್ಲವನ್ನೂ ಸೃಷ್ಟಿ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ ಪಕ್ಷದ ಆಂತರಿಕ ವಲಯದಲ್ಲಿ ಮಾತ್ರ ಈ ವಿಚಾರ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗುತ್ತಿದೆ.

ಅಸಮಾಧಾನಕ್ಕೆ ಕಾರಣ ಏನು?: ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು, ಡಿಕೆ ಶಿವಕುಮಾರ್ ಪರವಾಗಿ ನಿಂತಿದ್ದಾರೆ ಎಂಬ ಆರೋಪ ಇದೆ ಬೆಳಗಾವಿ ರಾಜಕೀಯದ ವಿಚಾರವಾಗಿ ಸತೀಶ್ ಜಾರಕಿಹೊಳಿ ಮಾತಿಗೆ ಹೆಚ್ಚಿನ ಆದ್ಯತೆ ನೀಡುತ್ತಿಲ್ಲ ಎಂಬ ಅಭಿಪ್ರಾಯವೂ ಇದೆ.

ಅಷ್ಟೇ ಅಲ್ಲದೆ, ಸಿದ್ದರಾಮಯ್ಯ ಬಣದ ಕಾರ್ಯತಂತ್ರಗಳಿಗೆ ಸುರ್ಜೇವಾಲ ಅವರು ಬ್ರೇಕ್ ಹಾಕುತ್ತಿದ್ದಾರೆ. ರಾಜ್ಯದ ಹಿರಿಯರನ್ನು ವಿಶ್ವಾಸಕ್ಕೆ ಪಡೆಯದೆ ಡಿಕೆಶಿ ಪರ ನಿಂತಿರುವ ಆರೋಪವೂ ಕೇಳಿಬರುತ್ತಿದೆ. ಹೀಗಾಗಿ ಸಹಿ ಸಂಗ್ರಹ ಮೂಲಕ ಹೈಕಮಾಂಡ್‌ಗೆ ಲಿಖಿತ ದೂರು ಸಲ್ಲಿಸಲು ಪ್ಲಾನ್ ಮಾಡಲಾಗುತ್ತಿದೆ.

5 ವರ್ಷ ವಿಸ್ತರಣೆ

2021 ಮತ್ತು 2024ರ ಅವಧಿಯಲ್ಲಿ ರಾಷ್ಟ್ರೀಯ ಆರೋಗ್ಯ ಮಿಷನ್‌ನಡಿ 12 ಲಕ್ಷಕ್ಕೂ ಹೆಚ್ಚು ಆರೋಗ್ಯ ಕಾರ್ಯ ಕರ್ತರನ್ನು ತೊಡಗಿಸಿಕೊಳ್ಳಲಾಗಿತ್ತು. 220 ಕೋಟಿಗೂ ಹೆಚ್ಚು ಕೋವಿಡ್ ಲಸಿಕೆ ಡೋಸ್‌ಗಳನ್ನು ನೀಡಲಾಗಿದೆ.

ಈಗಾಗಲೇ 12 ಲಕ್ಷ ಆರೋಗ್ಯ ಕಾರ್ಯಕರ್ತರು ರಾಷ್ಟ್ರೀಯ ಆರೋಗ್ಯ ಮಿಷನ್‌ನಡಿ ನೋಂದಾಯಿಸಿ ಕೊಂಡಿದ್ದಾರೆ. ಇದು ಕೋವಿಡ್ ಸಾಂಕ್ರಾಮಿಕ ರೋಗವನ್ನು ನಿಭಾಯಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಎನ್ ಎಚ್‌ಎಂ ಅಡಿಯಲ್ಲಿ 220 ಕೋಟಿಗೂ ಹೆಚ್ಚು ಡೋಸ್ ಕೋವಿಡ್–19 ಲಸಿಕೆ ಗಳನ್ನು ನೀಡಲಾಯಿತು. ಕಳೆದ 10 ವರ್ಷಗಳಲ್ಲಿ ಈ ಮಿಷನ್ ಐತಿಹಾಸಿಕ ಗುರಿಗಳನ್ನು ತಲುಪಿದೆ ಎಂದು ಪಿಯೂಷ್ ಗೋಯೆಲ್ ಹೇಳಿದರು.

ಇದರ ಜೊತೆಗೆ ಇಂದಿನ ಸಚಿವ ಸಂಪುಟ ಸಭೆಯಲ್ಲಿ ಕೇಂದ್ರ ಸರ್ಕಾರ ಸೆಣಬಿನ ಕನಿಷ್ಠ ಬೆಂಬಲ ಬೆಲೆಯನ್ನು ಕ್ವಿಂಟಾಲ್‌ಗೆ 315 ರೂ. ಅಥವಾ ವರ್ಷದಿಂದ ವರ್ಷಕ್ಕೆ ಶೇ.6ರಷ್ಟು ಹೆಚ್ಚಿಸುವುದಾಗಿ ಘೋಷಿಸಿದೆ. ಹೊಸ MSP ಪ್ರತಿ ಕ್ವಿಂಟಾಲ್‌ಗೆ 5,650 ರೂ.ಗಳಾಗಿದ್ದು, ಉತ್ಪಾದಕರಿಗೆ ಶೇ.66.8ರಷ್ಟು ಲಾಭವನ್ನು ನೀಡುತ್ತದೆ.

ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಬಿಜೆಪಿ ರಾಜ್ಯ ಪರಿಷತ್ ಸದಸ್ಯರು, ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಸಂಸದರಿಗೆ ಮತದಾನ ಮಾಡುವ ಅವಕಾಶ ಇದೆ. ಬಿಜೆಪಿ ಸಂಘಟನಾ ಜಿಲ್ಲೆಗಳು 39 ಇದೆ. ಈ ಜಿಲ್ಲೆಗಳ ಜಿಲ್ಲಾಧ್ಯಕ್ಷರು ಮತದಾನ ಮಾಡುತ್ತಾರೆ. ಅಲ್ಲದೆ, ಪ್ರತಿ ವಿಧಾನಸಭಾ ಕ್ಷೇತ್ರದ ಇಬ್ಬರು ರಾಜ್ಯ ಪರಿಷತ್ ಸದಸ್ಯರು ಮತ್ತು ಎರಡು ವಿಧಾನ ಸಭಾ ಕ್ಷೇತ್ರದ ಓರ್ವ ರಾಜ್ಯ ಪರಿಷತ್ ಸದಸ್ಯರು ಮತದಾನ ಮಾಡಲಿದ್ದಾರೆ.

ಅವರ ಜೊತೆಗೆ ಆಯ್ಕೆಯಾದ ಬಿಜೆಪಿ ಶಾಸಕರ ಪೈಕಿ ಶೇ.10ರಷ್ಟು ಮಂದಿಗೆ ಮತದಾನ ಮಾಡಲು ಅವಕಾಶ ಇದೆ. ಅದೇ ರೀತಿಯಲ್ಲಿ ಶೇ.10ರಷ್ಟು ವಿಧಾನ ಪರಿಷತ್ ಸದಸ್ಯರು ಮತ್ತು ಶೇ.10ರಷ್ಟು ಲೋಕಸಭಾ ಸದಸ್ಯರಿಗೆ ಮತದಾನ ಮಾಡಲು ಅವಕಾಶ ಇದೆ.

ರಾಜ್ಯ ಪ್ರಮುಖರ ತೀರ್ಮಾನ: ಇನ್ನು ಶಾಸಕರು, ಪರಿಷತ್ ಸದಸ್ಯರು ಮತ್ತು ಸಂಸದರ ಪೈಕಿ ಯಾರು ಮತದಾನ ಮಾಡಬಹುದು ಎಂಬುದನ್ನು ರಾಜ್ಯ ಬಿಜೆಪಿ ಪ್ರಮುಖರು ನಿರ್ಧಾರ ಮಾಡುತ್ತಾರೆ. ಇದರಲ್ಲಿ ಮಹಿಳೆಯರು ಹಾಗೂ ಇತರ ವಿಭಾಗಗಳಲ್ಲಿ ವರ್ಗೀಕರಿಸಿ ಮತದಾರರನ್ನು ಆಯ್ಕೆ ಮಾಡಲು ಅವಕಾಶ ಇದೆ. ಇದರ ಜೊತೆಗೆ ಕೋರ್ ಕಮಿಟಿ ಸದಸ್ಯರು ಕೂಡ ಮತದಾನ ಮಾಡಲು ಅವಕಾಶ ಇದೆ. ಇನ್ನು ಜಿಲ್ಲಾಧ್ಯಕ್ಷರ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಗೆ ಮಂಡಲ ಅಧ್ಯಕ್ಷರು ಮತ್ತು ಆಯಾ ಜಿಲ್ಲೆಯ ಸಂಸದರು ಮತ್ತು ಶಾಸಕರಿಗೆ ಮತದಾನ ಮಾಡಲು ಅವಕಾಶ ಇದೆ.

ಶೂಟ್ ಮಾಡಿ ಬಂಧಿಸಿದ ಪೊಲೀಸರು

ಸುಪ್ರೀತ್ ಅಲಿಯಾಸ್ ಸುಪ್ಪಿ, 2023ರ ಅ.2ರಂದು ನಡೆದಿದ್ದ ಕುಂಟ ವಿನಿ ಕೊಲೆ ಪ್ರಕರಣದಲ್ಲಿ ಬಂಧಿತನಾಗಿ ಸುಮಾರು 6 ತಿಂಗಳ ಕಾಲ ಜೈಲಿನಲ್ಲಿದ್ದ. ನಂತರ ಮತ್ತೊಂದು ಕೊಲೆ ಯತ್ನ ಪ್ರಕರಣದಲ್ಲಿ ಜೈಲು ಸೇರಿ 2024ರ ನ.14ರಂದು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದ.

ಕುಂಟ ವಿನಿ ಕೊಲೆಗೆ ಪ್ರತೀಕಾರ ತೀರಿಸಿಕೊಳ್ಳಲು ಆತನ ಸಹೋದರ ಪ್ರಮೋದ್ ಮತ್ತಿತರರು ಹವಣಿಸುತ್ತಿದ್ದರು ಎಂದು ಹೇಳಲಾಗಿದ್ದು, ಈ ಮಧ್ಯೆ, 2024ರ ಫೆ.12ರಂದು ಸುಪ್ರೀತ್‌ನ ಆತ್ಮೀಯನಾದ ಪ್ರಜ್ವಲ್ ಅಲಿಯಾಸ್ ಪಾಪು ಎಂಬಾತನನ್ನು ಹತ್ಯೆ ಮಾಡಲಾಗಿತ್ತು.

ಸುಪ್ರೀತ್‌ನನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ ತಂಡ ಕಳೆದ ಶನಿವಾರ ಪಾಲಹಳ್ಳಿ ಹೊರ ವಲಯದ ಜಮೀನಿನಲ್ಲಿ ಇರುವ ತನ್ನ ಶೆಡ್‌ನಲ್ಲಿ ಸುಪ್ರೀತ್ ಆತನ ಸ್ನೇಹಿತರಾದ ಅರ್ಜುನ್ ಮತ್ತು ರಿಷಿ ಎಂಬುವರೊಂದಿಗೆ ಇದ್ದಾನೆ ಎಂಬ ಮಾಹಿತಿ ಪಡೆದು ದಾಳಿ ನಡೆಸಿತ್ತು. ಆದರೆ ಆ ಸಂದರ್ಭದಲ್ಲಿ ಅರ್ಜುನ್ ಮತ್ತು ರಿಷಿ ಮಾತ್ರ ಶೆಡ್‌ನಲ್ಲಿದ್ದು, ಅವರಿಬ್ಬರ ಮೇಲೂ ಪ್ರಮೋದ್ ನೇತೃತ್ವದ ತಂಡ ಹಲ್ಲೆ ನಡೆಸಿದೆ. ರಿಷಿಯಿಂದಲೇ ಸುಪ್ರೀತ್‌ಗೆ ಕರೆ ಮಾಡಿ ಕರೆಸಿಕೊಳ್ಳಲು ಪ್ರಯತ್ನಿಸಿದ್ದು ಕರೆ ಮಾಡಿದ ಸಂದರ್ಭದಲ್ಲಿ ಆತ ಮನೆಯಲ್ಲಿ ಮೊಬೈಲ್ ಇಟ್ಟು ಹೊರ ಹೋಗಿದ್ದ. ನಂತರ ರಿಷಿ ತನ್ನ ಸ್ನೇಹಿತ ಕಾರ್ತಿಕ್‌ಗೆ ಕರೆ ಮಾಡಿ ಶೆಡ್ ಬಳಿಗೆ ಕರೆಸಿಕೊಂಡಿದ್ದಾನೆ. ಪ್ರಮೋದ್ ನೇತೃತ್ವದ ತಂಡ ಅರ್ಜುನ್‌ನನ್ನು ಶೆಡ್‌ನಲ್ಲೇ ಇರಿಸಿಕೊಂಡು ಸುಪ್ರೀತ್‌ನನ್ನು ಕರೆತರುವಂತೆ ರಿಷಿ ಮತ್ತು ಕಾರ್ತಿಕ್‌ನನ್ನು ಕಳುಹಿಸಿದೆ. ಇವರಿಬ್ಬರೊಂದಿಗೆ ಬೈಕ್‌ನಲ್ಲಿ ಸುಪ್ರೀತ್ ಬರುತ್ತಿದ್ದಂತೆ ಆತನ ಮೇಲೆ ತೀವ್ರವಾಗಿ ಹಲ್ಲೆ ನಡೆಸಿ, ಅರೆಬೆತ್ತಲೆ ಮಾಡಿ ನಂತರ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಭೀಕರವಾಗಿ ಹತ್ಯೆ ಮಾಡಿ ಸ್ಥಳದಿಂದ ತಂಡ ಪರಾರಿಯಾಗಿತ್ತು. ತೀವ್ರವಾಗಿ ಗಾಯಗೊಂಡಿದ್ದ ಅರ್ಜುನ್ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಓರ್ವ ಪೊಲೀಸ್ ವಶಕ್ಕೆ


ವಿಚಾರಣೆ ನಡೆಸುತ್ತಿದ್ದೇವೆ. ಆತ ನೀಡಿದ ಮಾಹಿತಿ, ಸುಳಿವಿನ ಜಾಡು ಹಿಡಿದು ತಲೆಮರೆಸಿಕೊಂಡಿರುವ ಉಳಿದ ದುಷ್ಕರ್ಮಿಗಳನ್ನು ಅತೀ ಶೀಘ್ರ ಪತ್ತೆ ಮಾಡುತ್ತೇವೆ ಎಂದರು. ಪ್ರಕರಣ ಬಯಲಿಗೆ ಬಂದ ತಕ್ಷಣ ಎಎಸ್ಪಿ ಸಿ.ಮಲ್ಲಿಕ್ ಮೇಲ್ವಿಚಾರಣೆಯಲ್ಲಿ ಪ್ರತ್ಯೇಕ ಮೂರು ತನಿಖಾ ತಂಡಗಳನ್ನು ರಚಿಸಲಾಗಿದ್ದು, ಪೊಲೀಸರು ಇಂದು ಓರ್ವ ಶಂಕಿತನನ್ನು ವಶಕ್ಕೆ ತೆಗೆದು ಕೊಂಡಿದ್ದಾರೆ. ಪ್ರಕರಣ ಸಂಬಂಧ ಈಗಾಗಲೇ ಸುಳಿವು ದೊರೆತಿದ್ದು, ಅದರ ಜಾಡು ಹಿಡಿದು ಶೋಧ ಕಾರ್ಯ ಮುಂದುವರಿದಿದ್ದು, ಇಂದು ರಾತ್ರಿ ಹಾಗೂ ನಾಳೆ (ಗುರುವಾರ)ಯೊಳಗೆ ಪರಾರಿಯಾಗಿರುವ ಇತರ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಲಾಗುವುದು ಎಂದರು.

ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ

ಎಲೆಕ್ಷನ್ ಸಂದರ್ಭದಲ್ಲೇ ಆಗಿರುವ ಮಾತುಕತೆ ಇದು. ಹೀಗಾಗಿ ಡಿ.ಕೆ.ಶಿವಕುಮಾರ್ ಸಿಎಂ ಆಗೋದನ್ನು ಯಾರೂ ತಪ್ಪಿಸಲು ಆಗಲ್ಲ ಎಂದರು. ಮುಡಾ ಆಸ್ತಿ ಇಡಿ ಮುಟ್ಟುಗೋಲಿನ ಬಗ್ಗೆ ಸಿಎಂ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಹೌದೌದು ಅವರದ್ದು ಸಿಕ್ಕರೆ ರಾಜಕೀಯ ಪ್ರೇರಿತ. ಸಿಎಂ ಮುಡಾ ಕೇಸ್‌ನಲ್ಲಿ ಮರ್ಯಾದೆ ಕಳೆದುಕೊಂಡಿದ್ದಾರೆ. ಮೈಸೂರು ಜನ ಮನೆ ಕಟ್ಟಲು ಒಂದು ಸೈಟ್ ಕೊಡಪ್ಪಾ ಅಂದರೆ ಅವರ ಮನೆಯವರೇ ಬರೆಸಿಕೊಳ್ಳೋದಾ? ಸಿದ್ದರಾಮಯ್ಯ ಕಾಲದಲ್ಲಿ ಮೈಸೂರು ವಿಜಯನಗರದ ಸಾವಿರಾರು ಆಗಿದೆ. 1,200 ರೂ.ಗೆ 50X80 ಒಂದು ಸೈಟು ಯಾರ ಕಾಲದಲ್ಲಿ ಇತ್ತು? ವಿಜಯನಗರದ ಸಾವಿರಾರು ಚಿನ್ನ–ಬೆಳ್ಳಿ ಮಾರಾಟವಾಗಿದೆ ಸೈಟು ಮಾರಿದ್ದಾರೆ. ಸಿದ್ದರಾಮಯ್ಯಗೆ ನಾಚಿಕೆಯಾಗಬೇಕು ಎಂದು ಕಿಡಿಕಾರಿದರು.

ಕುಕ್ಕರಹಳ್ಳಿ ಕೆರೆ ಆವರಣದಲ್ಲೇ ನಾಯಿಗಳಿಗೆ ಆಹಾರ ನೀಡಲು ಮತ್ತೆ ಅವಕಾಶ

ನಿಷೇಧ ವಾಪಸ್ ಪಡೆದ ಮೈಸೂರು ವಿವಿ



ಮೈಸೂರು, ಜ.22(ಆರ್‌ಕೆ)– ಸಾರ್ವಜನಿಕರು, ಪ್ರಾಣಿ ಪ್ರಿಯರ ಒತ್ತಾಯದ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯವು ಕುಕ್ಕರಹಳ್ಳಿ ಆವರಣದಲ್ಲಿ ನಾಯಿಗಳಿಗೆ ಆಹಾರ ನೀಡಲು ಮತ್ತೆ ಅವಕಾಶ ಕಲ್ಪಿಸಿದೆ.

ವಾಯುವಿಹಾರಿಗಳ ಸುರಕ್ಷತೆ, ಸ್ವಚ್ಛತೆ ಹಾಗೂ ಪಕ್ಷಿ, ಜಲಚರ ಸಂರಕ್ಷಣೆ ಉದ್ದೇಶ ದಿಂದ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಬೀದಿ ನಾಯಿ ಗಳಿಗೆ ಆಹಾರ ನೀಡುವುದನ್ನು ನಿಷೇಧಿಸಿದ್ದ ವಿಶ್ವವಿದ್ಯಾನಿಲಯವು ಕಳೆದ 12 ದಿನಗಳ ಹಿಂದೆ ಕೆರೆಯ ಪ್ರವೇಶ ದ್ವಾರದ ಗೇಟ್‌ನಲ್ಲಿ 'ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪ್ರಾಣಿಗಳು, ಪಕ್ಷಿಗಳು ಮತ್ತು ಜಲಚರಗಳಿಗೆ ಆಹಾರ ನೀಡುವು ದನ್ನು ನಿಷೇಧಿಸಲಾಗಿದೆ' ಎಂಬ ಸೂಚನಾ ಫಲಕವನ್ನು ಅಳವಡಿಸಲಾಗಿತ್ತು. ಪರಿಣಾಮ ಕೆರೆ ಆವರಣದ ಸುಮಾರು 60ರಿಂದ 70 ನಾಯಿಗಳು ಆಹಾರ ಹುಡುಕಿಕೊಂಡು ಹೊರಬರುತ್ತಿದ್ದವು. ನಂತರ ಪ್ರಾಣಿ ಪ್ರಿಯರು ಕೆರೆ ಆಜುಬಾಜಿನ ರಸ್ತೆಬದಿ ಅವುಗಳಿಗೆ ಆಹಾರ ನೀಡುತ್ತಿದ್ದರು. ಈ ಬೆಳವಣಿಗೆಯಿಂದ ಬೇಸರಗೊಂಡ ಪ್ರಾಣಿ ಪ್ರಿಯರು, ಪ್ರಾಣಿಹಕ್ಕು ಕಾರ್ಯಕರ್ತರು, ವಿಶ್ವವಿದ್ಯಾನಿಲಯದ ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ತೀವ್ರ ಒತ್ತಡ ಬಂದ ಹಿನ್ನೆಲೆಯಲ್ಲಿ ನಿಷೇಧವನ್ನು ನಿನ್ನೆ (ಜ.21) ಮೈಸೂರು ವಿಶ್ವವಿದ್ಯಾನಿಲಯವು ತಾತ್ಕಾಲಿಕವಾಗಿ ಹಿಂಪಡೆದಿದ್ದು, ಕೆರೆ ಆವರಣದಲ್ಲಿ ನಾಯಿಗಳಿಗೆ ಆಹಾರ ನೀಡಲು ಮತ್ತೆ ಅವಕಾಶ ಕಲ್ಪಿಸಿದೆ. ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅವರು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ್ದು,

ಸಾರ್ವಜನಿಕರು, ಸಂಘ–ಸಂಸ್ಥೆಗಳ ಒತ್ತಾಯದ ನಿಷೇಧ ವಾಪಸ್ ಪಡೆದಿದ್ದೇವೆ ಎಂದರು. ಈ ನಡುವೆ ರಾಜ್ಯಪಾಲರು, ಮುಖ್ಯಮಂತ್ರಿಗಳ ಕಚೇರಿಯಿಂದಲೂ ಈ ಹಿಂದೆ ಇದ್ದಂತೆ ಕೆರೆ ಆವರಣದಲ್ಲಿ ನಾಯಿಗಳಿಗೆ ಆಹಾರ ನೀಡಲು ಬಿಡಿ ಎಂದು ಸೂಚನೆ ನೀಡಿರುವುದರಿಂದ ನಿಷೇಧವನ್ನು ವಾಪಸ್ ಪಡೆದಿದ್ದೇವೆ ಎಂದರು.

ಅತೀ ಶೀಘ್ರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಸಲಹೆ, ಅಭಿಪ್ರಾಯ ಪಡೆದು ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಎರಡು ಕಡೆ ಸ್ಥಳ ಗುರ್ತಿಸಿ ಅಲ್ಲಿ ಮಾತ್ರ ನಾಯಿಗಳಿಗೆ ಆಹಾರ ನೀಡಲು ಅವಕಾಶ ಮಾಡಿಕೊಡಲು ಉದ್ದೇಶಿಸಿದ್ದೇವೆ. ಅದರಿಂದ ನಾಯಿಗಳಿಗೆ ಆಹಾರ ನೀಡಿದಂತಾಗುವುದಲ್ಲದೆ, ಸ್ವಚ್ಛತೆ ಕಾಪಾಡುವ ಜೊತೆಗೆ ವಾಯುವಿಹಾರಿಗಳ ಹಿತ ಕಾಯ್ದಂತಾಗಲಿದೆ ಎಂದು ತಿಳಿಸಿದರು.

ನಾಯಿಗಳಿಗೆ ಆಹಾರ ನೀಡಲು ಅವಕಾಶ ಕಲ್ಪಿಸಿರುವ ಮೈಸೂರು ವಿಶ್ವವಿದ್ಯಾನಿಲಯದ ಕ್ರಮವನ್ನು ಸ್ವಾಗತಿಸಿರುವ ಪೀಪಲ್ ಫಾರ್ ಅನಿಮಲ್ಸ್, ಪ್ರಾಣಿ ಹಕ್ಕು ಕಾರ್ಯಕರ್ತರು ಹಾಗೂ ಪ್ರಾಣಿ ಪ್ರಿಯರು, ಕುಲಸಚಿವರಿಗೆ ಧನ್ಯವಾದ ತಿಳಿಸಿದ್ದಾರೆ.

ಕೇಂದ್ರದ ಮಾಜಿ ಸಚಿವರು ಹಾಗೂ ಪ್ರಮುಖ ಪ್ರಾಣಿ ಹಕ್ಕುಗಳ ಕಾರ್ಯಕರ್ತೆ ಮನೇಕಾ ಗಾಂಧಿ ಅವರು, ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪ್ರಾಣಿಗಳಿಗೆ ಆಹಾರ ನೀಡಲು ಅವಕಾಶ ಕಲ್ಪಿಸುವಂತೆ ರಾಜ್ಯಪಾಲರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಿಗೂ ಇ–ಮೇಲ್ ಮೂಲಕ ಮನವಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಪ್ರತ್ಯೇಕ ಪ್ರಕರಣ: ಸಿಸಿಬಿ ಪೊಲೀಸರಿಂದ 9 ಮಂದಿ ಸೆರೆ

ಮೈಸೂರು, ಜ.22(ಆರ್‌ಕೆ)– ಮೂರು ಪ್ರತ್ಯೇಕ ಪ್ರಕರಣಗಳಲ್ಲಿ 9 ಮಂದಿಯನ್ನು ಬಂಧಿಸಿರುವ ಮೈಸೂರು ಸಿಸಿಬಿ ಪೊಲೀಸರು, ಭಾರೀ ಪ್ರಮಾಣದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಅಕ್ರಮವಾಗಿ ಗ್ಯಾಸ್ ರೀಫಿಲ್ಲಿಂಗ್ ಮಾಡುತ್ತಿದ್ದ ನಾಲ್ವರನ್ನು ಜನವರಿ 11ರಂದು ಕೆಸರೆ ಬಳಿ ಜಮೀನೊಂದರಲ್ಲಿ ನಿರ್ಮಿಸಿದ ಶೆಡ್‌ನಲ್ಲಿ ಬಂಧಿಸಿ ಅವರಿಂದ 127 ಸಿಲಿಂಡರ್‌ಗಳು, 79 ರಾಡುಗಳು, 2 ಡಿಜಿಟಲ್ ಯಂತ್ರ, 1 ಗೂಡ್ಸ್ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಕಲ್ಯಾಣಗಿರಿ ಹಳೇ ಆರ್‌ಟಿಓ ಕಚೇರಿ ಬಳಿ ಪಾರ್ಕ್‌ನಲ್ಲಿ ಎಂಡಿಎಂಎ ನಿಷೇಧಿತ ಮಾದಕ ವಸ್ತು ಮಾರುತ್ತಿದ್ದ ಪೆಡ್ಲರ್ ಅನ್ನು ಜನವರಿ 7ರಂದು ಬಂಧಿಸಿ ಆತನಿಂದ 20,000 ರೂ. ಮೌಲ್ಯದ ಮಾದಕ ವಸ್ತು ಹಾಗೂ 1,700 ರೂ. ನಗದನ್ನು ವಶಕ್ಕೆ ಪಡೆಯಲಾಗಿದೆ. ವಿಜಯನಗರ 2ನೇ ಹಂತದ ಜೆಬಿ ಪ್ಯಾರಡೈಸ್ ಕೊಠಡಿಯೊಂದರಲ್ಲಿ ಕಾನೂನು ಬಾಹಿರವಾಗಿ ಅಂದರ್–ಬಾಹರ್ ಜೂಜಾಡುತ್ತಿದ್ದ ನಾಲ್ವರನ್ನು ಬಂಧಿಸಿ ಸಿಸಿಬಿ ಪೊಲೀಸರು 12,500 ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ.

ಅಧಿಕಾರ ಸ್ವೀಕಾರ...


ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿ ಎಂ.ಕೆ. ಸವಿತಾ ಅವರು ಬುಧವಾರ ಸಂಜೆ ಅಧಿಕಾರ ವಹಿಸಿಕೊಂಡರು.

ಮೈಸೂರು ಮಿತ್ರ

ಹಾರೋಹಳ್ಳಿಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಭೂಮಿ ಪೂಜೆ



ಉತ್ತರ ಪ್ರದೇಶದ ಅಯೋಧ್ಯೆಯ ಬಾಲರಾಮನ ಶಿಲೆ ಸಿಕ್ಕ ಸ್ಥಳ ಮೈಸೂರಿನ ಹಾರೋಹಳ್ಳಿಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡರು ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಮೈಸೂರು, ಜ.22(ಬಿಎಲ್‌ಯು)- ಉತ್ತರಪ್ರದೇಶದ ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಿರುವ ರಾಮಲಲ್ಲಾ ಮೂರ್ತಿ ಶಿಲೆ ಸಿಕ್ಕ ಮೈಸೂರಿನ ಹಾರೋಹಳ್ಳಿ ಗ್ರಾಮದಲ್ಲಿ ರಾಮಮಂದಿರ ನಿರ್ಮಾಣಕ್ಕೆ ಬುಧವಾರ ಭೂಮಿ ಪೂಜೆ ನೆರವೇರಿಸಲಾಯಿತು.

ರಾಮಲಲ್ಲಾ ಮೂರ್ತಿ ಶಿಲೆ ಸಿಕ್ಕ ಜಾಗದಲ್ಲೇ ಮಂದಿರ ನಿರ್ಮಾಣ ಮಾಡಲು ಸಂಕಲ್ಪ ಮಾಡಿದ್ದು, ಚಾಮುಂಡೇಶ್ವರಿ ಶಾಸಕ ಜಿ.ಟಿ. ದೇವೇಗೌಡರು ಇಂದು ಭೂಮಿ ಪೂಜೆ ನೆರವೇರಿಸಿದರು.

ಅಯೋಧ್ಯೆಯಲ್ಲಿ ರಾಮಲಲ್ಲಾ ಮೂರ್ತಿ ಸ್ಥಾಪನೆಯಾಗಿ ಒಂದು ವರ್ಷವಾದ ಹಿನ್ನೆಲೆ ರಾಮ ಮಂದಿರ ನಿರ್ಮಾಣದ ಭೂಮಿ ಪೂಜೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ ಜಮೀನಿನ ಮಾಲೀಕ ರಾಮದಾಸ್ ಸೇರಿದಂತೆ ಹಾರೋಹಳ್ಳಿ, ಗುಜ್ಜೇಗೌಡನಪುರ ಸೇರಿದಂತೆ ಸುತ್ತಮುತ್ತಲ ಗ್ರಾಮದ ಜನರು ಹಾಜರಿದ್ದರು.

ನನ್ನ ಅಮಾನತು ಇಲ್ಲವೇ ವಜಾ ಮಾಡುವ ತಾಕತ್ತು ಯಾರಿಗೂ ಇಲ್ಲ

ನನ್ನನ್ನು ಅಮಾನತು ಇಲ್ಲವೇ ವಜಾಗೊಳಿಸಲು ತಾಕತ್ತು ಇಲ್ಲ ಧಂ ಬೇಕು ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಜೆಡಿಎಸ್ ವರಿಷ್ಠರಿಗೆ ಇಂದಿಲ್ಲಿ ಸವಾಲು ಹಾಕಿದ್ದಾರೆ.

ಜನರನ್ನು ಕಟ್ಟಿ ಪಕ್ಷ ಸಂಘಟನೆ ಮಾಡುವ ನಾಯಕನ ವಿರುದ್ಧ ಕ್ರಮ ಕೈಗೊಳ್ಳಲು ಯಾರಿಗೂ ತಾಕತ್ತು ಇಲ್ಲ ಎಂದು ಎಚ್ಚರಿಸಿದರು.

ನಾನು ಮಾತ್ರವಲ್ಲದೆ ಬಿಜೆಪಿ ವಿರುದ್ಧ ಸಮರ ಸಾರಿರುವ ಬಸವನಗೌಡ ಪಾಟೀಲ್ ಯತ್ನಾಳ್‌ರನ್ನು ಕೂಡ ಅಮಾನತು ಇಲ್ಲವೇ ವಜಾ ಮಾಡಲು ಬಿಜೆಪಿ ಹೈಕಮಾಂಡ್‌ಗೆ ತಾಕತ್ತು ಇಲ್ಲ ಎಂದು ಹೇಳಿದರು.

ನನಗೆ ಮನೆ ಹಾಗೂ ಕ್ಷೇತ್ರದ ಜವಾಬ್ದಾರಿ ಎರಡೂ ಇದೆ. ಎರಡನ್ನು ನಾನೊಬ್ಬನೇ ನಿಭಾಯಿಸಬೇಕಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ಸಭೆ ಹಾಗೂ ಚಟುವಟಿಕೆಗಳಿಂದ ದೂರ ಉಳಿಯುತ್ತೇನೆ. ಈ ವಿಚಾರವನ್ನು ನಮ್ಮ ಪಕ್ಷದ ನಾಯಕರಿಗೆ ತಿಳಿಸಿದ್ದೇನೆ ಎಂದು ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದರು.

ನಿಖಿಲ್ ಕುಮಾರಸ್ವಾಮಿ ಅವರನ್ನು ಜೆಡಿಎಸ್ ರಾಜ್ಯಾಧ್ಯಕ್ಷರನ್ನಾಗಿ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಜಿ.ಟಿ.ದೇವೇಗೌಡರು, ಅದು ನನಗೆ ಗೊತ್ತಿಲ್ಲ. ಅವರಿಗೆ ಒಳ್ಳೆಯದಾಗಲಿ ಎಂದು ಶುಭ ಹಾರೈಸುತ್ತೇನೆ ಎಂದರು.

ಜೆಡಿಎಸ್ ರಾಜ್ಯಾಧ್ಯಕ್ಷರ ಆಯ್ಕೆ ಸೇರಿದಂತೆ ಪಕ್ಷದಲ್ಲಿ ತೆಗೆದುಕೊಳ್ಳುವ ತೀರ್ಮಾನದ ಬಗ್ಗೆ ಪಕ್ಷದ ನಾಯಕರ ಅಭಿಪ್ರಾಯ ಆಲಿಸುತ್ತೇನೆ ಎಂದು ಹೆಚ್.ಡಿ. ಕುಮಾರಸ್ವಾಮಿ ಹೇಳುತ್ತಾರೆ. ಆದರೆ ಇದು ನೆಪಮಾತ್ರ, ಅಂತಿಮವಾಗಿ ಕುಮಾರಸ್ವಾಮಿ ತಮಗೆ ತೋಚಿದ ನಿರ್ಧಾರ ಕೈಗೊಳ್ಳುತ್ತಾರೆ ಎಂದು ಗೌಡರು ತಿಳಿಸಿದರು.

ಯತ್ನಾಳ್‌ಗೆ ಜಿ.ಟಿ.ದೇವೇಗೌಡರ ಲೆಫ್ಟ್ ರೈಟ್ ಕ್ಲಾಸ್




ಮುಡಾ ಭ್ರಷ್ಟಾಚಾರದಲ್ಲಿ ನನ್ನ ಪಾತ್ರವಿದೆ ಎಂದು ಆರೋಪಿಸಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಶಾಸಕ ಜಿ.ಟಿ.ದೇವೇಗೌಡರು ಹಿಗ್ಗಾ ಮುಗ್ಗಾ ತರಾಟೆಗೆ ತೆಗೆದುಕೊಂಡರು. ಯತ್ನಾಳ್ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದ ಜಿ.ಟಿ.ದೇವೇಗೌಡರು, ನನ್ನ ಯೋಗ್ಯತೆ ಬಗ್ಗೆ ನಿನಗೇನು ಗೊತ್ತು ಎಂದು ಪ್ರಶ್ನಿಸಿದರು.

ನನ್ನ ಆಸ್ತಿ, ನನಗಿರುವ ಸಾಲ ಎಷ್ಟು ಎಂದು ನಿನಗೇನು ಗೊತ್ತಿದೆ ಎಂದು ಮರು ಪ್ರಶ್ನಿಸಿದ ಜಿ.ಟಿ.ದೇವೇಗೌಡರು, ನಿನಗೆ ತಾಕತ್ತು ಇದ್ದರೆ ನನ್ನ ಬಳಿ ಇರುವ ಆಸ್ತಿಯನ್ನು ಬಹಿರಂಗ ಮಾಡು. ಈ ಮೂಲಕ ನಾನು ಭ್ರಷ್ಟಾಚಾರ ಎಸಗಿರುವುದು ಸಾಬೀತು ಮಾಡಿದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಸವಾಲು ಹಾಕಿದರು.

ನಾನು ಶಾಸಕನಾಗಿ ಬಂದಾಗ ಇದ್ದ ಆಸ್ತಿ ಹಾಗೂ ಇವತ್ತಿನ ಆಸ್ತಿ ವ್ಯತ್ಯಾಸದ ವಿವರವನ್ನು ನೀನು ಬಹಿರಂಗ ಮಾಡು, ನಿನ್ನಲ್ಲಿರುವ ಆಸ್ತಿ ವಿವರವನ್ನು ನಾನು ಸಾಬೀತು ಮಾಡುತ್ತೇನೆ ಎಂದು ಮರು ಸವಾಲೆಸೆದರು. ಸೌಹಾರ್ದ ಬ್ಯಾಂಕಿನ ಹೆಸರಿನಲ್ಲಿ ಹಣ ಡೆಪಾಸಿಟ್ ಮಾಡಿಸಿಕೊಂಡು ಅದನ್ನು ಎಲ್ಲೆಲ್ಲಿ ಹೂಡಿಕೆ ಮಾಡಿದ್ದೀಯಾ ಎಂಬುದು ನನಗೆ ಗೊತ್ತಿದೆ. ಆ ಎಲ್ಲಾ ವಿಚಾರವನ್ನು ತೆಗೆಯಬೇಕಾ ಎಂದು ಎಚ್ಚರಿಸಿದರು.

ಬೇರೆಯವರ ಬಗ್ಗೆ ಮಾತನಾಡುವ ರೀತಿ ನನ್ನ ಬಗ್ಗೆ ಮಾತನಾಡಬೇಡ, ನನ್ನ ಬಗ್ಗೆ ಮಾತನಾಡಬೇಕಾದರೆ ನಿನಗೆ ಎಚ್ಚರಿಕೆ ಇರಬೇಕು. ನನ್ನ ವಿಚಾರವಾಗಿ ಮಾತನಾಡಿದರೆ ನೀನು ರಾಜಕೀಯವಾಗಿ ಯಾವುದೇ ಕಾರ್ಯ ಸಾಧನೆ ಮಾಡಲು ಆಗಲ್ಲ ಎಂದು ಜಿ.ಟಿ.ದೇವೇಗೌಡರು ಯತ್ನಾಳ್‌ಗೆ ಸಲಹೆ ನೀಡಿದರು. ಇಂದು ಒಬ್ಬರನ್ನು ಹೊಗಳಿ ನಾಳೆ ತೆಗಳುವುದು ಯತ್ನಾಳ್‌ಗೆ ಚಟವಾಗಿದೆ. ಹಿರಿಯ ಮನುಷ್ಯನಾಗಿದ್ದೀಯಾ, ಇನ್ನು ಮುಂದಾದರೂ ಗೌರವದಿಂದ ಮಾತನಾಡು ಎಂದು ಕಿವಿಮಾತು ಹೇಳಿದರು. ಸಕ್ಕರೆ ಕಾರ್ಖಾನೆ ವಿಚಾರದಲ್ಲಿ ನಿನ್ನ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ನೀನು ರಾಜೀನಾಮೆ ನೀಡಿದ್ದೀಯಾ ಎಂದು ಪ್ರಶ್ನಿಸಿದರು.

ಭವ್ಯಭಾರತ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆ ಶ್ರೀರಾಂಪುರ ಪಪಂನಿಂದ ಮುಡಾಗೆ ವಾಪಸ್

ಮೈಸೂರು, ಜ. 22- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಹಸ್ತಾಂತರಿಸಲ್ಪಟ್ಟಿದ್ದ ಭವ್ಯಭಾರತ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆಯನ್ನು ಶ್ರೀರಾಂಪುರ ಪಟ್ಟಣ ಪಂಚಾಯ್ತಿಯು ಮತ್ತೇ ಮುಡಾಗೆ ಹಿಂತಿರುಗಿಸಿರುವ ಬಗ್ಗೆ ವರದಿಯಾಗಿದೆ.

ಮುಡಾದಿಂದ ಇತ್ತೀಚೆಗೆ ಹಲವಾರು ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿತ್ತು. ಅದೇ ರೀತಿ ಶ್ರೀರಾಂಪುರ ಗ್ರಾಮ ಪಂಚಾಯ್ತಿ ಸರ್ವೆ ನಂಬರ್ 18/1,2, 19/2, 52/1,2ರಲ್ಲಿರುವ ಭವ್ಯಭಾರತ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆಯನ್ನು ಶ್ರೀರಾಂಪುರ ಪಟ್ಟಣ ಪಂಚಾಯ್ತಿಗೆ ಹಸ್ತಾಂತರಿಸಲಾಗಿತ್ತು.

ಆದರೆ, ಈ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿಗಳು 2024ರ ಡಿಸೆಂಬರ್ 27ರಂದು ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದು, ಕಚೇರಿ ತಾಂತ್ರಿಕ ಶಾಖೆ, ಕಂದಾಯ ಶಾಖೆ ಮತ್ತು ಆರೋಗ್ಯ ಶಾಖೆಯವರೊಂದಿಗೆ ಸದರಿ ಬಡಾವಣೆಯನ್ನು ಪರಿಶೀಲಿಸಿದಾಗ ಅಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಯುಜಿಡಿ, ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ದೀಪದ ಸಮಸ್ಯೆ ಉದ್ಯಾನವನದ ಸಮಸ್ಯೆ ಹಾಗೂ ಬಡಾವಣೆಯ ಅಡ್ಡ ರಸ್ತೆಗಳಲ್ಲಿರುವ ಮಾರ್ಗಸೂಚಿ ಕಲ್ಲುಗಳಲ್ಲಿ ನಿವೇಶನ ಸಂಖ್ಯೆ ತಪ್ಪಾಗಿ ನಮೂದಿಸಿರುವುದು ಮತ್ತು ನಿವೇಶನಗಳನ್ನು ವಿಂಗಡಣೆ ಮಾಡಿರುವುದು ಕಂಡುಬಂದಿದೆ. ಈ ಬಡಾವಣೆಯಲ್ಲಿ ಬಹುಳಷ್ಟು ಸಮಸ್ಯೆಗಳಿರುವುದರಿಂದ ಬಡಾವಣೆಯ ಕಡತವನ್ನು ಹಿಂತಿರುಗಿಸಲಾಗಿದೆ ಎಂದು ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿಗಳು ತಮ್ಮ ಪತ್ರಗಳಲ್ಲಿ ತಿಳಿಸಿದ್ದಾರೆ.

ಮುಡಾ ಹಗರಣದ ಹಿನ್ನೆಲೆ ಸಿದ್ದರಾಮಯ್ಯ ರಾಜೀನಾಮೆ ನೀಡುವ ಅಗತ್ಯವಿಲ್ಲ

ಸಿದ್ದರಾಮಯ್ಯ ಪರ ಮತ್ತೊಮ್ಮೆ ಬ್ಯಾಟ್ ಬೀಸಿದ ಶಾಸಕ ಜಿ.ಟಿ.ದೇವೇಗೌಡ

ಮೈಸೂರು, ಜ.22(ಬಿಎಲ್‌ಯು)- ಮುಡಾ ಹಗರಣದ ಆರೋಪಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಮತ್ತೊಮ್ಮೆ ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದ್ದಾರೆ. ಮೈಸೂರಿನ ಹಾರೋಹಳ್ಳಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾವ ಪಕ್ಷದಲ್ಲಿ ಯಾವ ನಾಯಕನ ವಿರುದ್ಧ ಎಷ್ಟು ಎಫ್‌ಐಆರ್‌ಗಳಿವೆ ಗೊತ್ತಾ ಎಂದು ಪ್ರಶ್ನಿಸಿದ ಜಿ.ಟಿ.ದೇವೇಗೌಡರು, ಎಫ್‌ಐಆರ್ ದಾಖಲಾದ ಮಾತ್ರಕ್ಕೆ ರಾಜೀನಾಮೆ ನೀಡಬೇಕೆಂಬುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಆರೋಪಿಯಾಗಿರುವ ಪ್ರಕರಣದ ಬಗ್ಗೆ ನ್ಯಾಯಾಲಯ ತೀರ್ಪು ಬರಲಿ, ಆಮೇಲೆ ನೋಡೋಣ ಎಂದರು. ರಾಜೀನಾಮೆ ನೀಡಬೇಕು ಎಂದು ಒತ್ತಾಯ ಮಾಡುತ್ತಿರುವವರು ತಮ್ಮ ಪಕ್ಷದಲ್ಲಿ ಯಾರ ವಿರುದ್ಧ ಎಷ್ಟು ಎಫ್‌ಐಆರ್‌ಗಳಿವೆ ಎಂಬುದನ್ನು ಅರಿತು ತರುವಾಯ ಸಿದ್ದರಾಮಯ್ಯ ರಾಜೀನಾಮೆ ಕೇಳಲಿ ಎಂದು ಸಲಹೆ ನೀಡಿದರು.

ಕುಂಭಮೇಳದಲ್ಲಿ ಮಹಾಪ್ರಸಾದ ವಿತರಿಸಿದ ಸುಧಾಮೂರ್ತಿ



ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಇಸ್ಕಾನ್ ಶಿಬಿರದ ಆಹಾರ ಕೌಂಟರ್‌ನಲ್ಲಿ ಭಕ್ತರಿಗೆ ಚಪಾತಿಗಳನ್ನು ವಿತರಿಸಿದ್ದಾರೆ.

ಪ್ರಯಾಗ್‌ರಾಜ್,ಜ.22-ಮಹಾ ಕುಂಭಮೇಳಕ್ಕೆ ತೆರಳಿರುವ ಇನ್ಫೋಸಿಸ್ ಸಹ ಸಂಸ್ಥಾಪಕ ನಾರಾಯಣಮೂರ್ತಿ ಅವರ ಪತ್ನಿ ಮತ್ತು ರಾಜ್ಯಸಭಾ ಸದಸ್ಯೆ ಸುಧಾಮೂರ್ತಿಯವರು ಇಸ್ಕಾನ್ ಶಿಬಿರದ ಆಹಾರ ಕೌಂಟರ್‌ನಲ್ಲಿ ನಿಂತು ಮಹಾ ಕುಂಭಮೇಳಕ್ಕೆ ಭೇಟಿ ನೀಡುವ ಭಕ್ತರಿಗೆ ಚಪಾತಿಗಳನ್ನು ವಿತರಿಸಿದ್ದಾರೆ.

ಮಹಾಪ್ರಸಾದ ತಯಾರಿಕೆಗೆ ಅದಾನಿ ಗ್ರೂಪ್ ಹಾಗೂ ಇಸ್ಕಾನ್ ಸಹಯೋಗದೊಂದಿಗೆ ನಿರ್ಮಿಸಲಾದ ಅಡುಗೆ ಮನೆಯಲ್ಲಿರುವ ಯಂತ್ರಗಳನ್ನು ಇದೇ ವೇಳೆ ಸುಧಾಮೂರ್ತಿಯವರು ವೀಕ್ಷಿಸಿದ್ದಾರೆ. ಮಹಾ ಕುಂಭಮೇಳ ಪ್ರದೇಶದಲ್ಲಿ ಪ್ರತಿದಿನ 40 ಸಾವಿರಕ್ಕೂ ಹೆಚ್ಚು ಭಕ್ತರಿಗೆ ಮಹಾಪ್ರಸಾದವನ್ನು ವಿತರಿಸಲಾಗುತ್ತಿದೆ.

ಮಹಾಪ್ರಸಾದವನ್ನು ತಯಾರಿಸಲು ಬಳಸುವ ಅಡುಗೆಮನೆ ನೀರನ್ನು ಬಿಸಿ ಮಾಡಲು ಮತ್ತು ತರಕಾರಿಗಳು ಮತ್ತು ಅಕ್ಕಿಯನ್ನು ಬೇಯಿಸಲು ಬಾಯ್ಲರ್‌ಗಳಂತಹ ಆಧುನಿಕ ಸೌಲಭ್ಯಗಳನ್ನು ಹೊಂದಿದೆ. ಭಾರವಾದ ಆಹಾರ ಪಾತ್ರೆಗಳನ್ನು ಸಾಗಿಸಲು ಟ್ರ್ಯಾಕ್‌ಗಳನ್ನು ಹಾಕಲಾಗಿದೆ. ರೊಟ್ಟಿ ತಯಾರಿಸಲು ಮೂರು ದೊಡ್ಡ ಯಂತ್ರಗಳನ್ನು ಸ್ಥಾಪಿಸಲಾಗಿದೆ. ಈ ಯಂತ್ರಗಳು ಒಟ್ಟಾಗಿ 1 ಗಂಟೆಯಲ್ಲಿ 10,000 ರೊಟ್ಟಿಗಳನ್ನು ತಯಾರಿಸುತ್ತವೆ. ಸುಧಾ ಮೂರ್ತಿ ಮಾಧ್ಯಮಗಳೊಂದಿಗೆ ಮಾತನಾಡುವಾಗ, ಮಹಾ ಕುಂಭವನ್ನು 'ತೀರ್ಥರಾಜ' ಎಂದರು. ನನ್ನ ಮುತ್ತಜ್ಜ, ಅಜ್ಜಿ, ಅವರಲ್ಲಿ ಯಾರೂ ಇಲ್ಲಿಗೆ ಬರಲು ಸಾಧ್ಯವಾಗಲಿಲ್ಲ. ಅದಕ್ಕಾಗಿಯೇ ನಾನು ಅವರ ಹೆಸರಿನಲ್ಲಿ ತರ್ಪಣವನ್ನು ಅರ್ಪಿಸಬೇಕಾಗಿದೆ ನಾನು ತುಂಬಾ ಸಂತೋಷವಾಗಿದ್ದೇನೆ ಎಂದಿದ್ದಾರೆ.

ಶ್ರೀ ಶಿವಕುಮಾರ ಸ್ವಾಮೀಜಿಯವರ 6ನೇ ವರ್ಷದ ಪುಣ್ಯಸ್ಮರಣೆ



ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿ ಅವರ 6ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಬಸವ ಬಳಗ ಚಾಮುಂಡಿಪುರಂ ಸಂಘದ ವತಿಯಿಂದ ಚಾಮುಂಡಿಪುರಂ ವೃತ್ತದಲ್ಲಿ ಆಚರಿಸಲಾಯಿತು.

ಮೈಸೂರು, ಜ. 22- ಶತಾಯುಷಿ, ತ್ರಿವಿಧ ದಾಸೋಹಿ, ನಡೆದಾಡುವ ದೇವರು ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರ 6ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಬಸವ ಬಳಗ ಚಾಮುಂಡಿಪುರಂ ಸಂಘದ ವತಿಯಿಂದ ಚಾಮುಂಡಿಪುರಂ ವೃತ್ತದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು.

ಬಳಗದ ಅಧ್ಯಕ್ಷ ಸಂದೀಪ್ ಮಾತನಾಡುತ್ತ ನಡೆದಾಡುವ ದೇವರು, ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಅಭಿನವ ಬಸವಣ್ಣನವರು ಎಂದೇ ಪ್ರಸಿದ್ಧರಾಗಿದ್ದರು. ಅನ್ನದಾನದ ಜೊತೆಗೆ ಶಿಕ್ಷಣ ದಾಸೋಹ ಗೈದು ಲಕ್ಷಾಂತರ ಮಕ್ಕಳಿಗೆ ಭವಿಷ್ಯ ಕಟ್ಟಿಕೊಟ್ಟ ಶ್ರೀಗಳ ಬದುಕು ನಮ್ಮೆಲ್ಲರಿಗೂ ಪ್ರೇರಣೆ. ಆಧ್ಯಾತ್ಮದ ಜೊತೆಗೆ ಸಾಮಾಜಿಕ ಕಾರ್ಯಗಳ ಮೂಲಕ ಅವರು ತೋರಿದ ದಾರಿಯು ಎಲ್ಲರಿಗೂ ಆದರ್ಶಪ್ರಾಯವಾಗಿದೆ.

ಬಸವ ಬಳಗಗಳ ಒಕ್ಕೂಟದ 2025 ಅಧ್ಯಕ್ಷ ನಾಗರಾಜ್, ಮಾಜಿ ನಗರ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಬಸವ ಬಳಗ ಚಾಮುಂಡಿಪುರಂ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಖಜಾಂಚಿ ಬಸವರಾಜು, ನಿರ್ದೇಶಕರಾದ ಮಹದೇವಪ್ಪ, ಮಂಜುನಾಥ್, ಪ್ರಭುಶಂಕರ, ಮಂಜುಳಾ, ಬಸವರಾಜು, ಸೋಮೇಶ್, ಧರ್ಮೇಂದ್ರ ಹಾಗೂ ಮುಖಂಡರಾದ ಕೇಬಲ್ ಮಹೇಶ್, ಗಿರೀಶ್, ಲೋಹಿತ್, ವಸಂತ್, ಖಖಖ ಶಿವಕುಮಾರ್, ತಿಪ್ಪೇಶ್, ದೀಪಕ್, ಪುರುಷೋತ್ತಮ್, ಮಹದೇವು, ಮೋಹನ್, ಕುಮಾರ್, ಚಂದ್ರು, ಚನ್ನಪ್ಪ, ಶಿವಲಿಂಗಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಇಂದು ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ: ಸ್ವಯಂಪ್ರೇರಿತ ರಕ್ತದಾನ ಶಿಬಿರ



ಮೈಸೂರು, ಜ. 22- ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ಕೆಎಂಪಿಕೆ ಟ್ರಸ್ಟ್ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರ ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿಯ ಅಂಗವಾಗಿ ಜ.23ರಂದು ಬೆಳಗ್ಗೆ 11 ಗಂಟೆಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರ ಆವರಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮಂಡಿ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ನಾಗೇಶ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಇನ್ನಿತರರು ಭಾಗವಹಿಸಲಿದ್ದಾರೆ.

ವಿಜ್ಞಾನ ವಸ್ತುಪ್ರದರ್ಶನ



ಮೈಸೂರು ತಾಲೂಕು ವಾಜಮಂಗಲದ ರೋಟರಿ ಶಾಲೆಯಲ್ಲಿ ವಿಜ್ಞಾನ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಮಕ್ಕಳು ವಿವಿಧ ಆಕರ್ಷಕ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿ, ವಿವರಿಸಿದರು. ಭುಗತಗಳ್ಳಿ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು, ರೊ.ಡಿ.ಬಿ.ರಾಜಶೇಖರಮೂರ್ತಿ (ರೋಟರಿ ಸದಸ್ಯರು), ರೊ.ಪ್ರಭಾಕರ್ ಪಿ (ರೋಟರಿ ಮೈಸೂರು ಉತ್ತರ ಅಧ್ಯಕ್ಷರು) ತುಕರಾಂ ಶೆಟ್ಟಿ (ರೋಟರಿ ಶಾಲೆಯ ಆಡಳಿತಾಧಿಕಾರಿ) ಚಿತ್ರದಲ್ಲಿದ್ದಾರೆ.

ಅಯೋಧ್ಯೆ ಬಾಲರಾಮನ ಪ್ರತಿಷ್ಠಾಪನೆ ವಾರ್ಷಿಕೋತ್ಸವ; ಮೈಸೂರಲ್ಲಿ ದೀಪೋತ್ಸವ



ಶ್ರೀ ಕೋಟೆ ಆಂಜನೇಸ್ವಾಮಿ ದೇವಸ್ಥಾನ ಆವರಣದಲ್ಲಿ ದೀಪೋತ್ಸವಕ್ಕೆ ಸಂಸದ ಯದುವೀರ್ ಬೃಹತ್ ಅಗರಬತ್ತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಮೈಸೂರು, ಜ.22(ಎಂಕೆ)- ಅಯೋಧ್ಯೆ ಶ್ರೀ ಬಾಲರಾಮನ ಪ್ರತಿಷ್ಠಾಪನೆ ವಾರ್ಷಿಕೋತ್ಸವ ಹಿನ್ನಲೆಯಲ್ಲಿ ಮೈಸೂರಿನಲ್ಲಿ ಸಡಗರ ಸಂಭ್ರಮದಿಂದ ದೀಪೋತ್ಸವ ಆಚರಿಸಲಾಯಿತು.

ಮೈಸೂರು ಹನುಮಂತೋತ್ಸವ ಸಮಿತಿ ವತಿಯಿಂದ ಶ್ರೀ ಕೋಟೆ ಆಂಜನೇಸ್ವಾಮಿ ದೇವಸ್ಥಾನ ಆವರಣದಲ್ಲಿ ದೀಪೋತ್ಸವ ಆಚರಿಸಿದರೆ, ವೀರನಗೆರೆ ಅಶೋಕ ರಸ್ತೆಯಲ್ಲಿರುವ ಶ್ರೀ ವೀರಗಣಪತಿ ದೇವಸ್ಥಾನದ ಎದುರು ಜೈ ಮಾರುತಿ ವೀರನಗೆರೆ ಭಜನಾ ಮಂಡಳಿಯಿಂದ ಲಕ್ಷ ದೀಪೋತ್ಸವ ಆಚರಿಸಲಾಯಿತು.

ಶ್ರೀ ಕೋಟೆ ಆಂಜನೇಸ್ವಾಮಿ ದೇವಸ್ಥಾನದ ಎದುರು ರಾಮ, ಲಕ್ಷ್ಮಣ, ಸೀತೆ ಹಾಗೂ ಹನುಮಂತ ದೇವರುಗಳ ವಿಗ್ರಹಗಳನ್ನಿಟ್ಟು ಪೂಜಾ ವಿಧಿವಿಧಾನ ನಡೆಸಲಾಯಿತು. ಭಕ್ತ ಸಮೂಹದ ನಡುವೆ ಸಂಕಲ್ಪ ಮಾಡಿಕೊಂಡು ಇಷ್ಟಾರ್ಥ ಸಿದ್ಧಿಗಾಗಿ ಪಾರ್ಥನೆ ಸಲ್ಲಿಸಲಾಯಿತು.

ಬಳಿಕ ವೇದಿಕೆ ಬಳಿ ಇದ್ದ ಬೃಹತ್ ಅಗರಬತ್ತಿಯನ್ನು ಬೆಳಗಿಸಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ದೀಪೋತ್ಸವಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಇದೊಂದು ಅತ್ಯಂತ ಸಂತೋಷದ ವಿಷಯ. ಸಮಸ್ತ ಭಾರತೀಯ ಆಕಾಂಕ್ಷೆಯಾಗಿದ್ದ ಅಯೋಧ್ಯೆ ಶ್ರೀ ರಾಮ ಮಂದಿರ ನಿರ್ಮಾಣಗೊಂಡು ಒಂದು ವರ್ಷವಾಗಿದೆ. ರಾಮಮಂದಿರ ನಿರ್ಮಾಣವೂ ಭಾರತೀಯ ಪರಂಪರೆಯನ್ನು ಪುನರುಜ್ಜೀವನಗೊಳಿಸುವ ಕೆಲಸವಾಗಿತ್ತು. ಅಯೋಧ್ಯೆ ಬಾಲರಾಮನ ಆಶೀರ್ವಾದ ಎಲ್ಲರ ಮೇಲೂ ಇರಲಿ ಎಂದು ಪ್ರಾರ್ಥಿಸಿದರು.

ನಂತರ ನೂರಾರು ಮಂದಿ ಭಕ್ತರು, ರಂಗೋಲಿಯೊಂದಿಗೆ ಅಲಂಕೃತವಾಗಿದ್ದ ದೀಪಗಳನ್ನು ಬೆಳಗಿಸಿದರು. ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್, ಮೈಸೂರು ಹನುಮಂತೋತ್ಸವ ಸಮಿತಿಯ ಸಂತೋಷ್(ಶಂಭು), ಸಂಜಯ್, ಹೇಮಂತ್, ರಮೇಶ್, ಸಚಿನ್, ಮುದ್ದುಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ವೀರನಗೆರೆ: ವೀರನಗೆರೆ ಅಶೋಕ ರಸ್ತೆಯಲ್ಲಿರುವ ಶ್ರೀ ವೀರಗಣಪತಿ ದೇವಸ್ಥಾನದ ಎದುರು ಜೈ ಮಾರುತಿ ವೀರನಗೆರೆ ಭಜನಾ ಮಂಡಳಿಯಿಂದ ಲಕ್ಷ ದೀಪೋತ್ಸವ ಆಚರಿಸಲಾಯಿತು. ಪ್ರತ್ಯೇಕವಾಗಿ ಭೇಟಿ ನೀಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ ವಿಶೇಷ ಪೂಜೆ ಸಲ್ಲಿಸಿ, ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಿದರು.

ಈ ವೇಳೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಮಾತನಾಡಿ, ದೀಪ ಬೆಳಗಿಸುವುದರಿಂದ ನಮ್ಮ ಬಾಳು ಬೆಳಗಲಿದೆ. ಮೈಸೂರಿನಲ್ಲಿ ಪ್ರತೀ ವರ್ಷ ದೀಪಗಳನ್ನು ಬೆಳಗಿಸುವ ಮೂಲಕ ಅಯೋಧ್ಯೆ ರಾಮಮಂದಿರ ಉದ್ಘಾಟನಾ ದಿನವನ್ನು ಚಿರಸ್ಥಾಯಿಯನ್ನಾಗಿ ಜನಮಾನಸಗೊಳಿಸಬೇಕು ಎಂದು ಹೇಳಿದರು.

ಬಿಜೆಪಿ ಮುಖಂಡ ಆರ್.ಶ್ರೀನಿವಾಸ್, ವಾರ್ಡ್ ಅಧ್ಯಕ್ಷ ಎಂ.ಶಿವಕುಮಾರ್, ಎಸ್‌ಟಿ ಮೋರ್ಚಾ ಪ್ರದಾನ ಕಾರ್ಯದರ್ಶಿ ಎಂ.ಕುಮಾರ್, ಮುಖಂಡರಾದ ಮಂಜುನಾಥ್, ದೇವರಾಜ್, ನರೇಂದ್ರ ಕುಮಾರ್, ಸಂಜೀವ್ ಮೂರ್ತಿ, ಮದುಕೇಶವ, ಎಲ್.ಶ್ರೀನಿವಾಸ್, ರಾಜಣ್ಣ, ಮಹದೇವಣ್ಣ, ದೇವಣ್ಣ, ಲೋಕೇಶ್, ನಕ್ಷತ್ರ ವಿಜಯ್ ಸೇರಿದಂತೆ ಮೊಹಲ್ಲಾ ಯಜಮಾನರುಗಳು ಉಪಸ್ಥಿತರಿದ್ದರು.

ದೇಶ - ವಿದೇಶ

ಅನಿಯಮಿತ ವಲಸಿಗರ ಸಮಸ್ಯೆ ಬಗೆಹರಿಸುವ ಇಂಗಿತ



ವಾಷಿಂಗ್ಟನ್: ಅಮೆರಿಕದ ನೂತನ ಸೆಕ್ರೆಟರಿ ಆಫ್ ಸ್ಟೇಟ್ ಆಗಿ ನೇಮಕವಾಗಿರುವ ಮಾರ್ಕೊ ರೂಬಿಯೊ ಅವರು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಜೊತೆಗೆ ನಡೆಸಿದ ಮೊದಲ ಸಭೆಯಲ್ಲಿ ಭಾರತದೊಂದಿಗೆ ಆರ್ಥಿಕ ಬಾಂಧವ್ಯವನ್ನು ಮುಂದುವರೆಸಲು ಮತ್ತು ಅನಿಯಮಿತ ವಲಸೆ ಸಮಸ್ಯೆ ಪರಿಹರಿಸಲು ಟ್ರಂಪ್ ಸರ್ಕಾರ ಒಲವು ಹೊಂದಿದೆ ಎಂದು ಅಮೆರಿಕದ ಉನ್ನತ ರಾಜತಾಂತ್ರಿಕರ ವಕ್ತಾರರು ತಿಳಿಸಿದ್ದಾರೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಇಲಾಖೆ ವಕ್ತಾರ ಟಮ್ಮಿ ಬ್ರೂಸ್, ಭಾರತದೊಂದಿಗೆ ಆರ್ಥಿಕ ಸಂಬಂಧಗಳನ್ನು ಹೆಚ್ಚಿಸಲು ಮತ್ತು ಅನಿಯಮಿತ ವಲಸೆಗೆ ಸಂಬಂಧಿಸಿದ ಕಳವಳಗಳನ್ನು ಪರಿಹರಿಸಲು ಭಾರತದೊಂದಿಗೆ ಕೆಲಸ ಮಾಡುವ ಇಂಗಿತವನ್ನು ರೂಬಿಯೊ ವ್ಯಕ್ತಪಡಿಸಿದ್ದಾರೆ ಎಂದರು. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜೈಶಂಕರ್, ರಾಜ್ಯ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ರೂಬಿಯೊ ಅವರನ್ನು ಭೇಟಿಯಾದದ್ದು, ಸಂತೋಷವಾಗಿದೆ. ದ್ವಿಪಕ್ಷೀಯ ಸಭೆಯಲ್ಲಿ ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳ ಬಗ್ಗೆ ಮಾತುಕತೆ ನಡೆದಿದೆ. ಕಾರ್ಯತಂತ್ರದ ಸಹಕಾರವನ್ನು ಮುಂದುವರಿಸಲು ಎದುರು ನೋಡುತ್ತಿದ್ದೇನೆ ಎಂದು ಬರೆದುಕೊಂಡಿದ್ದಾರೆ.

ಜಮ್ಮು-ಕಾಶ್ಮೀರದಲ್ಲಿ 17 ಮಂದಿ ನಿಗೂಢ ಸಾವು

ಶ್ರೀನಗರ: ಕಳೆದ 50 ದಿನಗಳಲ್ಲಿ ಮೂರು ಕುಟುಂಬಗಳ 13 ಮಕ್ಕಳು ಮತ್ತು 4 ಹಿರಿಯರು ಸೇರಿದಂತೆ 17 ಜನರು ನಿಗೂಢ ಕಾಯಿಲೆಯಿಂದ ಸಾವನ್ನಪ್ಪಿದ ನಂತರ, ಜಮ್ಮು ಮತ್ತು ಕಾಶ್ಮೀರದ ರಾಜೌರಿ ಜಿಲ್ಲೆಯ ಬಾಧಾಲ್ ಗ್ರಾಮವನ್ನು ಆಡಳಿತವು ಕಂಟೈನ್ಮೆಂಟ್ ವಲಯವೆಂದು ಘೋಷಿಸಿ, ಎಲ್ಲಾ ಖಾಸಗಿ ಮತ್ತು ಸಾರ್ವಜನಿಕ ಸಭೆಗಳನ್ನು ನಿಷೇಧಿಸಿದೆ. ಅಲ್ಲದೆ ಇದೇ ಊರಿನ ಇನ್ನೊಬ್ಬ ವ್ಯಕ್ತಿ ತೀವ್ರ ಅಸ್ವಸ್ಥರಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಂಟೈನ್‌ಮೆಂಟ್ ವಲಯವಾಗಿ ಘೋಷಿಸಿದ ಕಾರಣ ಗ್ರಾಮದಲ್ಲಿ ಒಂದೆಡೆ ಹೆಚ್ಚು ಜನ ಸೇರುವಂತಿಲ್ಲ. ಜಿಲ್ಲಾಡಳಿತ ಒದಗಿಸಿದ ಆಹಾರವನ್ನಷ್ಟೇ ಸೇವಿಸಬೇಕು ಎಂದು ಆದೇಶಿಸಲಾಗಿದೆ. ಗ್ರಾಮವನ್ನು ಮೂರು ಕಂಟೈನ್‌ಮೆಂಟ್ ವಲಯಗಳಾಗಿ ವಿಂಗಡಿಸಲಾಗಿದೆ. ಮೊದಲ ವಲಯದಲ್ಲಿ ಸಾವು ಸಂಭವಿಸಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ರಾಜೀವ್ ಕುಮಾರ್ ಖಜುರಿಯಾ ಹೇಳಿದ್ದಾರೆ. ಮೃತರ ಕುಟುಂಬಗಳ ಮನೆಗಳನ್ನು ಸೀಲ್ ಮಾಡಲಾಗುವುದು. ಗೊತ್ತುಪಡಿಸಿದ ಅಧಿಕಾರಿಗಳು ಅಥವಾ ಅಧಿಕಾರಿಗಳಿಂದ ಒಪ್ಪಿಗೆ ಪಡೆಯದ ಹೊರತು ಅವರ ಕುಟುಂಬ ಸದಸ್ಯರು ಸೇರಿದಂತೆ ಯಾರೂ ಕೂಡ ಅಲ್ಲಿಗೆ ತೆರಳಕೂಡದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸಂಧಾನಕ್ಕೆ ಬರದಿದ್ದರೆ ರಷ್ಯಾ ಮೇಲೆ ನಿರ್ಬಂಧ ಸಾಧ್ಯತೆ



ವಾಷಿಂಗ್ಟನ್: ಯಾವುದೇ ಸಮಯದಲ್ಲೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿಯಾಗಲು ಸಿದ್ಧ. ಆದರೆ ಉಕ್ರೇನ್ ವಿಷಯದ ಕುರಿತು ಮಾತುಕತೆಗೆ ಬರದಿದ್ದರೆ ರಷ್ಯಾ ಮೇಲೆ ನಿರ್ಬಂಧಗಳನ್ನು ವಿಧಿಸುವ ಸಾಧ್ಯತೆಯಿದೆ ಎಂದು ಅಮೆರಿಕಾದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಯುದ್ಧ ಪ್ರಾರಂಭವಾಗಬಾರದಿತ್ತು. ನೀವು ಸಮರ್ಥ ಅಧ್ಯಕ್ಷರಾಗಿದ್ದರೆ, ಯುದ್ಧ ನಡೆಯುತ್ತಿರಲಿಲ್ಲ. ನಾನು ಅಧ್ಯಕ್ಷನಾಗಿದ್ದರೆ ಉಕ್ರೇನ್‌ನಲ್ಲಿ ಯುದ್ಧ ಎಂದಿಗೂ ನಡೆಯುತ್ತಿರಲಿಲ್ಲ. ಉಕ್ರೇನ್‌ನಲ್ಲಿ ಮಾಧ್ಯಮಗಳಲ್ಲಿ ವರದಿಯಾಗುವುದಕ್ಕಿಂತ ಹೆಚ್ಚಿನ ಜನರು ಸಾಯುತ್ತಿದ್ದಾರೆ. ನೀವು ನಿಜವಾದ ಸಂಖ್ಯೆಗಳನ್ನು ವರದಿ ಮಾಡುತ್ತಿಲ್ಲ. ಅದಕ್ಕಾಗಿ ನಾನು ನಿಮ್ಮನ್ನು ದೂಷಿಸುತ್ತಿಲ್ಲ. ಆ ಸಂಖ್ಯೆಗಳನ್ನು ಬಿಡುಗಡೆ ಮಾಡಲು ಬಯಸದಿದ್ದಕ್ಕಾಗಿ ನಾನು ಬಹುಶಃ ನಮ್ಮ ಸರ್ಕಾರವನ್ನು ದೂಷಿಸುತ್ತಿದ್ದೇನೆ ಎಂದು ಟ್ರಂಪ್ ತಿಳಿಸಿದರು. ಅಮೆರಿಕ ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ಕಳುಹಿಸುವುದನ್ನು ಮುಂದುವರಿಸುತ್ತದೆಯೇ ಅಥವಾ ಶೀಘ್ರದಲ್ಲೇ ಹಿಂಪಡೆಯುತ್ತದೆಯೇ ಎಂದು ಕೇಳಿದಾಗ ವಿಷಯವನ್ನು ಪರಿಶೀಲಿಸುತ್ತಿರುವುದಾಗಿ ಹೇಳಿದ ಅವರು, ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿ ಶಾಂತಿಯನ್ನು ಬಯಸುತ್ತಾರೆ ಎಂದು ಹೇಳಿದರು.

ಮಣಿಪುರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲ ಹಿಂಪಡೆದ ಜೆಡಿಯು



ಇಂಫಾಲ್: ಮಣಿಪುರದ ಜೆಡಿಯು ರಾಜ್ಯ ಘಟಕವು ಬಿಜೆಪಿ ನೇತೃತ್ವದ ಬಿರೇನ್ ಸಿಂಗ್ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿದ್ದು, ಪಕ್ಷವು ತನ್ನ ನಿರ್ಧಾರವನ್ನು ರಾಜ್ಯಪಾಲ ಅಜಯ್‌ಕುಮಾರ್ ಭಲ್ಲಾ ಅವರಿಗೆ ತಿಳಿಸಿದೆ. ರಾಜ್ಯದ ಏಕೈಕ ಜೆಡಿಯು ಶಾಸಕ ಎಂಡಿ ಅಬ್ದುಲ್ ನಾಸಿರ್ ಅವರು ವಿರೋಧ ಪಕ್ಷಗಳ ಸ್ಥಾನದಲ್ಲಿ ಕುಳಿತುಕೊಳ್ಳಲಿದ್ದಾರೆ ಎಂದು ನಿತೀಶ್ ಕುಮಾರ್ ನೇತೃತ್ವದ ಪಕ್ಷ ಬುಧವಾರ ತಿಳಿಸಿದೆ. ಜೆಡಿಯು ಬೆಂಬಲ ಹಿಂಪಡೆದರೂ ಬಿರೇನ್ ಸಿಂಗ್ ಸರ್ಕಾರದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಏಕೆಂದರೆ ಬಿಜೆಪಿ 60 ಸದಸ್ಯ ಬಲದ ಮಣಿಪುರ ವಿಧಾನಸಭೆಯಲ್ಲಿ 37 ಸ್ಥಾನಗಳನ್ನು ಹೊಂದಿದೆ ಮತ್ತು ನಾಗಾ ಪೀಪಲ್ಸ್ ಫ್ರಂಟ್‌ನ ಐದು ಶಾಸಕರು ಹಾಗೂ ಮೂವರು ಪಕ್ಷೇತರರ ಬೆಂಬಲ ಹೊಂದಿದೆ. ಜೆಡಿಯು ರಾಜ್ಯಾಧ್ಯಕ್ಷ ಕ್ಷ ಬಿರೇನ್ ಸಿಂಗ್ ಅವರು ರಾಜ್ಯಪಾಲ ಭಲ್ಲಾ ಅವರಿಗೆ ಬರೆದ ಪತ್ರದಲ್ಲಿ, ಫೆಬ್ರವರಿ/ಮಾರ್ಚ್ 2022ರಲ್ಲಿ ನಡೆದ ಮಣಿಪುರ ವಿಧಾನಸಭೆ ಚುನಾವಣೆಯಲ್ಲಿ, ಜೆಡಿಯುನ ಆರು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಕೆಲವು ತಿಂಗಳುಗಳ ನಂತರ ಜೆಡಿಯುನ ಐದು ಶಾಸಕರು ಬಿಜೆಪಿಗೆ ಪಕ್ಷಾಂತರಗೊಂಡಿದ್ದು, ಈ ಐದು ಶಾಸಕರ ವಿಚಾರಣೆ ಸ್ಪೀಕರ್ ಮುಂದೆ ಬಾಕಿ ಇದೆ ಎಂದು ಹೇಳಿದ್ದಾರೆ.

ಡಿಜಿಟಲೀಕರಣದಿಂದ ಮಕ್ಕಳ ಕಣ್ಣಿಗೆ ಪೆಟ್ಟು; ಮತ್ತೆ ಮುದ್ರಿತ ಪಠ್ಯಪುಸ್ತಕದತ್ತ ಮರಳಿದ ಸ್ವೀಡನ್



ಸ್ವೀಡನ್: ಕಳೆದ ಕೆಲ ವರ್ಷಗಳಿಂದ ಮುಂದಿನ ಯುಗವನ್ನು ಡಿಜಿಟಲ್ ಯುಗ ಎಂದು ಹೇಳಲಾಗುತ್ತಿದೆ. ಶಿಕ್ಷಣ, ವ್ಯಾಪಾರ, ರಾಜಕೀಯ, ಆಡಳಿತ ಸೇರಿದಂತೆ ಯಾವುದೇ ಕ್ಷೇತ್ರದಲ್ಲೂ ಡಿಜಿಟಲೀಕರಣ ತನ್ನ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಆದರೆ ಸ್ವೀಡನ್ ಡಿಜಿಟಲೀಕರಣದಿಂದ ಮತ್ತೆ ಹಿಂದಕ್ಕೆ ಕಾಲಿಡಲು ನಿರ್ಧರಿಸಿದೆ. ಪಠ್ಯ ಪುಸ್ತಕಗಳನ್ನು ಡಿಜಿಟಲೀಕರಣ ಮಾಡಿದ 15 ವರ್ಷಗಳ ನಂತರ ಇದೀಗ ಸ್ವೀಡನ್ ದೇಶ ಮತ್ತೆ ಮುದ್ರಿತ ಮಾದರಿಯ ಪಠ್ಯ ಪುಸ್ತಕಗಳನ್ನು ಮರಳಿ ಚಾಲ್ತಿಗೆ ತರಲು ನಿರ್ಧರಿಸಿದೆ.

ಇದಕ್ಕೆ ಬಹುಮುಖ್ಯ ಕಾರಣವೆಂದರೆ, ಓದುವ ಮತ್ತು ಬರೆಯುವಂತಹ ಮೂಲಭೂತ ಕೌಶಲಗಳನ್ನು ಅಭಿವೃದ್ಧಿಪಡಿಸಲು ಡಿಜಿಟಲ್ ವಿಧಾನವು ವಿಫಲವಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಅಲ್ಲದೇ ಬಹುಮುಖ್ಯವಾಗಿ ನಿರಂತರವಾಗಿ ಆನ್‌ಲೈನ್ ಪಾಠ ಕಲಿಕೆಯಿಂದ ಮಕ್ಕಳ ದೃಷ್ಟಿಯ ಮೇಲೂ ಪರಿಣಾಮ ಬೀರುತ್ತಿದ್ದು, ಸಣ್ಣ ವಯಸ್ಸಿನಲ್ಲೇ ಮಕ್ಕಳು ದೃಷ್ಟಿದೋಷ ಎದುರಿಸುತ್ತಿದ್ದಾರೆ. ಇದರಿಂದ ಪಠ್ಯಕ್ರಮದಲ್ಲಿ ಸಾಂಪ್ರದಾಯಿಕ ಪಠ್ಯಪುಸ್ತಕಗಳಿಗೆ ಸ್ಥಳಾವಕಾಶ ಕಲ್ಪಿಸುವ ಸಲುವಾಗಿ ಕಂಪ್ಯೂಟರ್‌ಗಳನ್ನು ಮರೆಗೆ ಸರಿಸಲು ಸ್ವೀಡನ್ ಮುಂದಾಗಿದೆ.

ಮೈಸೂರು ಮಿತ್ರ ಗುರುವಾರ 23 ಜನವರಿ 2025

ಹಾಡಹಗಲೇ ಅರಣ್ಯ ಕಚೇರಿಗೆ ಬಂದ ಕಾಡಾನೆ!

• ರಸ್ತೆಯಲ್ಲಿ ಸಂಚರಿಸಿ ಅವಾಂತರ • ಸಿಬ್ಬಂದಿ ಸಮಯಪ್ರಜ್ಞೆಯಿಂದ ತಪ್ಪಿದ ಅನಾಹುತ





ತಿತಿಮತಿ ಅರಣ್ಯ ಇಲಾಖೆ ಕಚೇರಿ ಆವರಣದಲ್ಲಿ ಪ್ರತ್ಯಕ್ಷಗೊಂಡ ಕಾಡಾನೆ. ತಿತಿಮಿತಿ ಮುಖ್ಯರಸ್ತೆಯಲ್ಲಿ ಸಂಚರಿಸಿದ ಕಾಡಾನೆ(ಎಡಚಿತ್ರ).

ಸಿದ್ದಾಪುರ, ಜ.22– ಅರಣ್ಯ ಇಲಾಖೆ ಕಚೇರಿ ಮುಂದೆಯೇ ಕಾಡಾನೆಯೊಂದು ಪ್ರತ್ಯಕ್ಷಗೊಂಡು ನಂತರ ನಡು ರಸ್ತೆಯಲ್ಲಿ ಸಂಚರಿಸುವ ಮೂಲಕ ವಾಹನ ಸವಾರರು ಹಾಗೂ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ ಘಟನೆ ತಿತಿಮತಿಯಲ್ಲಿ ಬುಧವಾರ ನಡೆದಿದೆ.

ಬೆಳಗ್ಗೆ ಎಂದಿನಂತೆ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಬಿಡುಬಿಟ್ಟಿರುವ ಆನೆಗಳನ್ನು ಕಾಡಿಗಟ್ಟಲು ಸಿದ್ಧತೆ ಕೈಗೊಂಡು ಇಲಾಖೆ ಕಚೇರಿಯಿಂದ ತೆರಳಲು ಮುಂದಾಗಿದ್ದರು.

ಆದರೆ, ಬೆಳಗ್ಗೆ 9.30ರಲ್ಲಿ ಆನೆಚೌಕೂರು ವನ್ಯಜೀವಿ ಅರಣ್ಯ ಪ್ರದೇಶದಿಂದ ನೇರವಾಗಿ ಅರಣ್ಯ ಇಲಾಖೆ ಕಚೇರಿಗೆ ಬಂದ ಕಾಡಾನೆ ಕಚೇರಿ ಮುಂದೆ ನಿಲ್ಲಿಸಿದ್ದ ವಾಹನದ ಮೇಲೆ ದಾಳಿಗೆ ಯತ್ನಿಸಿದೆ. ಕಚೇರಿಯಲ್ಲಿದ್ದ ವಲಯ ಅರಣ್ಯಾಧಿಕಾರಿ ಗಂಗಾಧರ್, ಉಪ ವಲಯ ಅರಣ್ಯಾಧಿಕಾರಿಗಳಾದ ಉಮಾ ಶಂಕರ್, ಪ್ರಶಾಂತ್, ಅರಣ್ಯ ರಕ್ಷಕ ಸಚಿನ್ ಸೇರಿದಂತೆ ಸಿಬ್ಬಂದಿ ತಕ್ಷಣ ಎಚ್ಚೆತ್ತು ಆನೆಯನ್ನು ಅರಣ್ಯಕ್ಕೆ ಅಟ್ಟಲು ಮುಂದಾಗಿದ್ದರು.

ಕೆಲಕಾಲ ಗಲಿಬಿಲಿಗೊಂಡ ಕಾಡಾನೆ ತಿತಿಮಿತಿ ಮುಖ್ಯ ರಸ್ತೆಯಲ್ಲೇ ಸಂಚಾರ ಶುರು ಮಾಡಿತ್ತು. ಆನೆಯನ್ನು ಹಿಂಬಾಲಿಸಿದ ಅರಣ್ಯ ಸಿಬ್ಬಂದಿ, ಸ್ಥಳೀಯರು ಹಾಗೂ ವಾಹನ ಸವಾರರಿಗೆ ಆನೆ ಸಂಚಾರದ ಬಗ್ಗೆ ಮಾಹಿತಿ ನೀಡಿದರು. ರಸ್ತೆಯಲ್ಲಿ ಸಂಚರಿಸುತ್ತಿದ್ದ ಆನೆಯನ್ನು ಕಂಡು ಸ್ಥಳೀಯರು ದಿಕ್ಕಪಾಲಾಗಿ ಓಡಲು ಪ್ರಾರಂಭಿಸಿದರೆ, ವಾಹನ ಸವಾರರು ಬಂದ ದಾರಿಯಲ್ಲೇ ಹಿಂತಿರುಗಿದರು.

ಕೆಲ ದೂರದವರೆಗೆ ತೆರಳಿದ ಕಾಡಾನೆ ಸಮೀಪದ ಕಾಫಿ ತೋಟದ ಮೂಲಕ ಅರಣ್ಯ ಪ್ರವೇಶಿಸಿತು. ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮಯ ಪ್ರಜ್ಞೆಯಿಂದ ಅನಾಹುತ ತಪ್ಪಿದಂತಾಗಿದೆ.

ತಿತಿಮತಿ ಆನೆಚೌಕೂರು ಅರಣ್ಯದಂಚಿನಲ್ಲಿ ಕಂದಕ ಹಾಗೂ ಬಹುತೇಕ ಕಡೆಗಳಲ್ಲಿ ರೈಲ್ವೆ ಕಂಬಿ ಅಳವಡಿಸಿದ್ದರೂ ಇದ್ಯಾವುದನ್ನು ಲೆಕ್ಕಿಸದೆ ಆನೆಗಳು ಕಾಡಿನಿಂದ ನಾಡಿನತ್ತ ಬರುತ್ತಿವೆ. ಜಿಲ್ಲೆಯಲ್ಲಿ ಆನೆ ಮತ್ತು ಮಾನವ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಾಡಾನೆ ಹಾವಳಿಯಿಂದ ಕಾರ್ಮಿಕರು ಕೆಲಸಕ್ಕೆ ತೆರಳಲು ಭಯಪಡುತ್ತಿದ್ದಾರೆ.

ವರ್ಷವಿಡೀ ಕಷ್ಟಪಟ್ಟು ಬೆಳೆದ ಫಸಲುಗಳು ಕಾಡುಪ್ರಾಣಿಗಳ ಪಾಲಾಗುತ್ತಿದ್ದು, ಬೆಳಗಾರರು, ಕಾರ್ಮಿಕರು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಹ ಸ್ಥಿತಿ ಎದುರಾಗಿದೆ.ಹಾಡಹಗಲಿನಲ್ಲೇ ಕಾಣಿಸಿ ಕೊಳ್ಳುತ್ತಿರುವ ಕಾಡಾನೆಯಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ನಡೆದಾಡಲು ಸಾಧ್ಯವಾಗುತ್ತಿಲ್ಲ. ಕಾಡಾನೆ ಹಾವಳಿಯನ್ನ ಶಾಶ್ವತವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಮುಂದಾಗಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ದೇವಾಲಯ ಸಮಿತಿ ನಿರ್ದೇಶಕರ ಮೇಲೆ ಹಲ್ಲೆ ಪ್ರಕರಣ

ಭಜರಂಗದಳ ಜಿಲ್ಲಾ ಸಂಯೋಜಕ ಸೇರಿ ಮೂವರ ಬಂಧನ



ಆರ್.ಸುಬ್ರಮಣಿ.

ಸಿದ್ದಾಪುರ, ಜ.22–ವಿರಾಜಪೇಟೆ ತಾಲೂಕಿನ ಸಿದ್ದಾಪುರದ ಶ್ರೀ ಮುತ್ತಪ್ಪ ದೇವಾಲಯ ಸಮಿತಿ ನಿರ್ದೇಶಕ ಆರ್.ಸುಬ್ರಮಣಿ ಅವರ ಮೇಲಿನ ಹಲ್ಲೆ ಪ್ರಕರಣದಲ್ಲಿ ಭಜರಂಗದಳದ ಕೊಡಗು ಜಿಲ್ಲಾ ಸಂಯೋಜಕ ಪ್ರವೀಣ್ ಸೇರಿದಂತೆ ಮೂವರನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಘಟನೆ: ಮಂಗಳವಾರ ಸಂಜೆ ಕೆಲವರು ದೇವಾಲಯಕ್ಕೆ ಅಕ್ರಮವಾಗಿ ಪ್ರವೇಶಿಸಿ ಗಲಾಟೆ ಮಾಡಲು ಮುಂದಾಗಿದ್ದರು ಎಂದು ದೂರಿನಲ್ಲಿ ತಿಳಿಸಿರುವ ದೇವಸ್ಥಾನ ನಿರ್ದೇಶಕ ಸುಬ್ರಮಣಿ, ಈ ಬಗ್ಗೆ ದೇವಾಲಯ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀಧರ್‌ಗೆ ಕರೆ ಮಾಡಿ ತಿಳಿಸಲಾಯಿತು. ಅವರು ಮತ್ತೊಬ್ಬ ನಿರ್ದೇಶಕ ಅನಿಲ್‌ಕುಮಾರ್ ಅವರೊಂದಿಗೆ ದೇವಸ್ಥಾನಕ್ಕೆ ಆಗಮಿಸಿದರು.

ಈ ವೇಳೆ ಸಿದ್ದಾಪುರದ ಪ್ರವೀಣ್ ಹಾಗೂ ಇತರರು ಶ್ರೀಧರ್ ಮತ್ತು ಅನಿಲ್ ಕುಮಾರ್ ಅವರೊಂದಿಗೆ ವಾಗ್ವಾದಕ್ಕಿಳಿದು, ಪ್ರವೀಣ್ ಜೊತೆಗಿದ್ದ ಒಬ್ಬ ಕತ್ತಿಯಿಂದ ನನ್ನ ಕುತ್ತಿಗೆಗೆ ಕಡಿಯಲು ಮುಂದಾಗಿದ್ದಾನೆ. ಈ ಸಂದರ್ಭ ನನ್ನ ತಲೆಗೆ ಗಂಭೀರವಾದ ಗಾಯವಾಗಿದೆ ಎಂದು ಆರ್.ಸುಬ್ರಮಣಿ ದೂರಿನಲ್ಲಿ ತಿಳಿಸಿದ್ದಾರೆ.

ಅನಿಲ್ ಕುಮಾರ್ ಕೈಗೆ ಪ್ರವೀಣ್ ಸೌಟಿನಿಂದ ಹಲ್ಲೆ ಮಾಡಿ ಗಾಯಗೊಳಿಸಿದ್ದಾನೆ. ಇದರಿಂದ ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿಯಲಾಗಿದೆ ಎಂದು ಆರ್.ಸುಬ್ರಮಣಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಸಿದ್ದಾಪುರ ಠಾಣೆ ಪೊಲೀಸರು ಆರೋಪಿ ಪ್ರವೀಣ್ ಸೇರಿದಂತೆ ಮೂವರನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ನೀಡಿದ್ದಾರೆ.

ಪ್ರತಿ ದೂರು: ನನ್ನ ಮೇಲೆ ಆರ್. ಸುಬ್ರಮಣಿ ಹಲ್ಲೆ ಮಾಡಿದ್ದಾರೆ ಎಂದು ಪ್ರವೀಣ್ ಪೊಲೀಸ್ ಠಾಣೆಗೆ ಪ್ರತಿ ದೂರು ನೀಡಿದ್ದಾರೆ.

ಬಾಲರಾಮ ಪ್ರಾಣ ಪ್ರತಿಷ್ಠಾಪನೆ ವಾರ್ಷಿಕೋತ್ಸವ



ಗೋಣಿಕೊಪ್ಪದಲ್ಲಿ ಹಿಂದೂ ಕಾರ್ಯಕರ್ತರು ಅನ್ನಸಂತರ್ಪಣೆ ಏರ್ಪಡಿಸಿದ್ದರು.

ಗೋಣಿಕೊಪ್ಪ, ಜ.22–ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ವರ್ಷ ತುಂಬಿದ ಹಿನ್ನೆಲೆಯಲ್ಲಿ ಗೋಣಿಕೊಪ್ಪದಲ್ಲಿ ಹಿಂದೂ ಕಾರ್ಯಕರ್ತರು ಅನ್ನಸಂತರ್ಪಣೆ ಏರ್ಪಡಿಸಿದ್ದರು.

ಇದೇ ವೇಳೆ ಮಾತನಾಡಿದ ಆರ್‌ಎಸ್‌ಎಸ್‌ನ ಚೆಕ್ಕೇರ ಮನು ಕಾವೇರಪ್ಪ, ಶ್ರೀರಾಮಚಂದ್ರನ ದೇಗುಲ ಪ್ರತಿಷ್ಠಾಪನೆಯಿಂದ ಎಲ್ಲರಿಗೂ ಪುನರ್ ಜನ್ಮ ಸಿಕ್ಕಿದಂತಾಗಿದೆ. ಬಾಲರಾಮ ಪ್ರಾಣ ಪ್ರತಿಷ್ಠಾಪನೆ ವಾರ್ಷಿಕೋತ್ಸವವನ್ನು ಭಕ್ತರು ಅನ್ನಸಂತರ್ಪಣೆ ಮೂಲಕ ಆಚರಿಸುತ್ತಿದ್ದಾರೆ ಎಂದರು.

ಪ್ರಾಣ ಪ್ರತಿಷ್ಠಾಪನೆಯಿಂದ ವಿಶ್ವದಲ್ಲಿ ಹಿಂದೂ ಧರ್ಮ ಮುನ್ನಲೆಗೆ ಬಂದಿದ್ದು, ಸರ್ವೇ ಜನ ಸುಖಿನೋ ಭವಂತು ಎಂಬ ಧ್ಯೇಯದೊಂದಿಗೆ ಮುನ್ನಡೆಯುವಂತಾಗಿದೆ. ಎಲ್ಲರಿಗೂ ಒಳಿತನ್ನು ಬಯಸುತ್ತಾ, ಯಾರಿಗೂ ಕೆಡಕು ಬಯಸದೆ ಮುನ್ನಡೆಯಲಾಗುತ್ತಿದೆ. ಇದರಿಂದ ಹಿಂದೂ ಧರ್ಮಕ್ಕೆ ಮತ್ತಷ್ಟು ಶಕ್ತಿ ಬಂದಿದೆ ಎಂದರು.

ರಾಮ ಜನ್ಮಭೂಮಿ ಸೇವಾ ಸಮಿತಿಯಿಂದ ಅನ್ನಸಂತರ್ಪಣೆ



ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಡೆದು ವರ್ಷ ತುಂಬಿದ ಹಿನ್ನೆಲೆಯಲ್ಲಿ ಶ್ರೀರಾಮ ಜನ್ಮಭೂಮಿ ಸೇವಾ ಸಮಿತಿಯಿಂದ ಮಡಿಕೇರಿಯಲ್ಲಿ ಅನ್ನಸಂತರ್ಪಣೆ ಕಾರ್ಯ ನಡೆಯಿತು.

ಮಡಿಕೇರಿ, ಜ.22– ಮರ್ಯಾದ ಪುರುಷೋತ್ತಮ ಶ್ರೀರಾಮ ಜನ್ಮ ಸ್ಥಳವಾದ ಅಯೋಧ್ಯೆಯಲ್ಲಿ ಶ್ರೀ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಡೆದು ವರ್ಷ ತುಂಬಿದ ಹಿನ್ನೆಲೆಯಲ್ಲಿ ಬುಧವಾರ ಶ್ರೀರಾಮ ಜನ್ಮಭೂಮಿ ಸೇವಾ ಸಮಿತಿಯಿಂದ ನಗರದಲ್ಲಿ ಅನ್ನಸಂತರ್ಪಣೆ ಕಾರ್ಯ ನಡೆಯಿತು.

ಭಾರತೀಯರ ಶತ ಶತಮಾನಗಳ ಕನಸು ಶ್ರೀಬಾಲ ರಾಮನ ಪ್ರತಿಷ್ಠಾಪನೆಯೊಂದಿಗೆ ಅಯೋಧ್ಯೆಯ ಭವ್ಯ ಸುಂದರ ಮಂದಿರ ಭಕ್ತರಿಗೆ ತೆರೆದುಕೊಂಡಿದೆ. ಈ ಸಂಭ್ರಮವನ್ನು ಶ್ರೀರಾಮ ಜನ್ಮಭೂಮಿ ಸೇವಾ ಸಮಿತಿ ಅನ್ನಸಂತರ್ಪಣೆ ಮೂಲಕ ಆಚರಿಸುತ್ತಿದೆ.

ಮಧ್ಯಾಹ್ನ 12 ಗಂಟೆಯಿಂದ ಸಂಜೆವರೆಗೆ ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಅನ್ನಸಂತರ್ಪಣೆ ನಡೆಯಿತು. ಸಮಿತಿಯ ಪದಾಧಿಕಾರಿಗಳು, ನೆರವು ನೀಡಿದ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸದಸ್ಯರು ಶ್ರದ್ಧೆಯಿಂದ ಈ ಕಾರ್ಯ ನೆರವೇರಿಸಿದ್ದು ವಿಶೇಷವಾಗಿತ್ತು.

ಶ್ರೀರಾಮ ಜನ್ಮಭೂಮಿ ಸೇವಾ ಸಮಿತಿಯ ನಿರ್ದೇಶಕರಾದ ಪಿ.ಡಿ.ನವೀನ್, ಬಿ.ಎಸ್.ಪ್ರಭು ರೈ, ಎಂ.ಯು.ರಘು, ಪ್ರಸಾದ್ ಸಂಪಿಗೆಕಟ್ಟೆ, ಸದಾಶಿವ ರೈ, ಆನಂದ್, ಬಿ.ಎಂ.ಶೇಖರ್ ಅವರು ವಿವಿಧ ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ಅನ್ನಸಂತರ್ಪಣೆ ನೆರವೇರಿಸಿದರು.

ವಿದ್ಯಾರ್ಥಿಗಳಿಗೆ ಶಿಕ್ಷಣದೊಂದಿಗೆ ನೈತಿಕ ಮೌಲ್ಯ ಕಲಿಸಬೇಕು



ಅರಮೇರಿ ಕಳಂಚೇರಿ ಶ್ರೀಮಠದಲ್ಲಿ ನಡೆದ ಹೊಂಬೆಳಕು ಕಿರಣ ಮಾಸಿಕ ತತ್ತ್ವ ಚಿಂತನಾಗೋಷ್ಠಿಯನ್ನು ಎಲ್‌ಐಸಿ ನಿವೃತ್ತ ಅಧಿಕಾರಿ ಸೀತಾ ಸುಧಾಕರ್ ಉದ್ಘಾಟಿಸಿದರು.

ವಿರಾಜಪೇಟೆ ವಿದ್ಯಾರ್ಥಿಗಳಿಗೆ ಶಿಕ್ಷಣದೊಂದಿಗೆ ನೈತಿಕ ಮೌಲ್ಯಗಳನ್ನು ಶಾಲೆ ಮತ್ತು ಮನೆಗಳಲ್ಲಿ ಕಲಿಸುವುದರಿಂದ ಮಕ್ಕಳು ಗುರಿ ಮುಟ್ಟಲು ಸಾಧ್ಯ ಎಂದು ನಿವೃತ್ತ ಮುಖ್ಯ ಶಿಕ್ಷಕ ಎ.ವಿ.ಮಂಜುನಾಥ್ ಅಭಿಪ್ರಾಯಪಟ್ಟರು.

ಸಮೀಪದ ಅರಮೇರಿ ಕಳಂಚೇರಿ ಶ್ರೀಮಠದ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಕಿರಣ–227ನೇ ಮಾಸಿಕ ತತ್ತ್ವ ಚಿಂತನಾಗೋಷ್ಠಿಯಲ್ಲಿ 'ವಿದ್ಯಾರ್ಥಿಗಳಿಗೆ ನೈತಿಕ ಮೌಲ್ಯಗಳ ಅವಶ್ಯಕತೆ' ಕುರಿತು ಉಪನ್ಯಾಸ ನೀಡಿದ ಅವರು, ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮಾಣಿಕತೆ, ಸಹನೆ, ಜವಾಬ್ದಾರಿಯಂತ ಒಳ್ಳೆಯ ಗುಣಗಳನ್ನು ಕಲಿಸಬೇಕು. ನೈತಿಕ ಮೌಲ್ಯಗಳನ್ನು ಮನೆ ಹಾಗೂ ಶಾಲೆಗಳಲ್ಲಿ ಕಲಿಸುವಂತಾಗಬೇಕು ಹಾಗೂ ಧ್ಯಾನ, ಯೋಗದಂತ ಪಠ್ಯೇತರ ಚಟುವಟಿಕೆಗಳನ್ನು ಹೇಳಿಕೊಡುವುದರಿಂದ ಮಕ್ಕಳ ಭವಿಷ್ಯ ಉಜ್ವಲವಾಗಲಿದೆ. ರಾಜಕೀಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ನೈತಿಕ ಮೌಲ್ಯಗಳ ಅವಶ್ಯಕತೆ ಇದೆ ಎಂದು ಹೇಳಿದರು.

ಭಾರತಿಯ ಜೀವ ವಿಮಾ ನಿಗಮದ ನಿವೃತ್ತ ಅಧಿಕಾರಿ ವಿರಾಜಪೇಟೆ ಗಾಂಧಿ ನಗರದ ಸೀತಾ ಸುಧಾಕರ್ ಮಾತನಾಡಿ, ಪ್ರತಿ ವಿದ್ಯಾರ್ಥಿಗಳಿಗೂ ವಾರಕ್ಕೊಮ್ಮೆ ಜೀವನದ ಮೌಲ್ಯಗಳನ್ನು ಶಾಲೆಯಲ್ಲಿ ಹೇಳಿಕೊಡಬೇಕು. ಆಗ ಮಾತ್ರ ಮಕ್ಕಳ ಭವಿಷ್ಯ ರೂಪಿಸಲು ಸಾಧ್ಯ ಎಂದರು.

ಅರಮೇರಿ ಕಳಂಚೇರಿ ಮಠಾಧ್ಯಕ್ಷ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವಿದ್ಯಾರ್ಥಿಗಳಾದ ದೀಪ್ತಿ, ವರ್ಷಿಣಿ, ಸುಸ್ಮಿತಾ ಮತ್ತಿತರರು ಇದ್ದರು.

ಇಂದು ಮಡಿಕೇರಿಯಲ್ಲಿ ವಸತಿ ಶಾಲಾ ಹೊರಗುತ್ತಿಗೆ ನೌಕರರ ಪ್ರತಿಭಟನೆ

ಮಡಿಕೇರಿ, ಜ.22–ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಕೊಡಗು ಜಿಲ್ಲಾ ಸಮಿತಿ ವತಿಯಿಂದ ಜ.23ರಂದು ನಗರದಲ್ಲಿ ಪ್ರತಿಭಟನೆ ನಡೆಯಲಿದೆ.

ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಅಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಕನಿಷ್ಠ ವೇತನ 31 ಸಾವಿರ ರೂ. ಪಾವತಿ ಮಾಡಬೇಕು. ನೇರವಾಗಿ ಇಲಾಖೆಯಿಂದ ವೇತನ ನೀಡಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಸಿಬ್ಬಂದಿ ಸಂಖ್ಯೆ ಕಡಿತ ಆದೇಶ ರದ್ದು ಮಾಡಬೇಕು. ಜೀತ ಪದ್ಧತಿಯಿಂದ ಮುಕ್ತಿಗೊಳಿಸಬೇಕು. ಬೀದರ್ ಮಾದರಿಯ ಸಹಕಾರ ಸಂಘವನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಣೆ ಮಾಡಬೇಕು. ವಾರದ ರಜೆ, ಬಾಕಿ ಸಂಬಳ, ಹೆರಿಗೆ ರಜೆ ವೇತನ ನೀಡಬೇಕು. ಇಎಸ್‌ಐ ಮತ್ತು ಪಿಎಫ್ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಮನವಿಯನ್ನು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಸಮಿತಿ ಅಧ್ಯಕ್ಷ ಜಿ.ಕೆ.ದಿನೇಶ್ ಹಾಗೂ ಉಪಾಧ್ಯಕ್ಷ ಹೆಚ್.ಎಸ್.ಯೋಗೇಶ್ ತಿಳಿಸಿದ್ದಾರೆ.

ಆನೆ ದಂತ ಅಕ್ರಮ ಸಾಗಣೆ: ಅರಣ್ಯ ವೀಕ್ಷಕ ಸೇರಿ ಇಬ್ಬರ ಬಂಧನ



ಆನೆ ದಂತ ಸಾಗಿಸುತ್ತಿದ್ದ ಅರಣ್ಯ ವೀಕ್ಷಕ ಹಾಗೂ ಆತನ ಸಂಬಂಧಿಯನ್ನು ಅರಣ್ಯ ಸಂಚಾರಿ ದಳದ ಸಿಐಡಿ ಪೊಲೀಸರು ಬಂಧಿಸಿರುವುದು.

ಕೊಳ್ಳೇಗಾಲ, ಜ.22–ಎರಡು ಆನೆ ದಂತಗಳನ್ನು ಬೈಕ್‌ನಲ್ಲಿ ಸಾಗಿಸುತ್ತಿದ್ದ ಅರಣ್ಯ ವೀಕ್ಷಕ ಹಾಗೂ ಆತನ ಸಂಬಂಧಿಯನ್ನು ಅರಣ್ಯ ಸಂಚಾರಿ ದಳದ ಸಿಐಡಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮಲೆಮಹದೇಶ್ವರ ವನ್ಯಜೀವಿ ಧಾಮದ ಜಾಗೇರಿ ದೊಡ್ಡಮಾಕಳಿ ಬೀಟ್‌ನ ಅರಣ್ಯ ವೀಕ್ಷಕ ಚಂದ್ರಶೇಖರ್(27) ಮತ್ತು ಈತನ ಸಂಬಂಧಿ ಬಸವರಾಜು(36) ಬಂಧಿತರು. ಮತ್ತೊಬ್ಬ ಆರೋಪಿ ಪುಟ್ಟಸ್ವಾಮಿ(55) ಪರಾರಿಯಾಗಿದ್ದಾನೆ.

ಈ ಮೂವರು ಪಟ್ಟಣದ ಬೈಪಾಸ್ ರಸ್ತೆಯಲ್ಲಿ ಆನೆ ದಂತವನ್ನು ಚಾಪೆಯಲ್ಲಿ ಸುತ್ತಿಕೊಂಡು ಬೈಕ್‌ನಲ್ಲಿ ಸಾಗಿಸುತ್ತಿದ್ದರು. ಈ ವೇಳೆ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಅಧೀಕ್ಷಕ ಎಸ್.ಎಸ್.ಕಾಶಿ ಮಾರ್ಗದರ್ಶನದಲ್ಲಿ ನಗರದ ಸಿಐಡಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ವಿಜಯ್ ರಾಜ್ ಮತ್ತು ತಂಡ ಕಾರ್ಯಾಚರಣೆ ನಡೆಸಿ, ಆನೆ ದಂತ ಸಮೇತ ಇಬ್ಬರನ್ನು ಬಂಧಿಸಿದ್ದಾರೆ.

ಪರಾರಿಯಾಗಿರುವ ಮತ್ತೊಬ್ಬ ಆರೋಪಿಗಾಗಿ ಶೋಧ ಕಾರ್ಯ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಬಂಧಿತರಿಂದ ಎರಡು ಆನೆ ದಂತ, ಒಂದು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ. ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಸಂಬಂಧ ಕೊಳ್ಳೇಗಾಲ ಅರಣ್ಯ ಸಂಚಾರಿ ದಳದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಯಾಚರಣೆಯಲ್ಲಿ ಹೆಡ್ ಕಾನ್‌ಸ್ಟೇಬಲ್‌ಗಳಾದ ಶಂಕರ, ರಾಮಚಂದ್ರ, ಬಸವರಾಜು, ಸ್ವಾಮಿ, ಲತಾ, ಜಮೀಲ್, ಕಾನ್‌ಸ್ಟೇಬಲ್ ಬಸವರಾಜು, ಚಾಲಕ ಪ್ರಭಾಕರ್ ಪಾಲ್ಗೊಂಡಿದ್ದರು.

ಮಹಾನ್ ಸಾಧಕರ ತತ್ವ ಸಿದ್ಧಾಂತ ಅಳವಡಿಸಿಕೊಳ್ಳಿ

● ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಹೇಳಿಕೆ ● ಅಂಬಿಗರ ಚೌಡಯ್ಯ, ವೇಮನ ಜಯಂತಿ ಆಚರಣೆ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಆಯೋಜಿಸಿದ್ದ ಅಂಬಿಗರ ಚೌಡಯ್ಯ ಹಾಗೂ ವೇಮನ ಜಯಂತಿ ಕಾರ್ಯಕ್ರಮವನ್ನು ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಉದ್ಘಾಟಿಸಿದರು.

ಚಾಮರಾಜನಗರ, ಜ.22–ಅಂಬಿಗರ ಚೌಡಯ್ಯ, ವೇಮನ ಸೇರಿದಂತೆ ದೇಶದ ಮಹಾನ್ ಸಾಧಕರ ಆದರ್ಶ, ತತ್ವಸಿದ್ಧಾಂತಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದು ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರ (ಚುಡಾ) ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಶಿವಶರಣ ಅಂಬಿಗರ ಚೌಡಯ್ಯ ಹಾಗೂ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಿರಂತರವಾಗಿ ಬದಲಾಗುವ ನೀರಿನ ಅಲೆಗಳ ನಡುವೆ ದೃಢಸಂಕಲ್ಪದಿಂದ ದೋಣಿ ನಡೆಸುವ ಕಾಯಕ ಮಾಡುತ್ತಿದ್ದ ಅಂಬಿಗರ ಚೌಡಯ್ಯ ಅವರು ರಚಿಸಿದ ವಚನಗಳ ಚಿಂತನೆ ಜನರಿಗೆ ಪ್ರೇರಣಾಶಕ್ತಿಯಾಗಿದೆ. ದೋಣಿ ನಡೆಸುತ್ತಲೇ ಜನರಿಗೆ ಕಾಯಕದ ಮಹತ್ವವನ್ನು ತಿಳಿಹೇಳಿದ ಅಂಬಿಗರ ಚೌಡಯ್ಯ ಅವರ ಆದರ್ಶ ಚಿಂತನೆಗಳನ್ನು ಮುಂದಿನ ಪೀಳಿಗೆಗೆ ಪಸರಿಸುವ ಕೆಲಸ ಆಗಬೇಕು. ಅವರ ತತ್ವಸಿದ್ಧಾಂತಗಳಿಗೆ ನಾವೆಲ್ಲರೂ ಬದ್ಧರಾಗಿರಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಕರ್ನಾಟಕದ ಇತಿಹಾಸದಲ್ಲಿ 12ನೇ ಶತಮಾನ ಮಹತ್ವಪೂರ್ಣ ಬದಲಾವಣೆಗೆ ನಾಂದಿ ಹಾಡಿದ ಕಾಲವಾಗಿದೆ. ಅಂಬಿಗರ ಚೌಡಯ್ಯ 12ನೇ ಶತಮಾನದ ಪ್ರಸಿದ್ಧ ವಚನಕಾರರು ಹಾಗೂ ಸಮಾಜ ಸುಧಾರಕರಾಗಿದ್ದರು. ಬಸವಣ್ಣನವರ ಅನುಭವ ಮಂಟಪದಲ್ಲಿದ್ದ ಶಿವಶರಣರ ನಡುವೆ ತನ್ನದೇ ಛಾಪು ಮೂಡಿಸಿರುವ ಚೌಡಯ್ಯ ತಮ್ಮ ವಿವೇಚನಾಶಕ್ತಿ, ಆಳವಾದ ಅನುಭವದಿಂದ 278 ವಚನಗಳನ್ನು ರಚಿಸಿ, ವಚನಾಂಕಿತ ಬಿರುದು ಪಡೆದಿದ್ದರು ಎಂದರು.

ಶಿವಶರಣರ ವಚನ ಸಂಸ್ಕೃತಿ ಆಚಾರ–ವಿಚಾರ, ಸಂಪ್ರದಾಯಗಳಿಂದ ತುಂಬಿಹೋಗಿದ್ದ ಸಮಾಜಕ್ಕೆ ಚಲನಾಶೀಲತೆ ನೀಡಿತು ಎಂದರೆ ತಪ್ಪಾಗಲಾರದು. ವಚನಗಳನ್ನು ರಚಿಸಿ ನುಡಿದಂತೆ ನಡೆದ ಅಂಬಿಗರ ಚೌಡಯ್ಯ ಅವರು ಸಾಮಾಜಿಕ ತಾರತಮ್ಯದ ವಿರುದ್ಧ ಹೋರಾಡಿ ಸದಾಚಾರದ ಹಾದಿಯಲ್ಲಿ ಬೆಳಕು ಚೆಲ್ಲಿದರು. ಅವರ ವಚನಗಳು ತರ್ಕಬದ್ಧ ಹಾಗೂ ಮಾನವ ಸಹಾನುಭೂತಿಯ ಪ್ರತಿಬಿಂಬವಾಗಿವೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡಿ, 15ನೇ ಶತಮಾನದಲ್ಲಿ ಜೀವಿಸಿದ್ದ ವೇಮನ ಅವರು ಶ್ರೇಷ್ಠ ವಚನಕಾರರು ಆಗಿದ್ದರು. ಮಹಾಯೋಗಿ ವೇಮನ ಕನ್ನಡದಲ್ಲಿ ಸರ್ವಜ್ಞ ಹಾಗೂ ತಮಿಳಿನ ತಿರುವಳ್ಳೂರ್ ಅವರಂತೆ ತೆಲುಗು ಭಾಷೆಯಲ್ಲಿ ಸಾಮಾನ್ಯ ಜನರಿಗೆ ಅರ್ಥವಾಗುವಂತಹ ಸರಳ ವಚನಗಳನ್ನು ರಚಿಸಿ ಜನರನ್ನು ಜಾಗೃತಗೊಳಿಸಿದರು. ಮಹಾನ್ ಸಮಾಜ ಸುಧಾರಕರಾಗಿ ಮನುಕುಲದ ಏಳಿಗೆಗಾಗಿ ಶ್ರಮಿಸಿದ ವೇಮನ ಅವರ ಮೌಲ್ಯಯುತ ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ ಕುಮಾರ್, ಕನ್ನಡಪರ ಚಳವಳಿ ಮುಖಂಡರಾದ ಶ್ರೀನಿವಾಸಗೌಡ, ಪಣ್ಯದಹುಂಡಿ ರಾಜು, ಸಮಾಜದ ಜಿಲ್ಲಾಧ್ಯಕ್ಷ ಪ್ರಕಾಶ್, ಮುಖಂಡರಾದ ಶ್ರೀನಿವಾಸ್, ಶ್ರೀಕಂಠ, ಈಶ್ವರ್, ಶಿವಣ್ಣ, ಜಿಲ್ಲಾ ಮಟ್ಟದ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.

ಗಾಂಜಾ ಸಾಗಿಸುತ್ತಿದ್ದ ಯುವಕನ ಬಂಧನ



ಕೊಳ್ಳೇಗಾಲ: ಪಟ್ಟಣದ ಕೆಎಸ್‌ಆರ್‌ಟಿಸಿ ಡಿಪೋ ಮುಂಭಾಗ ರಸ್ತೆಯಲ್ಲಿ ಒಣ ಗಾಂಜಾ ಸಾಗಿಸುತ್ತಿದ್ದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

ಹನೂರು ತಾಲೂಕಿನ ಮಂಚಾಪುರ ಗ್ರಾಮದ ಮನು(22) ಬಂಧಿತ. ಈತ ಗಾಂಜಾ ಸಾಗಿಸುತ್ತಿರುವ ಮಾಹಿತಿ ಮೇರೆಗೆ ಪಟ್ಟಣ ಪೊಲೀಸ್ ಠಾಣೆ ಉಪನಿರೀಕ್ಷಕಿ ವರ್ಷಾ ಹಾಗೂ ಸಿಬ್ಬಂದಿ ದಾಳಿ ನಡೆಸಿ ಬಂಧಿಸಿ, 280 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೊಲ ಭೇಟಿಯಾಡಿದ್ದ ನಾಲ್ವರ ಸೆರೆ



ಮೊಲ ಭೇಟಿಯಾಡಿದ್ದ ನಾಲ್ವರನ್ನು ಪೊಲೀಸರು ಬಂಧಿಸಿರುವುದು.

ಕೊಳ್ಳೇಗಾಲ, ಜ.22–ಅರಣ್ಯ ಪ್ರದೇಶದಲ್ಲಿ ಮೊಲ ಭೇಟಿಯಾಡಿ ಸಾಗಿಸುತ್ತಿದ್ದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ದೊಡ್ಡಿಂದುವಾಡಿ ಗ್ರಾಮದ ಕೆಂಪರಾಜು (31), ಸುಂದರ (29), ಕನಕಪುರ ತಾಲೂಕಿನ ಕಲ್ಲಿಗೌಡನದೊಡ್ಡಿ ಮುನಿಲಿಂಗೇಗೌಡ (38) ಹಾಗೂ ತಿಗಳರ ಹೊಸರಹಳ್ಳಿ ಹುಲಿಚನ್ನಯ್ಯ (34) ಬಂಧಿತರು.

ಈ ನಾಲ್ವರು ದೊಡ್ಡಿಂದುವಾಡಿ ಹಾಗೂ ಇಕ್ಕಡಹಳ್ಳಿ ಗ್ರಾಮದ ಸಮೀಪದ ಮುಡಲಗುಡ್ಡದ ಅರಣ್ಯ ಪ್ರದೇಶದಲ್ಲಿ ಮೊಲ ಭೇಟೆಯಾಡಿ, ಸಾಗಿಸುತ್ತಿದ್ದರು. ಈ ವೇಳೆ ದಾಳಿ ನಡೆಸಿದ ಗ್ರಾಮಾಂತರ ಠಾಣೆ ಪೊಲೀಸರು ಆರೋಪಿಗಳನ್ನು ಬಂಧಿಸಿ, ನಾಡಬಂದೂಕು, ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಡಿವೈಎಸ್ಪಿ ಧರ್ಮೇಂದ್ರ ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಶಿವಮಾದಯ್ಯ, ಎಎಸ್‌ಐ ತಖೀಉಲ್ಲಾ, ಹೆಡ್ ಕಾನ್ಸ್‌ಟೆಬಲ್‌ಗಳಾದ ರವಿ, ವೆಂಕಟೇಶ, ಪೇದೆಗಳಾದ ಬಿಳಿಗೌಡ, ಶಿವಕುಮಾರ, ಸಿಪಿಐ ಕಚೇರಿ ಸಿಬ್ಬಂದಿ ಹೆಚ್.ಸಿ. ಗುರುಲಿಂಗಶೆಟ್ಟಿ, ಉಮಾಶಂಕರ್, ಸ್ವಾಮಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಉಪ್ಪಾರ ಬೀದಿಯಲ್ಲಿ ಶ್ರೀರಾಮನ ಪಲ್ಲಕ್ಕಿ ಉತ್ಸವ



ಚಾಮರಾಜನಗರದ ಉಪ್ಪಾರ ಬೀದಿಯಲ್ಲಿ ರಾಮ ಭಕ್ತರು ಶ್ರೀರಾಮನ ಪಲ್ಲಕ್ಕಿ ಉತ್ಸವ ನಡೆಸಿದರು.

ಚಾಮರಾಜನಗರ, ಜ.22–ಅಯೋಧ್ಯೆ ರಾಮಮಂದಿರದಲ್ಲಿ ಶ್ರೀಬಾಲರಾಮ ಪ್ರಾಣ ಪ್ರತಿಷ್ಠಾಪನೆಯಾಗಿ ವರ್ಷದ ತುಂಬಿದ ಹಿನ್ನೆಲೆಯಲ್ಲಿ ನಗರದ ಉಪ್ಪಾರ ಬೀದಿಯಲ್ಲಿ ಬುಧವಾರ ರಾಮ ಭಕ್ತರು ಶ್ರೀರಾಮನ ಪಲ್ಲಕ್ಕಿ ಉತ್ಸವವನ್ನು ಅದ್ಧೂರಿಯಾಗಿ ನಡೆಸಿದರು.

ಬೀದಿಯಲ್ಲಿರುವ ಕೊಂಡದ ಮೈದಾನದಲ್ಲಿ ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಮೆರವಣಿಗೆ ಮಾಡಲಾಯಿತು.

ಇದೇ ವೇಳೆ ಪ್ರಸಾದ ವಿತರಿಸಲಾಯಿತು. ರಾಶಿ ಕೃಷ್ಣ, ಪುಟ್ಟಣ್ಣ, ಚನ್ನಿಗ, ಗೋಪಿ, ಕುಮಾರ್, ನಾಗರಾಜು, ಚೇತನ್, ನಾಗೇಂದ್ರ, ರಾಜೇಶ್, ರಮೇಶ್, ಸೋಮಣ್ಣ ಇತರರು ಹಾಜರಿದ್ದರು.

ಚಾ.ನಗರದಲ್ಲಿ ಶ್ರೀರಾಮನಿಗೆ ವಿಶೇಷ ಪೂಜೆ

ಚಾಮರಾಜನಗರ, ಜ.22–ಅಯೋಧ್ಯೆಯ ಶ್ರೀಬಾಲರಾಮ ಪ್ರಾಣ ಪ್ರತಿಷ್ಠಾಪನೆ ಮೊದಲ ವಾರ್ಷಿಕೋತ್ಸವ ಅಂಗವಾಗಿ ರಾಜರತ್ನ ಅಪ್ಪು ಯುವ ಸೇನಾ ಸಮಿತಿ ವತಿಯಿಂದ ನಗರದ ಮಾರಿಗುಡಿ ಮುಂಭಾಗ ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಇದೇ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಅರ್ಚಕ ಕೆ.ಆರ್.ಮಂಜು, ರಾಜರತ್ನ ಅಪ್ಪು ಯುವ ಸೇನಾ ಸಮಿತಿ ಅಧ್ಯಕ್ಷ ಕ್ಯಾಂಟೀನ್ ಮಂಜು, ಮಂಜು ಮಿಲನ, ಕಾರ್ತಿಕ್ ಪವರ್, ವಿಷ್ಣು ಮಣಿ, ವೈಭಚನಾಯಕ್, ಮದನ್, ಚಂದ್ರು, ಕಾರ್ತಿಕ್ ಕಾರ್, ಶಿವಕುಮಾರ್, ಶಿವು, ಮಣಿ, ಹರೀಶ್, ರಮೇಶ್ ಓಮಿನಿ, ಗುರು, ಆಟೋ ಮಹೇಶ್ ಇತರರು ಹಾಜರಿದ್ದರು.



ಶ್ರೀಬಾಲರಾಮ ಪ್ರಾಣ ಪ್ರತಿಷ್ಠಾಪನೆ ವಾರ್ಷಿಕೋತ್ಸವ ಅಂಗವಾಗಿ ಚಾಮರಾಜನಗರದಲ್ಲಿ ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಮಾರಾಟಕ್ಕಿದೆ
20x30 E/F. Ground, 1st & 2nd Floor ಮಯೂರ ಸರ್ಕಲ್, 10ನೇ ಕ್ರಾಸ್, ಹೆಬ್ಬಾಳ್ 2ನೇ ಹಂತ, ಮೈಸೂರು. Amount: 80 Lakhs.
Mob: 9964275051

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು CIPET ಕಾಲೇಜು ಹತ್ತಿರವಿರುವ ಅನಿಮಲ್ ಫೀಡ್ ಕಂಪನಿಗೆ ಲೋಡಿಂಗ್, ಅನ್‌ಲೋಡಿಂಗ್, ಪ್ಯಾಕಿಂಗ್ ಮತ್ತು ಪೌಡರಿಂಗ್ ಕೆಲಸ ಮಾಡಲು 18 ರಿಂದ 45 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ ನಾಲ್ಕು ಶಿಫ್ಟ್‌ನಲ್ಲಿ (4 Shift) ಕೆಲಸ ಮಾಡಬೇಕು. ಸಂಬಳ: 19000 ರಿಂದ ಓಟಿ ಸೇರಿ ಮಾಡಿದರೆ 23,000 ವರೆಗೆ ತೆಗೆದುಕೊಳ್ಳಬಹುದು. ಸಂಪರ್ಕಿಸಿ: ಸಾಯಿಕೃಪ ಎಂಟರ್‌ಪ್ರೈಸಸ್
ರತ್ನಯ್ಯ 9900889325
ಪ್ರಕಾಶ್ 8971460235

WE DO MODULAR KITCHENS AND WARDROBES.
Mob: 9886722751

JKV Life Furniture (Since 1971)
Termite proof, Fire Resistant & Border Proof. 50 / 40% LESSER THEN WOOD. Steel Almirahs, School Furniture. Manufacturers : Wardrobes
9343374669, 9379224669

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಯಲ್ಲಿ EX-Service Gun man, Security Gaurd ಬೇಕಾಗಿದ್ದಾರೆ.
ವೇತನ: Gun man - 35000/- 26 Days
Security Gaurd-19000/- 26 Days
ESI, PF & Bonus ಸೌಲಭ್ಯವಿರುತ್ತದೆ
9880116412
9741300222

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸ್ಥಳ: ಕೆ.ಆರ್.ನಗರ, ಹುಣಸೂರು, ಪಿರಿಯಾಪಟ್ಟಣ
ಸಂಪರ್ಕಿಸಿ 70224 57197

SITE FOR SALE
60x90 Next to post office, Somavarapete, Chamarajanagara
9448187863

ಬೇಕಾಗಿದ್ದಾರೆ
ಪ್ರತಿಷ್ಠಿತ ಸಂಸ್ಥೆಗೆ ನುರಿತ ಶಿಕ್ಷಕರು ಬೇಕಾಗಿದ್ದಾರೆ.
For 10th Standard students. Subject: Social Science, Maths, Science.
6361909141 / 9620507480

Wanted
ಮೈಸೂರಿನ ಹೆಸರಾಂತ MNC ಕಂಪನಿಗಳಿಗೆ 7th, 10th, PUC, ITI, Diploma, Any Degree pass & fail ಆದವರಿಗೆ packing helper, security delivery data entry, admin, HR, Receptionist, Cashier, Billing ಇತ್ಯಾದಿ ಕೆಲಸಗಳಿಗೆ ಯುವಕ-ಯುವತಿಯರು ಬೇಕಾಗಿದ್ದಾರೆ. ESI+PF+OT ಸೇರಿ ಸಂಬಳ 20,000 ರಿಂದ 48000.
9901816285, 991641959

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

WELL DEVELOPED FARM LAND FOR SALE
For sale with an Ext of 3.20 acres includes coconut, Areca Nut and Mango trees with drip irrigation and fencing available for immediate sale with clear titles, 20kms away from the Mysuru city centre of T. Narsipura Road.
Contact: 99162 31821

WANTED TOUR EXECUTIVE
Experience: 2+ years in sales
Education: Any degree
Job location: Mysore
Fluency in English and kannada.
Attractive salary +incentives
SEND CV hr@sbittravels.com

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

V-GUARD — 10 ವರ್ಷಗಳ ವ್ಯಾರಂಟಿ. Solar Water Heater SALES & SERVICE. BAJAJ FINSERV
SUNZONE SOLAR SYSTEM, VM Double Road, Kuvempunagar, Mysuru
9845175443

BCM ಕಂಪನಿಯಲ್ಲಿ
ಕೆಲಸ ಮಾಡಲು ಹೆಲ್ಪರ್ಸ್ ಹಾಗೂ ಫೀಲ್ಡ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸಂಬಳ: 15,000 ರಿಂದ 20,000 ವರೆಗೆ. ದ್ವಿಚಕ್ರ ವಾಹನ ಹೊಂದಿರಬೇಕು.
7676053762

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.
6364748485

ಕಾಮಾಕ್ಯ ಶಕ್ತಿ ಪೀಠ ಪ್ರವಾಸ ಅಸ್ಸಾಂ ಮೇಘಾಲಯ ಸೇರಿ 8 ದಿನಗಳು 11/2/25, ಮಧ್ಯ ಪ್ರದೇಶ ಮಹಾಕಾಳೇಶ್ವರ ಹಾಗೂ ಓಂಕಾಳೇಶ್ವರ 4 ದಿನಗಳು 6/2/25, ಗುಜರಾತ್ ಪ್ರವಾಸ ಸೋಮನಾಥ ನಾಗೇಶ್ವರ ಸೇರಿ 8 ದಿನಗಳು 12/2/25 ಸುವರ್ಣ ಯಾತ್ರಾ
6360146483
9019462508

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

SUN STAR Solar Heatings & Solar Lightings. ISO 9001. 10 Years Warranty.
SUNSTAR SOLAR SYSTEM SALES & SERVICE
9900609977, 9972036774, 9916457118

LAND FOR SALE
1 Acre and 8 Guntas, Yellow Belt, 2 Km from Mysore Airport. Brokers Excuse. Contact:
8123145051 / 9739703070

House keeping / Room Boy
JP Nagar Service Apartment ನಲ್ಲಿ ಕೆಲಸ ಮಾಡಲು Room Boy ಬೇಕಾಗಿದ್ದಾರೆ. Time: 8 am to 6 pm.
Mob: 9686225522

ಕೆಲಸಕ್ಕೆ ಬೇಕಾಗಿದ್ದಾರೆ ಸೆಕ್ಯುರಿಟಿ ಗಾರ್ಡ್ (ಪುರುಷರು):
ಇನ್ಫೋಸಿಸ್ ಹತ್ತಿರ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ದಟ್ಟಗಳ್ಳಿ, ಚಾಮುಂಡಿ ಬೆಟ್ಟ ಹತ್ತಿರ, ಜೆಸಿ ನಗರ, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಬೋಗಾದಿ ಹತ್ತಿರ, ಬೋಗಾದಿ ರಿಂಗ್ ರೋಡ್, ಕುವೆಂಪು ನಗರ, ವಿಜಯನಗರ 1st, ವಿಜಯನಗರ 4th Stage, Jaylakskshmipuram, K.D. Circle, ಒಂಟಿಕೊಪ್ಪಲ್, T K ಲೇಔಟ್.
9606808975

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಮೇಟಗಳ್ಳಿ, ಕೆ.ಆರ್.ಎಸ್., ವರುಣ, ಟೆರಿಷಿಯನ್ ಕಾಲೇಜು ಸುತ್ತಮುತ್ತ ಮತ್ತು ಹೆಬ್ಬಾಳು, ವಿಜಯನಗರ 2ನೇ ಹಂತ ಹಾಗೂ ಮೈಸೂರಿನ ಸುತ್ತ ಮುತ್ತ. ವಿದ್ಯಾರ್ಹತೆ: SSLC pass or fail.
9916772043 | 9538886328

ಕಾಶಿ–ರಾಮೇಶ್ವರ
ಪ್ರವಾಸ : 09N - 10D
ಫೆಬ್ರವರಿ 27, ಮಾರ್ಚ್ 13, ಮೇ 05
ವಿಮಾನ – ಬೆಂಗಳೂರು-ಅಯೋಧ್ಯೆ | ಕಾಶಿ-ಮಧುರೈ
Volvo Bus : ಪ್ರಯಾಗ್‌ರಾಜ್, ಗಯಾ, ರಾಮೇಶ್ವರ, ಮಧುರೈ ತಂಜಾವೂರು, ಶ್ರೀರಂಗಂ, ಕನ್ಯಾಕುಮಾರಿ, ಇತ್ಯಾದಿ
Call - 8660051998

ಉದ್ಯೋಗ ಅವಕಾಶ
ಬಂಪರ್ ದಿನದೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ಜೊತೆಗೆ ಊಟ, ವಸತಿಯೊಂದಿಗೆ ಸಂಬಳ – [illegible] 15200 – [illegible]
7337645977, 7892046990

ಹೊಸ ಮನೆ ಮಾರಾಟಕ್ಕಿದೆ
3 BHK, 30x40 EAST FACE MUDA APPROVED Near St. Joseph School, Yelwala, Mysore
Mob: 8217851695

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

ಬೇಕಾಗಿದ್ದಾರೆ
ಸೆಕ್ಯುರಿಟಿ ಫೀಲ್ಡ್ ಆಫೀಸರ್, ಸೆಕ್ಯೂರಿಟಿ ಸುಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ+ಪಿಎಫ್+ಇಎಸ್‌ಐ ಸೌಲಭ್ಯವಿರುತ್ತದೆ.
ಸ್ಥಳ: ಮೈಸೂರು ಸಿಟಿ, ಹೆಬ್ಬಾಳು ಕೈಗಾರಿಕ ನಗರ, ಸಿದ್ಧಾರ್ಥ ಬಡಾವಣೆ ಮತ್ತು ಹಿನಕಲ್.
7829393555 / 9886200104
9739376832

ಲಕ್ಷ್ಮಿ ವಧುವರರ ಮಾಹಿತಿ ಕೇಂದ್ರ, ಮೈಸೂರು
ನಂ. 1111, ಗಗನಚುಂಬಿ ಜೋಡಿ ರಸ್ತೆ, ಕುವೆಂಪುನಗರ, ಒಕ್ಕಲಿಗ ಎಲ್ಲಾ ಪದವೀಧರರು ಮತ್ತು ಸರ್ಕಾರಿ ಹಾಗೂ ಖಾಸಗಿ ನೌಕರರು ಮತ್ತು ಡಾಕ್ಟರ್ಸ್, ಇಂಜಿನಿಯರ್ ವಿದೇಶದಲ್ಲಿರುವವರು ಸಂಪರ್ಕಿಸಿ:
9986716207
8073332863 | 9845525122

ಬೇಕಾಗಿದ್ದಾರೆ
ವಾಷಿಂಗ್ ಬಾಯ್ಸ್ (Washing Boys), 2 wheeler workshop 2 wheeler ಸರ್ವೀಸ್ ಸೆಂಟರ್, ಗೋಕುಲಂ, Salary: 12000 + Incentives
9380010600

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

Godown For Rent
Four godowns total built up area 70000 sq.ft. available in part or full, easy access for all vehicles, ample parking space, borewell, power and labour quarters available for rent in KRS Main Road, Metagalli, Mysore. Contact:
Mob: 9845018199

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

House For Sale
20/40 EAST Ground 2 BHK + 1st floor Room MUDA with Clear Documents Own Borewell & Vastu Police layout 2nd Stage
9380284276

ಕೆಲಸಕ್ಕೆ ಬೇಕಾಗಿದ್ದಾರೆ
Car Spa ನಲ್ಲಿ Receptionist ಆಗಿ ಕೆಲಸ ಮಾಲು ಹುಡುಗಿಯರು ಬೇಕಾಗಿದ್ದಾರೆ. Computer type ಮಾಡಲು ಬರಬೇಕು. ವಿದ್ಯಾರ್ಹತೆ SSLC and PUC ಆಗಿರಬೇಕು.
ಸ್ಥಳ: ADC Car Spa ತ್ರಿವೇಣಿ ಸರ್ಕಲ್, ಡಾ|| ರಾಜ್‌ಕುಮಾರ್ ರಸ್ತೆ.
Mob: 8861221755

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು. ವಯೋಮಿತಿ: 45 ವರ್ಷದೊಳಗೆ. ಸಂಬಳ: 17,500/– , 8 hours, 26 days. ESI, PF ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819, 9620667819

ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರ, ಮೈಸೂರು
21 ದಿನಗಳ ಕುಡಿತ ಬಿಡಿಸುವ ಮತ್ತು ಯೋಗ ಶಿಬಿರ ಫೆ. 9 ರಿಂದ ಪ್ರಾರಂಭ ಶುಲ್ಕ: 6 + 6 ಸಾವಿರ ರೂ.
9742010101, 9742919191, 8803344999

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸೋಲಾರ್ ವಾಟರ್ ಹೀಟರ್ Solar Water Heater
ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna 9611648636

FOR SALE
1.30x40, 30x50, 40x60 Sites @ Danagalli, Near Defence Apt, Next RT Nagar
30x40 @ 20 lakhs including Registration Offer only few Days.
Upto 75% Bank Loan Available. Limited Sites Only
PRAKRUTHI PROPERTIES 95386 90359, 90359 90359

Required Urgently For a Reputed Hospital
IP/OP Billing: experienced candidates only. Male: 2 Nos. Female: 1 No. Lab Technician: 1 No. M/F. Min. 2 years exp. X-Ray Technician : 1 No. M/F. Nursing Staff: ANM / GNM, ICU / ER / WARD / OT / OPD, Min. 2 years & above exp.
Mob: 8129717802
Contact timings b/w 10 - 6 pm.

ಬ್ರಾಹ್ಮಣ / ಲಿಂಗಾಯತ ವರ ಬೇಕಾಗಿದೆ
ಬ್ರಾಹ್ಮಣ ವಧುವಿನ ವಯಸ್ಸು 20, ಪಿಯುಸಿ ಕಲಿತಿರುವ / ವಯಸ್ಸು 25, ಎಸ್‌ಎಸ್‌–ಎಲ್‌ಸಿ / ವಯಸ್ಸು 29, ಟೀಚರ್ / ವಯಸ್ಸು, 34 ಎಸ್‌ಎಸ್‌ಎಲ್‌ಸಿ / ವಯಸ್ಸು 29, ಪಿಯುಸಿ ಕಲಿತಿರುವ ವಧುವಿಗೆ ವರ ಬೇಕಾಗಿದೆ.
8792731562

ಫ್ಲಾಟ್ ಭೋಗ್ಯಕ್ಕಿದೆ
1,050 ಚದರ ಅಡಿವುಳ್ಳ 2 ಬಿಹೆಚ್‌ಕೆ ವಿಜಯನಗರ 1ನೇ ಹಂತದಲ್ಲಿದೆ. 14 ಲಕ್ಷ ಭೋಗ್ಯಕ್ಕೆ.
8762705887, 9986664688

ಜಮೀನು ಮಾರಾಟಕ್ಕಿದೆ
ಬನ್ನೂರು, ಮಂಡ್ಯ ಹೈವೇ ರೋಡ್ ಬನ್ನೂರು ಸಂತೇಮಾಳ ಇಂದ 2 ಕಿಲೋ ಮೀಟರ್ ಸಮೀಪದಲ್ಲಿ ಜಮೀನು ಮಾರಾಟಕ್ಕಿದೆ. ಆಸಕ್ತಿವುಳ್ಳವರು ಸಂಪರ್ಕಿಸಿ:
Mob: 9740279617

ಶ್ರೀ ಗೌರಿಶಂಕರ ಟ್ರಾವೆಲ್ಸ್ ಮಹಾಕುಂಭ ಯಾತ್ರೆ
ಪ್ರಯಾಗ್‌ರಾಜ್, ಕಾಶಿ, ಅಯೋಧ್ಯೆ, ಗೋರಖ್‌ಪುರ.
Date: 15-2-2025, 20 & 24 (ವಿಮಾನ, ಬಸ್, ರೂಂ, ಊಟ)
Mob: 9620002114

ಬೇಕಾಗಿದ್ದಾರೆ
ಶಿಕ್ಷಕರು, NTT ಶಿಕ್ಷಕರು NTT ಟ್ರೈನಿ ಶಿಕ್ಷಕರು ಬೋಧಕರು Clerk / Ayah
Mob: 9845076497

ಕೆಲಸಕ್ಕೆ ಬೇಕಾಗಿದ್ದಾರೆ
SSLC, PUC any Degree ಓದಿರುವವರು ನಮ್ಮ ಸಂಸ್ಥೆಯಲ್ಲಿ ಹೋಮ್ ನರ್ಸಿಂಗ್ ಕೆಲಸಕ್ಕೆ ವಯಸ್ಸು 18ರಿಂದ 50 ವರ್ಷ ಒಳಗೆ ಸರ್ಕಾರಿ ನೋಂದಾಯಿತ ಸಂಸ್ಥೆ, ಮೈಸೂರು
9071422555 / 9513203333

Dimmis Pvt. Ltd. WANTED
Manager in Marketing and Sales. Salary will be 40,000 + incentive.
Marketing executive. Salary: 25 for month, incentive
Mob: 7348911669

ಮನೆ ಭೋಗ್ಯಕ್ಕಿದೆ
ಮೈಸೂರಿನ ಪ್ರಶಾಂತ್‌ನಗರ 1ನೇ ಘಟ್ಟ, ದಡದಹಳ್ಳಿಯಲ್ಲಿ 3 ಬಿಹೆಚ್‌ಕೆ ಹೊಸ ಮನೆ ಭೋಗ್ಯಕ್ಕಿದೆ. ರೂ. 14,00,000 Lease.
8050257887 | 8762705887

ಕಳೆದಿದೆ
ಬಿ.ಪಿ. ಚಂದ್ರಮ್ಮ ಎನ್ನುವವರು ತಮ್ಮ ಸೈಟ್ ನಂ. 1083, ಸಿ&ಡಿ ಬ್ಲಾಕ್, ಕುವೆಂಪುನಗರದಲ್ಲಿರುವ ಮೈಸೂರಿನ ಸೈಟ್ ಖಾತಾ ಕಳೆದುಕೊಂಡಿದ್ದು, ಪೊಲೀಸ್ e-lost complaint ನೀಡಿದ್ದಾರೆ. ಖಾತಾ details: No. 21025909, date: 26-04-2021, Lost report No. 1435970 / 2025. ಖಾತಾ ದೊರಕಿದಲ್ಲಿ ಸಂಪರ್ಕಿಸಿ:
9741410430

Site for Sale POLICE LAYOUT
40x60 NORTH Facing, 40 feet Road, PL 2nd Stage, MUDA Price - 1.18 Cr
9945876517

HOUSE FOR SALE
3 BHK 20x30 Duplex house in Dattagalli, Mysuru. Price: Rs. 80 Lakhs, negotiable.
Call: 8147706492

ಬೇಕಾಗಿದ್ದಾರೆ
ಪ್ರತಿಷ್ಠಿತ ಹೋಟೆಲ್‌ಗೆ ಎಲೆಕ್ಟ್ರೀಷಿಯನ್ ಕಮ್ ಪ್ಲಂಬಿಂಗ್ ಕೆಲಸ ಸಂಬಳ: 20,000 - 25000 (ಅನುಭವವುಳ್ಳ ಅಭ್ಯರ್ಥಿಗಳು ಮಾತ್ರ)
ಹೋಟೆಲ್ ಪ್ಯಾಲೇಸ್ ಪ್ಲಾಜಾ 2716 ಶ್ರೀ ಹರ್ಷ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು-570 001
9886166044 / 9886577795

Share Market
ಟ್ರೇಡಿಂಗ್ ಮಾಡುವುದನ್ನು ಹೇಳಿಕೊಡಲಾಗುವುದು. ವಾರಕ್ಕೆ 4000 ರಿಂದ 5000 ಸಾವಿರ ರೂಪಾಯಿ ಸಂಪಾದಿಸಬಹುದು. ಸಂಪರ್ಕಿಸಿ:
Mob: 8660734351

ಬೇಕಾಗಿದ್ದಾರೆ
ಭಾಷಾ ಶಿಕ್ಷಕರು, ವಿಷಯ ಶಿಕ್ಷಕರು ಮತ್ತು ಆಯಾಗಳು ಬೇಕಾಗಿದ್ದಾರೆ.
7676522224
8495983613

WANTED
Warden required for reputed college - Male / Female
9483092732, 9036758144

50X80 HOUSE FOR SALE
50x80 North facing (MUDA allotted) old house for sale at Ramakrishnanagar 'I' Block, near Canara Bank park 40 feet Road. Contact: Mysore Estates Vishwanath Gowda
9590911111

ಮೈಸೂರಿನಲ್ಲಿ ಉದ್ಯೋಗ
(ಕನ್ಸಲ್‌ಟೆನ್ಸಿ ಅಲ್ಲ) A.W.G. ಕಂಪನಿಯಲ್ಲಿ ಖಾಲಿಯಿರುವ 252 ಪರ್ಮನೆಂಟ್ ಹುದ್ದೆಗಳಿಗೆ ಆಸಕ್ತಿಯುಳ್ಳ ಯುವಕ ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, Dip, ITI, Any Degree. ವಯೋಮಿತಿ: 18 ರಿಂದ 32 ವರ್ಷಗಳು. ತಿಂಗಳಿಗೆ: 22,000 – 27500. (ಉಚಿತ ಊಟ + ವಸತಿ + Promotions). ಕೂಡಲೇ ಕರೆ ಮಾಡಿ.
ಸಂಜನಾ, 7090212014

ಬೇಕಾಗಿದ್ದಾರೆ
1) ಅಡುಗೆ ಭಟ್ಟರು ನಾನ್‌ವೆಜ್
2) ಸಪ್ಲೈಯರ್
ಅಂಗಾಂಬುಧಿಪಾಳ್ಯ R.T. ನಗರ, ಮೈಸೂರು
9945616200
9945616004

SITE FOR SALE
30x40 East face KHB allotted site, Kenchalagudu Area, Mysore-H.D. Kote Road. Contact:
9741607851
9448601908

WANTED
Furnishing Shop Accounts ಕೆಲಸಕ್ಕೆ 1 Year Experience ಇರುವವರು ಬೇಕಾಗಿದ್ದಾರೆ
Salary: 12K to 15K
Time: 10 am to 8.30 pm
Near Ashoka Road, Mysore.
Mob: 9916514950

Ashwa Bajaj Kuvempunagar, Mysore
WANTED
* Sales Executive - 2
* Technician - 3
* Washing Boy - 2
* Helper - 2
8217738473 / 9945646601

SPONSORS REQ.
Vedic Math books full kit to schools library sponsorship req. with possible support or references will help us to reach more in-need schools library, more students to make easy math concepts. Please feel free to discuss in detail contact:
7892124313

SITE FOR SALE
30x40 (Bank loan available) Sriramprua Ring Road, Mysore
8050345574

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರ್‌ಗಳು ಬೇಕಾಗಿದ್ದಾರೆ. ESI & PF, ವಾರದ ರಜೆ ಇರುತ್ತದೆ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
8105249880 / 7795285485

ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು 18 ರಿಂದ 49. Day / Night / 24 hrs ಸಂಪರ್ಕಿಸಿ:
Mob: 8123252840

ಮನೆ ಬಾಡಿಗೆ / ಭೋಗ್ಯಕ್ಕೆ ಇದೆ
ಶ್ರೀರಾಂಪುರ ರಿಂಗ್ ರಸ್ತೆ ಪಕ್ಕ ಯುನಿವರ್ಸಿಟಿ ಲೇಔಟ್ ಎದುರು ಗಾಯತ್ರಿ ಬಡಾವಣೆಯಲ್ಲಿ 1ನೇ ಮಹಡಿ 2 ಬಿಹೆಚ್‌ಕೆ, 2ನೇ ಮಹಡಿ 1 ಬಿಹೆಚ್‌ಕೆ ಮನೆ ಲಭ್ಯವಿದೆ.
9481041871

ಕೇರಳ ಶ್ರೀ ಆದಿಶಕ್ತಿ ಜ್ಯೋತಿಷ್ಯರು
Famous Astrologer ಪಂ. ಶಿವಪ್ರಸಾದ್ ತಂತ್ರಿ
Mob: 9686525894
ಪ್ರೀತಿಯಲ್ಲಿ ನಂಬಿ ಮೋಸ, ಹಣಕಾಸಿ, ಶತ್ರು ಕಾಟ, ಸ್ತ್ರೀಪುರುಷ ಪ್ರೇಮ ಗುಪ್ತ ಸಮಸ್ಯೆ ಗಂಡ-ಹೆಂಡತಿ ಕಿರಿಕಿರಿ ಸಾಲಬಾಧೆ. ಅನಾರೋಗ್ಯ ಮದುವೆ, ಸಂತಾನ, ವ್ಯಾಪಾರ, ವಿಸೂ: ಅಘೋರಿ ಕೊಲ್ಕತ್ತಾ, ಕೇರಳ, ಕೊಳ್ಳೇಗಾಲ ಪೂಜಾ ಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ನಿಮ್ಮ ಯಾವುದೇ ಗುಪ್ತ ಕಠಿಣ ಸಮಸ್ಯೆಗಳಿಗೆ 500 ವರ್ಷಗಳ ತಾಳೆಗರಿ ವಿದ್ಯೆಯಿಂದ 100% ಪರಿಹಾರ. ಸೂಚನೆ ಸರಿಯಾದ ವಿಳಾಸ ತಿಳಿದುಕೊಂಡು ಬನ್ನಿ: 6712, ಬ್ಯಾಂಕ್ ಆಫ್ ಬರೋಡ, ಅಕ್ಷಯ ಭಂಡಾರ್ ಹತ್ತಿರ, ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು.

ನೇರ ನೇಮಕಾತಿ
ಯುವತಿಯರು Age (18-24) 10th, PUC ಯಾದ Management Trainee ಗಳಾಗಿ Earn (10500 to 18,500) PM. ಪರಸ್ಥಳದವರಿಗೆ ಮಾತ್ರ ವಸತಿ, ಯಾವುದೇ ಶುಲ್ಕ ರಹಿತ, ಖುದ್ದಾಗಿ ಸಂಪರ್ಕಿಸಿ. Time (11 am to 3 pm.)
ಕಾವ್ಯ 9342827788

FOR SALE
North East 11B 30x40 site or commercial roadside 11B 4K sq.ft. site or West facing 11B 1200 sq.ft. Site in Elvala, EWS two floor house in Lakshmikantha Nagar. Direct buyer contact:
7892124313

ಬೇಕಾಗಿದ್ದಾರೆ
ವೈನ್‌ಸ್ಟೋರ್‌ನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಯೋಮಿತಿ 25 ರಿಂದ 30. ಮೈಸೂರಿನವರಿಗೆ ಆದ್ಯತೆ.
9448351930 | 9448563900

Wanted
Urgently for Admin LLP Company.
1) Accountant
2) Jr. Accountant / Office Assistant
3) Housekeeping Staff
4) Cava / Design / Sr. Architect - 2
Age: Below 35 years
5) HR cum Marketing Executive.
7022354141

ಸೈಟು ಮಾರಾಟಕ್ಕಿದೆ
ಫಾರಂ ನಂ. 3 ಖಾತಾ ಹೊಂದಿರುವ ನಿವೇಶನ ನಂ. 9, ದಿಕ್ಕು: ದಕ್ಷಿಣ, ಅಳತೆ: 36x54 (KBL ಬಡಾವಣೆಗೆ ಹೊಂದಿಕೊಂಡಂತಿದೆ) ಶ್ರೀ ದೇವೇಗೌಡ ಸರ್ಕಲ್ ಹತ್ತಿರ, ಮೈಸೂರು–ಬನ್ನೂರು ರಸ್ತೆ, ಮೈಸೂರು
9113991509 | 8123776343

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ನಂ.ಗೂಡಲ್ಲಿ ಮೈಕ್ರೋ ಫೈನಾನ್ಸ್ ವಿರುದ್ಧ ರೈತರ ಪ್ರತಿಭಟನೆ

ಜ.29, ಕೇಂದ್ರ ಸರ್ಕಾರದ ವಿರುದ್ಧ ಬೆಂಗಳೂರಲ್ಲಿ ಪ್ರತಿಭಟನೆ

ನಂಜನಗೂಡು, ಜ.22– ಅಧಿಕ ಬಡ್ಡಿದರ ವಿಧಿಸಿ ರೈತರನ್ನು ಪೋಷಿಸುತ್ತಿರುವ ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಸರ್ಕಾರ ಕಠಿಣ ಕ್ರಮವಹಿಸಬೇಕು. ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳನ್ನು ನಿಯಂತ್ರಿಸಲು ಕಾಯಿದೆ ರೂಪಿಸಬೇಕು ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

ನಗರದ ತಹಸೀಲ್ದಾರ್ ಕಚೇರಿ ಮುಂಭಾಗ ಬುಧವಾರ ನಡೆದ ಪ್ರತಿಭಟನೆ ವೇಳೆ ಅವರು ಮಾತನಾಡಿದರು. ರಾಜ್ಯಾದ್ಯಂತ ಮೈಕ್ರೋ ಫೈನಾನ್ಸ್ ಕಂಪನಿಗಳು ರೈತರ ಆಧಾರ್ ಕಾರ್ಡ್, ಆಸ್ತಿ ದಾಖಲೆಗಳನ್ನು ಪಡೆದುಕೊಂಡು ಅಧಿಕ ಬಡ್ಡಿದರ ವಿಧಿಸಿ, ರೌಡಿಗಳ ಮೂಲಕ ರೈತರನ್ನು ಬೆದರಿಸಿ ಮನೆಯಿಂದ ಹೊರ ಹಾಕುವ ನೀಚ ಕೃತ್ಯ ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರ ನಬಾರ್ಡ್ ಸಾಲ ನೀಡುವ ಮೊತ್ತವನ್ನು ಕಡಿತಗೊಳಿಸಿದ್ದರಿಂದ ರೈತರು ತೊಂದರೆಗೆ ಸಿಲುಕಿದ್ದಾರೆ. ರಾಜ್ಯದ ಎಂಡಿಸಿಸಿ ಬ್ಯಾಂಕುಗಳು ಮುಚ್ಚುವ ಸ್ಥಿತಿ ತಲುಪಿವೆ. ಕೃಷಿ ಪತ್ತಿನ ಸಹಕಾರ ಸಂಘಗಳು ತೊಂದರೆಗೆ ಸಿಲುಕುತ್ತಿವೆ. ಶೂನ್ಯ ಬಡ್ಡಿ ದರಕ್ಕೆ ಬೆಳೆ ಸಾಲ ಪಡೆಯುತ್ತಿದ್ದ ರೈತರು ಖಾಸಗಿ ಫೈನಾನ್ಸ್‌ಗಳಿಂದ ಸಾಲ ಪಡೆದು ಮನೆ–ಮಠ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ನಬಾರ್ಡ್ ಸಾಲ ಕಡಿತಗೊಳಿಸಿರುವ ಕೇಂದ್ರ ಸರ್ಕಾರದ ವಿರುದ್ಧ ರೈತ ಸಂಘ ಜ.29ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.



ನಂಜನಗೂಡಿನ ತಹಸೀಲ್ದಾರ್ ಕಚೇರಿ ಮುಂಭಾಗ ಬುಧವಾರ ತಾಲೂಕು ರೈತ ಸಂಘದ ಕಾರ್ಯಕರ್ತರು ಮೈಕ್ರೋ ಫೈನಾನ್ಸ್ ವಿರುದ್ಧ ಪ್ರತಿಭಟನೆ ನಡೆಸಿದರು.

ಸಹಕಾರ ಸಚಿವ ಅಮಿತ್ ಶಾ ಸಹಕಾರ ಸಂಘಗಳನ್ನು ನಾಶಪಡಿಸಿ ಖಾಸಗಿ ಫೈನಾನ್ಸ್‌ಗಳಿಗೆ ಅನುಕೂಲ ಮಾಡಕೊಡುತ್ತಿದ್ದಾರೆ. ಸಹಕಾರ ಸಂಘಗಳು ನಾಶವಾದರೆ ಹೈನುಗಾರಿಕೆ, ಕುರಿ, ಕೋಳಿ ಸಾಕಣೆ ಮಾಡುವವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡುತ್ತಿದ್ದ ಸಬ್ಸಿಡಿ ತಪ್ಪುತ್ತದೆ. ರೈತರು ಖಾಸಗಿ ಫೈನಾನ್ಸ್ ಕಂಪನಿಗಳ ಕಪಿಮುಷ್ಠಿಗೆ ಸಿಲುಕುತ್ತಿದ್ದಾರೆ. ಮಹಿಳೆಯರು ಸಾಲ ಕಟ್ಟಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರಾಜ್ಯ ಸರ್ಕಾರ ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಕಾಯಿದೆ ರೂಪಿಸದಿದ್ದರೆ ರೈತ ಸಂಘ ರಾಜ್ಯಾದ್ಯಂತ ಹೋರಾಟ ರೂಪಿಸಲಿದೆ ಎಂದು ಎಚ್ಚರಿಕೆ ನಿಡಿದರು.

ಪ್ರತಿಭಟನೆಯಲ್ಲಿ ಹೊಸಕೋಟೆ ಬಸವರಾಜು, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಮಂಕರಯ್ಯ, ಅಂಕಪ್ಪ, ಮಹೇಶ್ ಪ್ರಭು, ನೇತ್ರಾವತಿ, ಕೌಲಂದೆ ಪರಮೇಶ್, ಪ್ರೇಮರಾಜ್, ಹುಣಸನಾಳು ಮಹೇಶ್, ಪ್ರತಾಪ್ ಉಪಸ್ಥಿತರಿದ್ದರು.

ಮೂರನೇ ದಿನಕ್ಕೆ ಕಾಲಿಟ್ಟ ಕೊರಚ ಸಮುದಾಯದ ಪ್ರತಿಭಟನೆ

ಸೂರಿಗಾಗಿ ಆಗ್ರಹಿಸಿ ಅಂಬೇಡ್ಕರ್ ಪ್ರತಿಮೆ ಮುಂದೆ ಆಕ್ರೋಶ

ತಿ.ನರಸೀಪುರ, ಜ.22– ಶಾಶ್ವತ ನೆಲೆ ಮತ್ತು ಸೂರಿಗಾಗಿ ಪಟ್ಟಣದ ತಾಲೂಕು ಆಡಳಿತ ಸೌಧದ ಮುಂಭಾಗ ದಸಂಸ ನೇತೃತ್ವದಲ್ಲಿ ಪರಿಶಿಷ್ಟ ಜಾತಿ ಅಲೆಮಾರಿ ಕೊರಚ ಸಮುದಾಯದ ಕುಟುಂಬಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನೆ ಬುಧವಾರ ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಇಂದು ಅಂಬೇಡ್ಕರ್ ಪ್ರತಿಮೆ ಮುಂಭಾಗ ಪ್ರತಿಭಟಿಸಿ ಬೇಡಿಕೆ ಈಡೇರಿಸಲು ಮೀನಾಮೇಷ ಎಣಿಸುತ್ತಿರುವ ಸರ್ಕಾರ, ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೊದಲ ದಿನ ಶಾಂತಿಯುತ ಪ್ರತಿಭಟನೆ ಕುಳಿತು, ಎರಡನೆಯ ದಿನ ಕೋಳಿ, ಬೆಕ್ಕುಗಳೊಂದಿಗೆ ತಮಟೆ ಚಳುವಳಿ ನಡೆಸಿದ ಕೊರಚ ಸಮುದಾಯದ ಕುಟುಂಬಗಳು ನಿವೇಶನ ಮಂಜೂರು ಮಾಡಲು ಸ್ಥಳಾವಕಾಶ ತೋರಿಸದೆ 10 ದಿನ ಕಾಲವಕಾಶ ಕೇಳಿದ ತಹಸೀಲ್ದಾರ್ ಅವರ ಮನವಿಯನ್ನು ತಿರಸ್ಕರಿಸಿ, ಜಿಲ್ಲಾಧಿಕಾರಿಗಳ ಭೇಟಿಗೆ ಪಟ್ಟು ಹಿಡಿದು 3ನೇ ದಿನವಾದ ಇಂದು ತಾಲೂಕು ಆಡಳಿತ ಸೌಧ ಎದುರಿಗಿನ ಅಂಬೇಡ್ಕರ್ ಪ್ರತಿಮೆ ಪಾದದ ಕೆಳಗೆ ಮಕ್ಕಳನ್ನು ಕೂರಿಸಿ, ಪ್ರತಿಭಟನಾ ಧರಣಿಯನ್ನು ಮುಂದುವರೆಸಿದ್ದಾರೆ.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಅಂಬೇಡ್ಕರ್ ಮತ್ತು ಸಂವಿಧಾನದ ಪ್ರಸ್ತಾವನೆ ಮಾಡುವ ಈಗಿನ ಸರ್ಕಾರಕ್ಕೆ ನಿವೇಶನ ವಂಚಿತ ನಿರಾಶ್ರಿತ ಕೊರಚ ಕುಟುಂಬಗಳು ಕಾಣುತ್ತಿಲ್ಲ. ಬಡವರ ನೋವಿಗೆ ಸ್ಪಂದಿಸಬೇಕೆಂಬ ಕನಿಷ್ಠ ಕಾಳಜಿ ಜಿಲ್ಲಾ ಹಾಗೂ ತಾಲೂಕು ಆಡಳಿತಕ್ಕೆ ಇಲ್ಲವಾಗಿದೆ. ಸರ್ಕಾರಿ ಕೆರೆ,ಕಟ್ಟೆ ಹಾಗೂ ಗೋಮಾಳವನ್ನು ರಕ್ಷಿಸಲು ಸುಪ್ರೀಂ ಕೋರ್ಟ್‌ನ ನಿರ್ದೇಶನವಿದ್ದರೂ ಅವುಗಳನ್ನು ರಕ್ಷಣೆ ಮಾಡುವಲ್ಲಿ ತಾಲೂಕು ಆಡಳಿತ ವಿಫಲವಾಗಿದೆ ಎಂದರು.



ತಿ.ನರಸೀಪುರ ತಾಲೂಕು ಕಚೇರಿ ಆವರಣದಲ್ಲಿ ನಿವೇಶನಕ್ಕೆ ಆಗ್ರಹಿಸಿ ಕೊರಚ ಸಮುದಾಯದ ಕುಟುಂಬಗಳು ನಡೆಸುತ್ತಿರುವ ಪ್ರತಿಭಟನಾ ಧರಣಿ ಬುಧವಾರ ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಪುರಸಭಾ ವ್ಯಾಪ್ತಿಯ ಪಟ್ಟಣದ ಲಿಂಕ್ ರಸ್ತೆಯ ಮಸೀದಿ ಪಕ್ಕದ, ಬೈರಾಪುರ ಸರ್ವೆ ನಂ.48, ಸುಮಾರು 40 ಗುಂಟೆ, ತುರುಕನ ಕಟ್ಟೆಯನ್ನು ಮುಖ್ಯಾಧಿಕಾರಿಗಳು ಅಕ್ರಮವಾಗಿ ಖಾಸಗಿ ವ್ಯಕ್ತಿಯ ಹೆಸರಿಗೆ ಖಾತೆ ಮಾಡಲು ಮುಂದಾಗುತ್ತಿದ್ದಾರೆ. ಆಲಗೂಡು ಸರ್ವೆ ನಂ.462, ರ 28 ಎಕರೆ ಗೋಮಾಳದಲ್ಲಿ ರಿಯಲ್ ಎಸ್ಟೇಟ್ ಭೂ ಮಾಫಿಯಾಗಳು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ತಂತಿಬೇಲಿ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಖಾತೆ ಮಾಡಿಕೊಡಲು ಪುರಸಭಾ ಮುಖ್ಯಾಧಿಕಾರಿಗಳು ಪುರಸಭೆಯಲ್ಲಿ ವಿಶೇಷ ಸಭೆ ಕರೆದು ವಿಶೇಷ ಅನುಮೋದನೆ ಕೂಡ ಪಡೆದುಕೊಂಡಿದ್ದಾರೆ. ಬೈರಾಪುರ ಸರ್ವೆ ನಂ.104 ರ ಜೇಡಿಕಟ್ಟೆ 2.26 ಎಕರೆ ಪ್ರದೇಶದಲ್ಲಿ ಕೆಲವು ಭೂ ಮಾಫಿಯಾಗಳು ಅಕ್ರಮವಾಗಿ ನಿವೇಶನಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ರಕ್ಷಣೆ ಮಾಡಲು ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ತಾಲೂಕು ಸಂಚಾಲಕರಾದ ಕುಕ್ಕೂರು ರಾಜು, ಯಾಚೇನಹಳ್ಳಿ ಸೋಮಶೇಖರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಕೊಡುವ ಸಂಘದ ಅಧ್ಯಕ್ಷ ಕೊಡಗಹಳ್ಳಿ ರವಿಕುಮಾರ್, ಮುಖಂಡರಾದ ಕಿರಗಸೂರು ರಜನಿ, ನಾಗರಾಜ್‌ಮೂರ್ತಿ, ಬನ್ನಹಳ್ಳಿ ಹುಂಡಿ ಉಮೇಶ್, ಸುಜ್ಜಲೂರು ಶಿವಯ್ಯ, ಕೃಷ್ಣ, ಕುಕ್ಕೂರು ಪ್ರಭು, ಕೊರಚ ಕಾಲೋನಿ ರಾಜು, ವೆಂಕಟೇಶ್, ಮಾರಪ್ಪ, ಮಂಜು, ಗಂಗಮ್ಮ ಹಾಗೂ ಇತರರು ಇದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಪತ್ನಿ ಹಂತಕನಿಗೆ ಜೀವಾವಧಿ ಶಿಕ್ಷೆ

ಮಲ್ಕುಂಡಿ, ಜ.22– ಹಣಕಾಸು ವಿಚಾರಕ್ಕೆ ಜಗಳ ಮಾಡಿ, ಪತ್ನಿಯನ್ನು ಹತ್ಯೆಗೈದ ಪತಿರಾಯನಿಗೆ ಜೀವಾವಧಿ ಶಿಕ್ಷೆ ವಿಧಿಸಿ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ್ ಸೋಮಕ್ಕಳವರ್ ತೀರ್ಪು ನೀಡಿದ್ದಾರೆ.

ಹುಲ್ಲಹಳ್ಳಿ ಠಾಣಾ ವ್ಯಾಪ್ತಿಯ ಶ್ರೀರಾಂಪುರದ ವೆಂಕಟೇಶ್ ಎಂಬಾತನೇ ತನ್ನ ಪತ್ನಿ ದೇವಿರಮ್ಮ ಅವರನ್ನು ಹತ್ಯೆಗೈದ ಆರೋಪದಡಿ ಶಿಕ್ಷೆಗೊಳಗಾದವನು.

ವಿವರ: ದೇವಿರಮ್ಮನನ್ನು ವೆಂಕಟೇಶ್ 25 ವರ್ಷದ ಹಿಂದೆ ಮದುವೆಯಾಗಿದ್ದ. ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕಳೆದ 17 ವರ್ಷದ ಹಿಂದೆ ಪತ್ನಿ ಶೀಲ ಶಂಕಿಸಿ, ಆಕೆಯನ್ನು ವೆಂಕಟೇಶ ತವರು ಮನೆಗೆ ಕಳುಹಿಸಿದ್ದ. ಆಕೆ ತನ್ನ ಮಕ್ಕಳೊಂದಿಗೆ ಶ್ರೀರಾಂಪುರದಲ್ಲಿ ವಾಸವಿದ್ದಳು. 2022ರ ಆರಂಭದಲ್ಲಿ ವೆಂಕಟೇಶ್ ತನ್ನ ಹೆಂಡತಿ ಮನೆಗೆ ತೆರಳಿ ಅವಳೊಂದಿಗೆ ವಾಸಿಸ ತೊಡಗಿದ್ದ. ಇವರಿಬ್ಬರ ನಡುವೆ ಪದೇ ಪದೆ ಹಣಕಾಸು ವಿಚಾರಕ್ಕೆ ಜಗಳ ನಡೆಯುತ್ತಿತ್ತು ಎನ್ನಲಾಗಿದ್ದು, 2022ರ ಮೇ 6ರಂದು ರಾತ್ರಿ 10.30ರ ವೇಳೆ ದಂಪತಿ ನಡುವೆ ಜಗಳ ತಾರಕಕ್ಕೇರಿದ್ದು, ವೆಂಕಟೇಶ್ ತನ್ನ ಪತ್ನಿ ದೇವಿರಮ್ಮಳ ಕುತ್ತಿಗೆಯನ್ನು ಸೀರೆಯಿಂದ ಬಿಗಿದು, ಉಸಿರು ಕಟ್ಟಿಸಿ ಕೊಲೆ ಮಾಡಿದ್ದಾನೆ.

ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ ತಳವಾರ್ ಅವರು ತನಿಖೆ ನಡೆಸಿ, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರು ವೆಂಕಟೇಶ್‌ನಿಗೆ ಜೀವಾವಧಿ ಶಿಕ್ಷೆ ಮತ್ತು 5 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಬಿ.ಈ.ಯೋಗೇಶ್ವರ್ ವಾದ ಮಂಡಿಸಿದ್ದರು.

ಫೆ.2, ಗಾವಡಗೆರೆ ರೈತ ಸೇವಾ ಸಹಕಾರ ಸಂಘದ ಚುನಾವಣೆ

ಹುಣಸೂರು, ಜ.22– ತಾಲೂಕಿನ ಗಾವಡಗೆರೆ ರೈತ ಸೇವಾ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ ಫೆ.2ರಂದು ನಿಗದಿಯಾಗಿದೆ.

ಸಂಘದ ಕಚೇರಿಯಲ್ಲಿ ಜ.25 ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದ್ದು, ಚುನಾವಣೆ ಪ್ರಕ್ರಿಯೆ ಸಂಬಂಧ ಈಗಾಗಲೇ ಅರ್ಹ ಸದಸ್ಯರಿಗೆ ಅಂಚೆ ಮೂಲಕ ಚುನಾವಣಾ ವೇಳಾಪಟ್ಟಿಯನ್ನು ರವಾನಿಸಲಾಗಿದೆ. ಒಂದು ವೇಳೆ ಚುನಾವಣಾ ವೇಳಾಪಟ್ಟಿ ನಿಗದಿತ ಅವಧಿಯೊಳಗೆ ತಮಗೆ ತಲುಪದಿದ್ದಲ್ಲಿ ಇದನ್ನೇ ಚುನಾವಣಾ ವೇಳಾಪಟ್ಟಿಯೆಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಆನಂದ್ ಅಥವಾ ರಿಟರ್ನಿಂಗ್ ಆಫೀಸರ್ ರಾಜಣ್ಣ ಅವರನ್ನು ಸಂಪರ್ಕಿಸಬಹುದಾಗಿದೆ.

ಕುಸ್ತಿ ಪಂದ್ಯಾವಳಿ ಪೋಸ್ಟರ್ ಬಿಡುಗಡೆ



ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಅಂಗವಾಗಿ ನಡೆಯುವ ಕುಸ್ತಿ ಪಂದ್ಯಾವಳಿಯ ಪೋಸ್ಟರ್‌ಗಳನ್ನು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಪ್ರೊ. ಬೊಕ್ಕಳ್ಳಿ ಸುಬ್ಬಪ್ಪ, ಪ್ರೊ. ಹೊಸಕೋಟೆ ದೇವಣ್ಣ, ಹಿರಿಯ ಪೈಲ್ವಾನ್ ಅಮೃತ್ ಪುರೋಹಿತ್, ರವಿ ಬನ್ನೂರ್, ಕೆಂಪೇಗೌಡ, ಪೈಲ್ವಾನ್ ಚೋಕ್ಕಮೂರ್ತಿ, ಹೊಸಳ್ಳಿ ಪೈಲ್ವಾನ್ ಶಿವು, ನಂಜನಗೂಡು ಪೈಲ್ವಾನ್ ಸಿದ್ದರಾಜು, ತಿರಂಬಳ್ಳಿ ರವಿ, ಕುಸ್ತಿ ಸಂಚಾಲಕ ಮಲ್ಲುಸ್ವಾಮಿ, ಎನ್ ಗಂಜಾಂ ಸೇರಿದಂತೆ ಮುಂತಾದ ಕುಸ್ತಿ ಅಕಾಡೆಮಿಯ ಸಂಚಾಲಕರು, ಪೈಲ್ವಾನರು ಹಾಜರಿದ್ದರು.

ಜಮೀನಿನಲ್ಲಿ ಬೆಳೆದಿದ್ದ ಕಲ್ಲಂಗಡಿ ಹಣ್ಣನ್ನು ಬಿಡದ ಕಳ್ಳರು

ರಾತ್ರೋರಾತ್ರಿ ಗೂಡ್ಸ್ ವಾಹನದಲ್ಲಿ ಕಳ್ಳತನ ಮಾಡಿಕೊಂಡು ಪರಾರಿ

ಬೈಲಕೊಪ್ಪ, ಜ.22– ಮನೆ ಕಳ್ಳತನ, ಸರಗಳ್ಳತನ, ದರೋಡೆ, ವಂಚನೆಯಂತಹ ಪ್ರಕರಣಗಳಾಯಿತು. ಈಗ ರೈತ ಕಷ್ಟಪಟ್ಟು ಬೆಳೆದಿದ್ದ ಬೆಳೆಯನ್ನು ರಾತ್ರೋರಾತ್ರಿ ಕಳ್ಳತನ ಮಾಡಿಕೊಂಡು ಹೋಗುವ ಕಾಲ ಬಂದಿದೆ.

ಪಿರಿಯಾಪಟ್ಟಣ ತಾಲೂಕು ಆಲನಹಳ್ಳಿ ಗ್ರಾಮದ ನಿವಾಸಿ ನಂಜುಂಡ ಅವರು ಹಗಲು–ರಾತ್ರಿ ಕಷ್ಟಪಟ್ಟು ಬೆಳೆದಿದ್ದ ಕಲ್ಲಂಗಡಿ ಹಣ್ಣನ್ನು ಕಳ್ಳರು ರಾತ್ರೋರಾತ್ರಿ ಕದ್ದುಕೊಂಡು ಪರಾರಿಯಾಗಿದ್ದು ಬೈಲಕೊಪ್ಪಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ನಂಜುಂಡ ಅವರು ತಮ್ಮ ಒಂದು ಎಕರೆ ಜಮೀನಿನಲ್ಲಿ ಕಲ್ಲಂಗಡಿ ಹಣ್ಣನ್ನು ಬೆಳೆದಿದ್ದು, ಪ್ರತಿದಿನ ಬೆಳಗ್ಗೆಯಿಂದ ಸಂಜೆವರೆಗೂ ಜಮೀನಿನಲ್ಲಿ ಕೆಲಸ ಮಾಡಿಕೊಂಡು, ಕಲ್ಲಂಗಡಿ ಬೆಳೆಯನ್ನು ಕಾಯುತ್ತಿದ್ದರಂತೆ. ನಿನ್ನೆ ಸಂಜೆ 6 ಗಂಟೆವರೆಗೂ ಜಮೀನಿನಲ್ಲಿದ್ದು, ಎಂದಿನಂತೆ ಮನೆಗೆ ಹಿಂತಿರುಗಿದ್ದಾರೆ.

ಬುಧವಾರ ಬೆಳಗ್ಗೆ 8ಗಂಟೆಗೆ ಜಮೀನಿಗೆ ಹೋದಾಗ ಅವರಿಗೆ ಅಚ್ಚರಿ ಕಾದಿತ್ತು, ಕೊಯಿಲಿಗೆ ಬಂದಿದ್ದ ಕಲ್ಲಂಗಡಿ ಹಣ್ಣು ಒಂದೂ ಇರಲಿಲ್ಲ. ತಾವು ಬೆಳೆದಿದ್ದ ಕಲ್ಲಂಗಡಿ ಹಣ್ಣುಗಳನ್ನು ಸಾರಾಸಾಗಟಾಗಿ ಕೊಯ್ದು ತುಂಬಿಕೊಂಡು ಪರಾರಿಯಾಗಿರುವುದನ್ನು ಕಂಡು ಗಾಬರಿಯಾಗಿ ತಲೆ ಮೇಲೆ ಕೈ ಹೊತ್ತು ಬಾಯಿ ಬಡಿಯಲಾರಂಭಿಸಿದರು. ಗೋಳಾಟ ಕೇಳಿ ಸ್ಥಳಕ್ಕೆ ಬಂದ ಅಕ್ಕ–ಪಕ್ಕದ ಜಮೀನಿನವರು ಹೀಗೂ ಕಳ್ಳತನ ಮಾಡ್ತಾರಾ ಅಂತ ಮಾತಾಡಿಕೊಳ್ಳುತ್ತಿದ್ದರು.



ಜಮೀನಿನೊಳಗಡೆ ಗೂಡ್ಸ್ ವಾಹನ ಓಡಾಡಿದ ಗುರುತಿದ್ದು, ಕಳ್ಳರು ಚೆನ್ನಾಗಿ ಹಣ್ಣಾಗಿರುವ ಕಲ್ಲಂಗಡಿಯನ್ನು ಗೂಡ್ಸ್ ವಾಹನದಲ್ಲಿ ತುಂಬಿಕೊಂಡು ಜಾಗ ಖಾಲಿ ಮಾಡಿದ್ದು, ಸಣ್ಣ–ಪುಟ್ಟ ಕಾಯಿಗಳನ್ನು ಹಾಗೆ ಬಿಟ್ಟಿದ್ದಾರೆ. ಇದರಿಂದ ಒಂದರಿಂದ ಒಂದೂವರೆ ಲಕ್ಷ ರೂ.ಗಳಷ್ಟು ನಷ್ಟವಾಗಿದ್ದು, ಸರ್ಕಾರ ತನಗೆ ಸೂಕ್ತ ಪರಿಹಾರ ನೀಡಬೇಕು ಎಂದು ಜಮೀನಿನ ಮಾಲೀಕ ನಂಜುಂಡ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡುತ್ತ ಮನವಿ ನೀಡಿದ್ದಾರೆ.

ಬೈಲಕೊಪ್ಪ ಪೊಲೀಸ್ ಠಾಣೆಗೆ ನಂಜುಂಡ ಅವರು ದೂರು ನೀಡಿದ್ದು ಜಮೀನಿನಲ್ಲಿ ಕಲ್ಲಂಗಡಿ ಹಣ್ಣನ್ನು ಬೆಳೆದಿರುವ ವಿಚಾರ ತಿಳಿದವರೇ ಯಾರೋ ಕಳ್ಳತನ ಮಾಡಿ ಕೊಂಡು ಪರಾರಿಯಾಗಿರಬಹುದು ಎಂದು ಶಂಕಿಸಲಾಗಿದೆ.

ಫೆ.2, ಪಿಎಲ್‌ಡಿ ಬ್ಯಾಂಕ್ ಚುನಾವಣೆ: ಮಾಜಿ ಅಧ್ಯಕ್ಷ ನಾಮಪತ್ರ ಸಲ್ಲಿಕೆ

ತಿ.ನರಸೀಪುರ, ಜ.22– ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ (ಪಿಎಲ್‌ಡಿ ಬ್ಯಾಂಕ್) ಆಡಳಿತ ಮಂಡಳಿ ಸದಸ್ಯರ ಆಯ್ಕೆಗಾಗಿ ಫೆ.2 ರಂದು ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಬೀಡನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೃಷ್ಣೇಗೌಡ ಸಾಲಗಾರರಲ್ಲದ ಕ್ಷೇತ್ರದಿಂದ ಆಯ್ಕೆ ಬಯಸಿ ಬುಧವಾರ ನಾಮಪತ್ರ ಸಲ್ಲಿಸಿದರು.

ಪಿಎಲ್‌ಡಿ ಬ್ಯಾಂಕ್‌ನಲ್ಲಿ ನಾಮಪತ್ರ ಸಲ್ಲಿಸಲು ತೆರೆಯಲಾಗಿರುವ ಕೇಂದ್ರಕ್ಕೆ ತಮ್ಮ ಬೆಂಬಲಿಗರೊಂದಿಗೆ ಆಗಮಿಸಿದ ಕೃಷ್ಣೇಗೌಡ ಚುನಾವಣಾಧಿಕಾರಿ ಮನೋಜ್ ಕುಮಾರ್‌ರವರಿಗೆ ಉಮೇದುವಾರಿಕೆ ಪತ್ರ ಸಲ್ಲಿಸಿದರು. ಈ ವೇಳೆ ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚೆನ್ನಕೇಶವ, ಪಿಎ ಬಸವರಾಜು,ಬನ್ನೂರು ಪುರಸಭೆ ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ, ಬೀಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಬಸವೇಗೌಡ, ಚಾಮನಹಳ್ಳಿ ಸೊಸೈಟಿ ಮಾಜಿ ಅಧ್ಯಕ್ಷ ವೆಂಕಟೇಗೌಡ,ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಸುನೀಲ್, ಹನುಮನಾಳು ಮರಿಗೌಡ, ದಾಸೇಗೌಡನ ಕೊಪ್ಪಲು ಸಂತೋಷ್, ಚಾಮನಹಳ್ಳಿ ಲೋಕೇಶ್, ರಂಜಿತ, ಭವಾನಿ, ಯಾಚೇನಹಳ್ಳಿ ಅಶೋಕ್, ಹನುಮನಾಳು ವಕೀಲ ಸತೀಶ್, ಕುಳ್ಳನಕೊಪ್ಪಲು ಸಿದ್ದು,ಹೆಗ್ಗೂರು ಮಂಜು, ಬಸವನಹಳ್ಳಿ ಮಹೇಂದ್ರ ಉಮೇಶ್, ದಿಲೀಪ್,ಬೀಡನಹಳ್ಳಿ ವಾಸು,ಮಾರಿಗುಡಿ ಮಹೇಶ್, ಕಟ್ಟೇಕೊಪ್ಪಲು ಸಿದ್ದು, ಪ್ರಕಾಶ್, ಅಂಬರೀಷ್ ಅಭಿಮಾನಿ ಸಂಘದ ಅಧ್ಯಕ್ಷ ನಂದೀಶ್ ಸೇರಿದಂತೆ ಬ್ಯಾಂಕಿನ ವ್ಯವಸ್ಥಾಪಕ ಎನ್.ಮಹೇಶ್ ಹಾಜರಿದ್ದರು.

ಬನ್ನೂರು ಸಾಮಾನ್ಯ ಕ್ಷೇತ್ರ: ಬನ್ನೂರು ಸಾಮಾನ್ಯ ಕ್ಷೇತ್ರದಿಂದ ಯುವ ಮುಖಂಡ ಎಸ್.ದಿವಾಕರ್ ರೈತ ಬಾಂಧವರೊಂದಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಮುಖಂಡ ರಾದ ಕೃಪಾಶಂಕರ್ (ಮುರುಳಿ), ಸಂದೇಶ್, ಸ್ವಾಮಿನಾಥ್ ಗೌಡ, ತಾಲೂಕು ಕುರುಬರ ಸಂಘದ ನಿರ್ದೇಶಕ ಕೆ ಅಶ್ವಿನ್, ಮಣಿ ಕಂಠರಾಜ್ ಗೌಡ, ಮಣಿಕಂಠ ರಾಜ್ ಗೌಡ ಇತರರು ಇದ್ದಾರೆ.






ತಿ.ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ (ಪಿಎಲ್‌ಡಿ ಬ್ಯಾಂಕ್) ಆಡಳಿತ ಮಂಡಳಿ ಸದಸ್ಯರ ಆಯ್ಕೆಗಾಗಿ ನಡೆವ ಚುನಾವಣೆಯಲ್ಲಿ ಸಾಲಗಾರರಲ್ಲದ ಕ್ಷೇತ್ರದಿಂದ ಆಯ್ಕೆ ಬಯಸಿ ಬೀಡನಹಳ್ಳಿ ಕೃಷ್ಣೇಗೌಡ ನಾಮಪತ್ರ ಸಲ್ಲಿಸಿದರು ಹಾಗೂ ಬನ್ನೂರು ಸಾಮಾನ್ಯ ಕ್ಷೇತ್ರದಿಂದ ಎಸ್.ದಿವಾಕರ್, ತಮ್ಮ ನಾಮಪತ್ರವನ್ನು ಸಲ್ಲಿಸಿದರು

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಗೆ ಬಸವಣ್ಣ ನೇಮಕ

ತಿ.ನರಸೀಪುರ, ಜ.22– ಮೈಸೂರು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗೆ ಉಪಾಧ್ಯಕ್ಷರಾಗಿ ಹುಣಸೂರು ಬಸವಣ್ಣ ಅವರನ್ನ ನೇಮಕ ಮಾಡಲಾಗಿದೆ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ವಿಮಲಾಕ್ಷಿ.ಬಿ ತಿಳಿಸಿದ್ದಾರೆ.



ತಮ್ಮ ನೇಮಕಕ್ಕೆ ಕಾರಣರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವರು ಡಾ.ಎಚ್.ಸಿ. ಮಹದೇವಪ್ಪ, ಸಂಸದ ಸುನಿಲ್ ಬೋಸ್ ಮತ್ತು ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ. ಬಿ.ಜೆ. ವಿಜಯ್‌ಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ಸಹಕಾರ ಕ್ಷೇತ್ರದಲ್ಲಿ ಹಸ್ತಕ್ಷೇಪ

ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಬೇಸರ

ಚುಂಚನಕಟ್ಟೆ, ಜ.22– ನಾನು ಎಂಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿದ್ದ ವೇಳೆ ಎರಡೂ ಜಿಲ್ಲೆಯ ರೈತರಿಗೆ ಯಾವುದೇ ತಾರತಮ್ಯ ಮಾಡದೆ ಒಂದೂವರೆ ಲಕ್ಷ ರೈತರಿಗೆ ಸಾಲ ನೀಡಿರುವ ತೃಪ್ತಿ ನನಗಿದೆ ಎಂದು ತಿಳಿಸಿದ ಹುಣಸೂರು ಶಾಸಕ ಜಿ.ಡಿ. ಹರೀಶ್ ಗೌಡ, ಸಹಕಾರ ಕ್ಷೇತ್ರದಲ್ಲಿ ಸರ್ಕಾರ ಹಸ್ತಕ್ಷೇಪ ನಡೆಸುತ್ತಿರುವುದನ್ನು ನೋಡಿರುವುದು ಇದೇ ಮೊದಲು ಎಂದರು.

ತಾಲೂಕಿನ ಬಳ್ಳೂರು ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಗೋದಾಮು ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಮತ್ತು ಚಾಮರಾಜನಗರ ಎರಡು ಜಿಲ್ಲೆಗೆ ಎಂಡಿಸಿಸಿ ಬ್ಯಾಂಕಿನಿಂದ ನಮ್ಮ ಕಳೆದ ಐದು ವರ್ಷದ ಆಡಳಿತದ ಅವಧಿಯಲ್ಲಿ 1,700 ಕೋಟಿ ರೂ ಸಾಲವನ್ನು ರೈತರಿಗೆ ನೀಡಲಾಗಿದೆ. ಈ ಹಿಂದೆ 45,000 ರೈತರಿಗೆ ಸಾಲವನ್ನು ನೀಡಲಾಗಿತ್ತು ಆದರೆ ನಮ್ಮ ಅವಧಿಯಲ್ಲಿ ಒಂದೂವರೆ ಲಕ್ಷ ರೈತರುಗಳಿಗೆ ಸಾಲವನ್ನು ನೀಡಿರುವ ತೃಪ್ತಿ ನನಗಿದೆ ಎಂದರು.

ಕಳೆದ 60 ವರ್ಷಗಳ ಇತಿಹಾಸದಲ್ಲಿ 275 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ 50 ಲಕ್ಷ ರೂ. ಅನುದಾನವನ್ನು ಸಂಘಕ್ಕೆ ಬೇಕಾದ ಪರಿಕರಗಳನ್ನು ಖರೀದಿಸಲು ಅನುದಾನವನ್ನು ನೀಡಲಾಗಿತ್ತು. ಆದರೆ ನಮ್ಮ ಎರಡು ವರ್ಷದ ಅವಧಿಯಲ್ಲಿ ಅಪೆಕ್ಸ್ ಬ್ಯಾಂಕಿನಿಂದ ಕಟ್ಟಡಗಳ ನಿರ್ಮಾಣ ನಿಧಿಗೆ ಅನುದಾನವನ್ನು ನೀಡಬೇಕೆಂದು ಹೋರಾಟ ಮಾಡಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಸಹಕಾರ ಸಂಘಗಳಿಗೆ ಆರು ಕೋಟಿ ರೂ ಅನುದಾನವನ್ನು ಕೊಡಿಸಲಾಗಿದೆ ಎಂದು ತಿಳಿಸಿದರು.

ಸಹಕಾರ ಕ್ಷೇತ್ರದಲ್ಲಿ ಇಷ್ಟೊಂದು ಸರ್ಕಾರದ ಹಸ್ತಕ್ಷೇಪವನ್ನು ನಾವು ನೋಡುತ್ತಿರುವುದು ಇದೇ ಮೊದಲ ಬಾರಿಯಾಗಿದೆ. ಎಂಡಿಸಿಸಿ ಬ್ಯಾಂಕ್‌ನ ಆಡಳಿತ ಮಂಡಳಿಗೆ ಚುನಾವಣೆ ನಡೆಸಿಲ್ಲ, ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ನಮ್ಮ ಅವಧಿಯಲ್ಲಿ ಯಾವುದೇ ರಾಜಕಾರಣವನ್ನು ಮಾಡದೆ ಉತ್ತಮವಾಗಿ ಆಡಳಿತ ಮಾಡಿಕೊಂಡು ಬರುವ ಮೂಲಕ ರೈತರ ಪರವಾದ ಕೆಲಸವನ್ನು ಮಾಡಿದ್ದೇವೆ ಎಂದು ಹೇಳಿದರು.

ಶಾಸಕ ಡಿ.ರವಿಶಂಕರ್ ಅವರು ಸಂಘದ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿ, ಸಹಕಾರ ಸಂಘಗಳಲ್ಲಿರುವ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ವರ್ಗದವರು ಪ್ರಾಮಾಣಿಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುವ ಮೂಲಕ ಸಂಘದ ರೈತ ಸದಸ್ಯರುಗಳಿಗೆ ಸಂಘದಿಂದ ಹಾಗೂ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ದೊರಕಿಸಿಕೊಡಬೇಕು. ಸಂಘದ ಅಭಿವೃದ್ಧಿಗೆ ಎಲ್ಲಾ ನೆರವನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಅಮಿತ್ ವಿ. ದೇವರಹಟ್ಟಿ, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ಎಂಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಪ್ರತಾಪ್, ಮೇಲ್ವಿಚಾರಕ ದಿನೇಶ್, ಸಂಘದ ಅಧ್ಯಕ್ಷ ಬಿ.ಎಸ್.ಲೋಕೇಶ್, ಉಪಾಧ್ಯಕ್ಷ ದೇವರಾಜ್, ನಿರ್ದೇಶಕರುಗಳಾದ ರಾಮೇಗೌಡ, ಕಲ್ಪನಾಸುರೇಶ್, ಭಾರತಿ ಹುಚ್ಚೇಗೌಡ, ಎಲ್.ಸಿ. ರಾಮೇಗೌಡ, ಮಂಜುನಾಥ, ಸರಸ್ವತಿಈಶ್ವರ, ಸ್ವಾಮಿಶೆಟ್ಟಿ, ರಾಜನಾಯಕ, ಸಿ.ಎಂ.ಗೋಪಾಲ್, ಲಕ್ಷ್ಮಮ್ಮ ಶ್ರೀನಿವಾಸ, ಸಿಇಓ ಹರೀಶ್, ತಾ ಪಂ ಮಾಜಿ ಸದಸ್ಯ ಸಣ್ಣಪ್ಪ, ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಹುಚ್ಚೆಗೌಡ, ಡಿಶ್ ಮಂಜುನಾಥ್, ಮಾಜಿ ಅಧ್ಯಕ್ಷ ಬೀರೇಶ್ ಸೇರಿದಂತೆ ಹಲವರು ಇದ್ದರು.



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಗೋದಾಮು ಕಟ್ಟಡವನ್ನು ಉದ್ಘಾಟಿಸಿ, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿದರು.

ಯಲ್ಲಾಪುರದಲ್ಲಿ ಲಾರಿ ಪಲ್ಟಿಯಾಗಿ 14 ಮಂದಿ ದುರ್ಮರಣ

ಮೃತರ ಕುಟುಂಬಕ್ಕೆ ಸಿಎಂ 3 ಲಕ್ಷ; ಪ್ರಧಾನಿ 2 ಲಕ್ಷ ರೂ. ಪರಿಹಾರ ಘೋಷಣೆ



ಯಲ್ಲಾಪುರ: ಲಾರಿ ಪಲ್ಟಿಯಾಗಿ 14 ಮಂದಿ ಸಾವನ್ನಪ್ಪಿರುವ ದುರ್ಘಟನೆಯೊಂದು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಗುಳ್ಳಾಪುರ ಬಳಿ ಬುಧವಾರ ನಡೆದಿದೆ.

ಕುಮಟಾದಲ್ಲಿ ಸಂತೆ ಹಿನ್ನೆಲೆಯಲ್ಲಿ ವ್ಯಾಪಾರಸ್ಥರು ಹಣ್ಣು ಹಾಗೂ ತರಕಾರಿ ಖರೀದಿಸಿ, ಲಾರಿಯಲ್ಲಿ ಬರುತ್ತಿದ್ದರು. ಈ ವೇಳೆ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಲಾರಿ ಪಲ್ಟಿಯಾಗಿ ಅಪಘಾತ ಸಂಭವಿಸಿದೆ.

ಸವಣೂರು ತಾಲೂಕಿನ 28 ವ್ಯಾಪಾರಿಗಳು ಲಾರಿಯಲ್ಲಿ ಪ್ರಯಾಣಿಸುತ್ತಿದ್ದರು ಎಂದು ತಿಳಿದುಬಂದಿದೆ. ಗುಳ್ಳಾಪುರದ ಬಳಿ ಲಾರಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದಿದ್ದು, ಪರಿಣಾಮ 14 ಮಂದಿ ವ್ಯಾಪಾರಿಗಳು ಸ್ಥಳದಲ್ಲಿಯೇ ದುರ್ಮರಣವನ್ನಪ್ಪಿದ್ದಾರೆ. ಅಲ್ಲದೆ, 18 ಮಂದಿ ಗಂಭೀರವಾಗಿ ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇದೀಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಇಬ್ಬರು ಸಾವನ್ನಪ್ಪಿದ್ದು, ಸಾವಿನ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ಮತ್ತಷ್ಟು ಜನರ ಸ್ಥಿತಿ ಗಂಭೀರವಾಗಿರುವ ಹಿನ್ನೆಲೆಯಲ್ಲಿ ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಗಳಿವೆ ಎಂದು ತಿಳಿದುಬಂದಿದೆ.

ಘಟನೆಯಲ್ಲಿ ಸಾವನ್ನಪ್ಪಿದವರನ್ನು ಫಯಾಜ್ ಜಮಖಂಡಿ (45), ವಾಸೀಂ ಮುಡಗೇರಿ (35), ಇಜಾಜ್ ಮುಲ್ಲಾ (20), ಸಾದೀಕ್ ಭಾಷ್ (30), ಗುಲಾಮ್ ಹುಸೇನ್ ಜವಳಿ (40), ಇಮ್ತಿಯಾಜ್ ಮುಳಕೇರಿ (36), ಅಲ್ಫಾಜ್ ಜಾಫರ್ ಮಂಡಕ್ಕಿ (25), ಜೀಲಾನಿ ಅಬ್ದುಲ್ ಜಖಾತಿ (25), ಅಸ್ಲಂ ಬಾಬುಲಿ ಬೆಣ್ಣಿ (24), ಜಲಾಲ್ ತಾರಾ (30) ಎಂದು ಗುರ್ತಿಸಲಾಗಿದೆ.

ಘಟನೆ ವೇಳೆ ಲಾರಿಯಲ್ಲಿ ಒಟ್ಟು 28 ಮಂದಿ ವ್ಯಾಪಾರಿಗಳು ಪ್ರಯಾಣಿಸುತ್ತಿದ್ದರು. ಲಾರಿಯು ಸವಣೂರಿನಿಂದ ಕುಮಟಾಗೆ ತೆರಳುತ್ತಿತ್ತು ಎಂದು ತಿಳಿದುಬಂದಿದೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿರುವ ಪೊಲೀಸರು, ಪರಿಶೀಲನೆ ನಡೆಸಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಈ ಸಂಬಂಧ ಯಲ್ಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರ ಕುಟುಂಬಕ್ಕೆ 3 ಲಕ್ಷ ರೂ. ಪರಿಹಾರ ಘೋಷಣೆ: ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಾವಿಗೀಡಾದವರ ಕುಟುಂಬಕ್ಕೆ ತಲಾ 3 ಲಕ್ಷ ಪರಿಹಾರ ಘೋಷಿಸಿದ್ದು, ಮೃತರ ಕುಟುಂಬಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಬಳಿ ಬುಧವಾರ ಬೆಳಗಿನ ಜಾವ ತರಕಾರಿ ಸಾಗಿಸುತ್ತಿದ್ದ ಲಾರಿ ಪಲ್ಟಿಯಾಗಿ 14 ಮಂದಿ ಮೃತಪಟ್ಟು, ಘಟನೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.

ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತಪಟ್ಟವರ ಕುಟುಂಬಸ್ಥರಿಗೆ ತಲಾ 2 ಲಕ್ಷ ರೂ. ಪರಿಹಾರ ನೀಡುವುದಾಗಿ ಪ್ರಧಾನಿ ಮೋದಿ ಘೋಷಿಸಿದ್ದಾರೆ. ರಾಜ್ಯ ಸರ್ಕಾರ ಈಗಾಗಲೇ ತಲಾ 3 ಲಕ್ಷ ರೂ. ಪರಿಹಾರ ಘೋಷಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವನಂಗಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗೇಮ್ ಚೇಂಜರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫತೇ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೂ ಮಂತರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಭೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರ್ಕೋ (ಹಿ)	4 ಪ್ರದರ್ಶನಗಳು
ಪ್ರಭಾ	
ಮದಗಜ ರಾಜ (ತ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.40ಕ್ಕೆ, ಗೇಮ್ ಚೇಂಜರ್ (ತೆ): ಮ.1.05ಕ್ಕೆ, ಸಂಜು ವೆಡ್ಸ್ ಗೀತಾ 2 (ಕ): ಸಂ.4.25ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.10ಕ್ಕೆ, ಭೂ ಮಂತರ್ (ಕ): ರಾ.10.05ಕ್ಕೆ.
ಸ್ಕ್ರೀನ್ 2	ಸಂಜು ವೆಡ್ಸ್ ಗೀತಾ 2 (ಕ): ಬೆ.10.35ಕ್ಕೆ, ರಾ.10.10ಕ್ಕೆ, ಮದಗಜ ರಾಜ (ತ): ಮ.1.15ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.20ಕ್ಕೆ, ಭೂ ಮಂತರ್ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಭೂ ಮಂತರ್ (ಕ): ಬೆ.10.30ಕ್ಕೆ, ಕಾದಲಿಕ್ಕ ನೆರಮಿಲ್ಲೈ (ತ): ಮ.1.30ಕ್ಕೆ, ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು (ಕ): ಸಂ.4.25ಕ್ಕೆ, ಎಮರ್ಜೆನ್ಸಿ (ಹಿಂ): ರಾ.7.10ಕ್ಕೆ, ರೇಖಾಚಿತ್ರಂ (ಮ): ರಾ.10.15ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಮ.1.10ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4ಕ್ಕೆ, ರಾ.10.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಮ್ಯಾಕ್ಸ್ (ಕ): ಬೆ.11.15ಕ್ಕೆ, ಸಂ.6.45ಕ್ಕೆ, ರಾ.9.15ಕ್ಕೆ, ಯುಐ (ಕ): ಮ.1.45ಕ್ಕೆ, ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು (ಕ): ಸಂ.4.15ಕ್ಕೆ.
ಸ್ಕ್ರೀನ್ 2	ಪರಿಸ್ಥಿತಿ (ಕ): ಬೆ.11.20ಕ್ಕೆ, ಭೂ ಮಂತರ್ (ಕ): ಮ.1.20ಕ್ಕೆ, ಸಂ.4ಕ್ಕೆ, ಸಂ.6.40ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ಡಾಕು ಮಹಾರಾಜ್ (ತೆ): ಬೆ.10.40ಕ್ಕೆ, ಸಂ.4ಕ್ಕೆ, ಟೆಡ್ಡಿ ಬೇರ್ (ಕ): ಮ.1.25ಕ್ಕೆ, ರೇಖಾಚಿತ್ರಂ (ಮ): ಸಂ.6.45ಕ್ಕೆ, ರಾ.9.25ಕ್ಕೆ.
ಸ್ಕ್ರೀನ್ 4	ಭೂ ಮಂತರ್ (ಕ): ಬೆ.10.45ಕ್ಕೆ, ಮ್ಯಾಕ್ಸ್ (ಕ): ಮ.1.30ಕ್ಕೆ, ಸಂ.4.05ಕ್ಕೆ, ಡಾಕು ಮಹಾರಾಜ್ (ತೆ): ಸಂ.6.35ಕ್ಕೆ, ರಾ.9.20ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನೂತನ ವರ್ಷದ ಯೋಗ ಕ್ಯಾಲೆಂಡರ್ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಹಿಮಾಲಯ ಪ್ರತಿಷ್ಠಾನದ ಯೋಗ ಕ್ಯಾಲೆಂಡರ್ ಅನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಬಿಡುಗಡೆ ಮಾಡಿದರು.

ಮೈಸೂರು,ಜ.22(ಎಂಟಿವೈ)– ಮೈಸೂರಿನ ಹಿಮಾಲಯ ಪ್ರತಿಷ್ಠಾನ ಪ್ರಕಟಿಸಿರುವ ನೂತನ ವರ್ಷದ ಯೋಗ ಕ್ಯಾಲೆಂಡರ್ ಅನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿಮಾಲಯ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯೋಗ ಕ್ಯಾಲೆಂಡರ್ ಬಿಡುಗಡೆ ಬಳಿಕ ಡಾ.ಡಿ.ತಿಮ್ಮಯ್ಯ ಮಾತನಾಡಿ, ದೇಶದಲ್ಲಿ ಪುರಾತನ ಕಾಲದಿಂದಲೂ ಋಷಿ ಮುನಿಗಳು ಯೋಗ ಕುರಿತಂತೆ ಮಹತ್ವದ ಜ್ಞಾನ ಹೊಂದಿದ್ದರು. ದೇಹದ ಎಲ್ಲ ಅಂಗಗಳನ್ನೂ ಸುಸ್ಥಿತಿಯಲ್ಲಿರಿಸಿಕೊಳ್ಳಲು ಯೋಗಾಭ್ಯಾಸ ಅತ್ಯಗತ್ಯ. ವ್ಯಕ್ತಿಯ ಆರೋಗ್ಯ ಚೆನ್ನಾಗಿದ್ದರೆ ಸಮಾಜದ ಸ್ವಾಸ್ಥ್ಯವೂ ಉತ್ತಮವಾಗಿರುತ್ತದೆ. ದೇಹದ ಪ್ರತಿಯೊಂದು ಅಂಗದ ಸ್ವಾಸ್ಥ್ಯಕ್ಕೆ ಯೋಗಾಸನ ನೆರವಾಗುತ್ತದೆ. ಈ ನಿಟ್ಟಿನಲ್ಲಿ ಯೋಗದ ಬಗ್ಗೆ ಅರಿವು ಮೂಡಿಸುವ ಮಾಹಿತಿಯುಳ್ಳ ಕ್ಯಾಲೆಂಡರ್ ಪ್ರಕಟಿಸಿರುವುದು ಶ್ಲಾಘನೀಯ. ಕ್ಯಾಲೆಂಡರ್‌ನಲ್ಲಿ ಯೋಗದ ಆಸನಗಳು ಸೇರಿದಂತೆ ಇನ್ನಿತರ ಮಾಹಿತಿ ಇದ್ದು, ಯೋಗಾಸಕ್ತರಿಗೆ ವರದಾನವಾಗಿದೆ ಎಂದರು.

ಈ ಸಂದರ್ಭದಲ್ಲಿ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕರಾದ ಕೆ.ಲೀಲಾ ಪ್ರಕಾಶ್, ಆರ್ಯಸಮಾಜ ಅಧ್ಯಕ್ಷ ಎಸ್.ಹೇಮಚಂದ್ರ, ಮೈಸೂರು ಮೆಡಿಕಲ್ ಸಿಸ್ಟಂ ಸ್ಥಾಪಕ ಪ್ರಭುಶಂಕರ್, ಪ್ರತಿಷ್ಠಾನ ಸ್ಥಾಪಕ ಎನ್.ಅನಂತ, ಉಪಾಧ್ಯಕ್ಷ ಕೃಷ್ಣಮೂರ್ತಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಕವಯತ್ರಿ ಡಾ. ಲತಾ ರಾಜಶೇಖರ್, ಡಾ.ರಾಜಶೇಖರ್ ದಂಪತಿಗೆ ಸನ್ಮಾನ



ಮೈಸೂರಿನ ಆಚಾರ್ಯ ಗುರುಕುಲದಿಂದ ಮೈಸೂರು ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಜೈನ್ ಮಿಲನ್ ಸಂಘಟಕ ನಾ.ಪ್ರಸನ್ನಕುಮಾರ ಅವರು ಕವಯತ್ರಿ ಡಾ. ಲತಾ ರಾಜಶೇಖರ್ ಅವರಿಗೆ ಆಚಾರ್ಯ ಗುರುಕುಲ ಭಗವಾನ್ ಮಹಾವೀರ ಪ್ರಶಸ್ತಿ ಪ್ರದಾನ ಮಾಡಿದರು. ಇದೇ ವೇಳೆ ವೈದ್ಯ ಡಾ. ಹೆಚ್.ಬಿ.ರಾಜಶೇಖರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜ.22(ಎಂಟಿವೈ)– ಮೈಸೂರಿನ ಆಚಾರ್ಯ ಗುರುಕುಲ ಸಂಸ್ಥೆ ವತಿಯಿಂದ ಕವಯತ್ರಿ ಡಾ.ಲತಾ ರಾಜಶೇಖರ್ ಹಾಗೂ ಡಾ.ಹೆಚ್.ಬಿ. ರಾಜಶೇಖರ್ ದಂಪತಿಯನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮಹಾವೀರ ಮಹಾದರ್ಶನ ಕಾವ್ಯ ವಾಚನದ 350ನೇ ದಿನದ ಸಂಭ್ರಮ ಮಹೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಚಾರ್ಯ ಗುರುಕುಲ ಸಂಸ್ಥೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿಕೆ ಹಾಗೂ ಅಂತರರಾಷ್ಟ್ರೀಯ ಜೈನ್ ಮಿಲನ್ ಸಂಘಟನೆಯ ಮುಖ್ಯಸ್ಥ ನಾ.ಪ್ರಸನ್ನ ಕುಮಾರ್ ಅವರು ಡಾ.ಲತಾ ರಾಜಶೇಖರ್ ದಂಪತಿ ಸನ್ಮಾನಿಸಿದರು.

ಇದೇ ವೇಳೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್(ಸಿಪಿಕೆ) ಮಾತನಾಡಿ, ಮಹಾವೀರ ಮಹಾ ಸಾತ್ವಿಕ ವ್ಯಕ್ತಿ, ಅಹಿಂಸಾ ವೀರ. ಆತನ ಸಂದೇಶ ಇಂದಿಗೂ ಪ್ರಸ್ತುತ. ಮಹಾವೀರರು ನೀಡಿದ ಅಹಿಂಸಾ ತತ್ವ ಎಂದೆಂದಿಗೂ ಸಮಾಜದಲ್ಲಿ ಶಾಂತಿ, ಸಹಬಾಳ್ವೆ ನೆಲೆಸಲು ಸಹಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಕವಿ ಲತಾ ರಾಜಶೇಜರ್ ಅವರು ಮಹಾವೀರನ ಬಗ್ಗೆ ಬರೆದ ಕೃತಿಯು ಮೌಲಿಕವಾಗಿದೆ ಪರಧರ್ಮಗಳನ್ನು ಹೊಕ್ಕು ಉನ್ನತ ವಿಚಾರಗಳನ್ನು ಜನರಿಗೆ ತಲುಪಿಸುವ ಅವರ ಉದ್ದೇಶ ಸಮಯೋಚಿತವಾಗಿದ್ದು, ಸಾಹಿತ್ಯ ಲೋಕದ ಶ್ರೀಮಂತಿಕೆ ಹೆಚ್ಚಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಗುರುಕುಲದ ಕುಲಸಚಿವ ಡಾ.ಹೆಚ್.ಪಿ.ಮೋಹನ ಕುಮಾರ ಶಾಸ್ತ್ರಿ, ಅಂತರರಾಷ್ಟ್ರೀಯ ಜೈನ್ ಮಿಲನ್ ಸಂಘಟಕ ನಾ. ಪ್ರಸನ್ನ ಕುಮಾರ, ವೈದ್ಯ ಡಾ.ಹೆಚ್.ಬಿ.ರಾಜಶೇಖರ್, ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷೆ ಶೀಲಾ ಅನಂತರಾಜ್, ಶ್ರೀಕ್ಷೇತ್ರ ಶ್ರೀರಂಗಪಟ್ಟಣ ಪ್ರಧಾನ ಸಂರಕ್ಷಕ ಎಸ್.ಎಂ.ಸನ್ಮತಿ ಕುಮಾರ ಶಾಸ್ತ್ರಿ ಇದ್ದರು.

ಶಾಸಕರ ಅನರ್ಹತೆ ತಡೆಯುವ ಮಸೂದೆಗೆ ರಾಜ್ಯಪಾಲರ ಸಹಿ

ಬೆಂಗಳೂರು, ಜ.22– ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರು ಇತರ ಲಾಭದಾಯಕ ಹುದ್ದೆ ಹೊಂದಿದ ಕಾರಣಕ್ಕೆ ಶಾಸಕ ಸ್ಥಾನದಿಂದ ಅನರ್ಹರಾಗುವುದನ್ನು ತಡೆಯುವ ಮಸೂದೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಂಕಿತ ಹಾಕಿದ್ದಾರೆ. ಈ ಸಂಬಂಧ ಕಾನೂನು ಇಲಾಖೆಯು ಅಧಿಸೂಚನೆ ಹೊರಡಿಸಿದೆ.

ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರ ಸಲಹೆಗಾರರು, ಯಾವುದೇ ಆಯೋಗದ ಅಧ್ಯಕ್ಷರು ಹಾಗೂ ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷರಾಗಿ ನೇಮಕಗೊಂಡರೆ ಅವರನ್ನು ಅನರ್ಹಗೊಳಿಸಲು ಕರ್ನಾಟಕ ವಿಧಾನ ಮಂಡಲ ಕಾಯ್ದೆಯಲ್ಲಿ ಅವಕಾಶವಿತ್ತು.

ವಿಧಾನಸಭಾ ಸದಸ್ಯರಾಗಿರುವ ಬಸವರಾಜ ರಾಯರೆಡ್ಡಿ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರಾಗಿ, ಬಿ.ಆರ್. ಪಾಟೀಲ ಮುಖ್ಯಮಂತ್ರಿಯವರ ಸಲಹೆಗಾರರಾಗಿ ಮತ್ತು ಆರ್.ವಿ.ದೇಶಪಾಂಡೆ ಅವರು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಈ ಮೂವರನ್ನೂ ಲಾಭದಾಯಕ ಹುದ್ದೆ ವ್ಯಾಪ್ತಿಯಿಂದ ಹೊರಗಿಟ್ಟು, ರಕ್ಷಿಸುವುದಕ್ಕೆ ತಿದ್ದುಪಡಿ ಮಸೂದೆ ರೂಪಿಸಲಾಗಿತ್ತು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ವಿಧಾನಸಭೆಯಲ್ಲಿ 'ಕರ್ನಾಟಕ ವಿಧಾನ ಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ಮಸೂದೆ' ಮಂಡಿಸಿದಾಗ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರಿಂದ ಭಾರಿ ಆಕ್ಷೇಪ ವ್ಯಕ್ತವಾಗಿತ್ತು.

2024ರ ಫೆಬ್ರುವರಿಯಲ್ಲಿ ವಿಧಾನಮಂಡಲದ ಅನುಮೋದನೆ ಪಡೆದ ಮಸೂದೆಯನ್ನು ರಾಜ್ಯಪಾಲರಿಗೆ ಕಳುಹಿಸಲಾಗಿತ್ತಾದರೂ, ರಾಜ್ಯಪಾಲರು ಸಹಿ ಹಾಕಿರಲಿಲ್ಲ. ಈಗ ರಾಜ್ಯಪಾಲರ ಅಂಕಿತ ದೊರೆತಿದ್ದು ಬಿ.ಆರ್. ಪಾಟೀಲ, ಬಸವರಾಜ ರಾಯರಡ್ಡಿ ಮತ್ತು ಆರ್.ವಿ.ದೇಶಪಾಂಡೆ ಅವರು ಅನರ್ಹತೆ ತೂಗುಗತ್ತಿಯಿಂದ ಪಾರಾಗಿದ್ದಾರೆ.

ಜ.26ರಂದು ಮೈಸೂರಲ್ಲಿ ಸಿದ್ಧಗಂಗಾ ಡಾ.ಶಿವಕುಮಾರಸ್ವಾಮಿಗಳ ಸ್ಮರಣೆ

ವಿವಿಧ ಕಾರ್ಯಕ್ರಮ ಆಯೋಜನೆ

ಮೈಸೂರು, ಜ.22(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ಜ.26ರಂದು ಮಧ್ಯಾಹ್ನ 3ರಿಂದ ರಾತ್ರಿ 9ರವರೆಗೆ ಸಿದ್ಧಗಂಗಾ ಕ್ಷೇತ್ರದ ದಿವಂಗತ ಡಾ.ಶ್ರೀ ಶಿವಕುಮಾರಸ್ವಾಮಿ ಅವರ 6ನೇ ಪುಣ್ಯ ಸ್ಮರಣೆ ಹಿನ್ನೆಲೆಯಲ್ಲಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಖಿಲ ಕರ್ನಾಟಕ ಶಿವಕುಮಾರ ಮಹಾಸ್ವಾಮೀಜಿ ಭಕ್ತವೃಂದ ಸಮಿತಿಯ ಡಾ.ನಾಗರಾಜ್ ವಿ.ಬೈರಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಶಿವಕುಮಾರಸ್ವಾಮಿ ಅವರ ಪುಣ್ಯ ಸ್ಮರಣೆ ಹಾಗೂ ದಾಸೋಹ ದಿನದ ಅಂಗವಾಗಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಜ.26ರ ಮಧ್ಯಾಹ್ನ 3ಕ್ಕೆ ಪ್ರಜಾಕಿರಣ ಚಾರಿಟಬಲ್ ಟ್ರಸ್ಟ್‌ನಿಂದ ಸಿದ್ಧಗಂಗಾ ಶ್ರೀಗಳ ಜೀವನ ಚರಿತ್ರೆ ನಾಟಕ ಪ್ರದರ್ಶನ, ಸಂಜೆ 4ಕ್ಕೆ ಅಪೇಕ್ಷಾ ನೃತ್ಯ ಕಲಾ ತಂಡದಿಂದ ಭಕ್ತಿ ಸಂಗಮ, ಭಕ್ತಿಗೀತೆ ಹಾಗೂ ಭರತನಾಟ್ಯ ಆಯೋಜಿಸಲಾಗಿದೆ. ಸಂಜೆ 5ಕ್ಕೆ ಸಭಾ ಕಾರ್ಯಕ್ರಮ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ 48 ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದ್ದು, ಅವರಲ್ಲಿ ಆರು ಮಂದಿಗೆ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಪ್ರಶಸ್ತಿ, ತಲಾ ಐವರಿಗೆ ಶಿಕ್ಷಣ ರತ್ನ ಪ್ರಶಸ್ತಿ, ಸಾಹಿತ್ಯ ರತ್ನ, ಧಾರ್ಮಿಕ ರತ್ನ, ಸಮಾಜಸೇವಾ ರತ್ನ, ಕಲಾಸೇವಾ ರತ್ನ, ಕಾಯಕ ರತ್ನ, ಯೋಗ ರತ್ನ, ಬಸವಶ್ರೀ ಪ್ರಶಸ್ತಿ ಹಾಗೂ ಇಬ್ಬರಿಗೆ ರಾಷ್ಟ್ರೀಯ ಶೂಟರ್ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದರು.

ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಹಾಗೂ ವಿವಿಧ ಮಠಾಧೀಶರ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ.ಸಿ.ಎನ್.ಮಂಜುನಾಥ್, ನಟ ಡಾಲಿ ಧನಂಜಯ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಆರೋಗ್ಯ ತಪಾಸಣೆ, ದಾಸೋಹ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಪರಮಪೂಜ್ಯ ಶಿವಕುಮಾರ ಮಹಾಸ್ವಾಮೀಜಿ ಭಕ್ತವೃಂದ ಸಮಿತಿ ಗೌರವಾಧ್ಯಕ್ಷ ನ.ಗಂಗಾಧರಪ್ಪ, ಅಧ್ಯಕ್ಷ ಆರ್.ಎಸ್.ರಾಜು, ಉದ್ಯಮಿ ಕೆ.ವಸಂತಕುಮಾರ್, ಪ್ರಮುಖರಾದ ಬೆಟ್ಟೇಗೌಡ, ಕೃಷ್ಣೋಜಿರಾವ್, ಸಂಯೋಜಕರಾದ ಎ.ಪಿ.ವಿರೂಪಾಕ್ಷ, ಕೆ.ವಿ.ಮಲ್ಲೇಶ್, ದಾರಿಪುರ ಚಂದ್ರಶೇಖರ್ ಇದ್ದರು.

ಸ್ವಹಿತಾಸಕ್ತಿಗೆ ನಡೆಯುತ್ತಿರುವ ಒಳ ಜಗಳದಲ್ಲಿ ನಾವು ಮಧ್ಯ ಪ್ರವೇಶಿಸಲ್ಲ

● ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್ ಸ್ಪಷ್ಟನೆ ● ನಮ್ಮದೇನಿದ್ದರೂ ಪಕ್ಷ ಸಂಘಟನೆ ಅಷ್ಟೇ



ಬೆಂಗಳೂರು, ಜ.22(ಕೆಎಂಶಿ)–ಸ್ವಹಿತಾಸಕ್ತಿ ಕಾರಣಗಳಿಗಾಗಿ ನಡೆಯುತ್ತಿರುವ ಒಳಜಗಳದಲ್ಲಿ ರಾಷ್ಟ್ರೀಯ ನಾಯಕರ ಮಧ್ಯ ಪ್ರವೇಶ ಇಲ್ಲ, ಸಮಸ್ಯೆಗಳನ್ನು ನೀವೇ ಸರಿಪಡಿಸಿಕೊಳ್ಳಿ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್ ಸ್ಪಷ್ಟವಾಗಿ ತಿಳಿಸಿದ್ದಾರೆ.

ಮಂಗಳವಾರ ರಾತ್ರಿ ನಡೆದ ರಾಜ್ಯ ಕೋರ್ ಕಮಿಟಿ ಸಭೆಯಲ್ಲಿ ಕೆಲವು ಮುಖಂಡರು, ರಾಜ್ಯ ನಾಯಕತ್ವದ ವಿರುದ್ಧ ಬಂಡಾಯವೆದ್ದು ಬೀದಿಗಿಳಿದಿರುವ ಕುರಿತು ಪ್ರಸ್ತಾಪಿಸಿದಾಗ, ಅಗರ್‌ವಾಲ್ ಈ ಮಾತು ಹೇಳಿದ್ದಾರೆ.

ನಾಯಕರು ವೈಯಕ್ತಿಕ ಪ್ರತಿಷ್ಠೆಗಾಗಿ ಹೋರಾಟ ಮಾಡುತ್ತಿರುವಂತಿದೆ. ಇವರ ಈ ಕೃತ್ಯದಿಂದ ಪಕ್ಷಕ್ಕೆ ಯಾವುದೇ ಹಾನಿಯಾಗದು. ಇದನ್ನು ನಿಮ್ಮಲ್ಲಿಯೇ ಸರಿಪಡಿಸಿಕೊಳ್ಳಬೇಕು ನಾವು ಮಧ್ಯಪ್ರವೇಶಿಸುವುದಿಲ್ಲ.

ಬಂಡಾಯ ಎದ್ದಿರುವ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ಪರವಾಗಲಿ, ರಾಜ್ಯಾಧ್ಯಕ್ಷರ ಪರವಾಗಲಿ ನಾವಿಲ್ಲ. ನಮ್ಮದು ಪಕ್ಷ ಸಂಘಟನೆಯಷ್ಟೇ. ಇದಕ್ಕೆ ಧಕ್ಕೆ ಆಗಲು ಬಿಡುವುದಿಲ್ಲ, ಈಗ ನಡೆಯುತ್ತಿರುವ ಒಳ ಸಂಘರ್ಷದಿಂದ ಪಕ್ಷಕ್ಕೆ ಯಾವ ಹಾನಿಯೂ ಆಗದು. ನಾವು ಈ ವಿಷಯದಲ್ಲಿ ತಟಸ್ಥ ಎಂದಿದ್ದಾರೆ.

ಆರ್.ಅಶೋಕ್, ಡಾ.ಅಶ್ವತ್ಥ ನಾರಾಯಣ, ಬಿ.ಶ್ರೀರಾಮುಲು ಅವರುಗಳು ಕೆಲವು ನೇಮಕಾತಿ ವಿಚಾರದಲ್ಲಿ ಅಪಸ್ವರ ಎತ್ತಿದ್ದಲ್ಲದೆ, ಮಾತಿನ ಚಕಮಕಿಯೂ ಸಭೆಯಲ್ಲಿ ನಡೆದಿದೆ. ನಾವು ಮಾಡಿದ ಶಿಫಾರಸ್ಸನ್ನು ಕಡೆಗಣಿಸಿ ಬೇರೆಯವರನ್ನು ನೇಮಕ ಮಾಡಿದ್ದೀರಿ. ಇದು ಸರಿಯಲ್ಲ ಎಂದು ರಾಜ್ಯಾಧ್ಯಕ್ಷರಿಗೆ ಈ ಮುಖಂಡರು ಸಭೆಯಲ್ಲೇ ತಿಳಿಸಿದರು.

ಜಿಲ್ಲಾಧ್ಯಕ್ಷರ ನೇಮಕಾತಿಗೆ ಸಂಬಂಧಿಸಿದಂತೆ ನಡೆದ ಭಾರಿ ಚರ್ಚೆ ನಂತರ ಮಧ್ಯೆ ಪ್ರವೇಶಿಸಿದ ಅಗರ್‌ವಾಲ್, ಪ್ರತಿ ಜಿಲ್ಲೆಗೆ ಮೂವರ ಹೆಸರುಗಳನ್ನು ರಾಜ್ಯ ಘಟಕದಿಂದ ಶಿಫಾರಸು ಮಾಡಿ.

ಪಕ್ಷ ನೀವು ಮಾಡಿದ ಶಿಫಾರಸ್ಸಿನಲ್ಲಿ ಒಬ್ಬರನ್ನು ನೇಮಕ ಮಾಡುತ್ತದೆ. ಇದಕ್ಕೂ ರಾಜ್ಯಾಧ್ಯಕ್ಷರ ಚುನಾವಣೆಗೂ ಸಂಬಂಧವಿಲ್ಲ. ರಾಜ್ಯಾಧ್ಯಕ್ಷರ ಚುನಾವಣೆ ಪಕ್ಷದ ಹಿರಿಯ ನಾಯಕ ಹಾಗೂ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ನಡೆಯಲಿದೆ ಎಂದರು.

ರಾಜ್ಯದಲ್ಲಿ ನಿಲ್ಲದ 'ಮೈಕ್ರೋ ಫೈನಾನ್ಸ್' ಹಾವಳಿ: ಮನನೊಂದು ಮತ್ತೋರ್ವ ಮಹಿಳೆ ಆತ್ಮಹತ್ಯೆ

ರಾಮನಗರ : ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಮುಂದುವರೆದಿದ್ದು, ಮನನೊಂದು ಮತ್ತೊಬ್ಬ ಮಹಿಳೆ ಬಲಿಯಾಗಿದ್ದಾರೆ. ಚನ್ನಪಟ್ಟಣ ತಾಲೂಕಿನ ಮೈಲನಾಯ್ಕನಹಳ್ಳಿ ಗ್ರಾಮದಲ್ಲಿ ಲೀಲಾವತಿ (50) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳಕ್ಕೆ ಬೇಸತ್ತು ಮಹಿಳೆಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿವಿಧ ಖಾಸಗಿ ಫೈನಾನ್ಸ್ ಕಂಪನಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಸಾಲ ಮಾಡಿದ್ದರು. ಸಾಲ ಹಿಂತಿರುಗಿಸುವಂತೆ ಮೈಕ್ರೋ ಫೈನಾನ್ಸ್ ಕಂಪನಿಗಳು ಕಿರುಕುಳ ನೀಡಿದ ಹಿನ್ನೆಲೆಯಲ್ಲಿ ಬೇಸತ್ತು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಮಹಾ ಕುಂಭಮೇಳದ ಫೋಟೋಗಳನ್ನು ಬಾಹ್ಯಾಕಾಶದಿಂದ ಕ್ಲಿಕ್ಕಿಸಿದ ಇಸ್ರೋ

ಸ್ಪೇಸ್ ಫೇಸ್ ಮೇಲೂ ಸ್ಟೈಲ್ ಮೂಡಿಸಿದ ಮಹಾಕುಂಭ ಮೇಳ; ಬಾಹ್ಯಾಕಾಶದಿಂದ ಕಂಡ ಅದ್ಭುತ ದೃಶ್ಯ..!



ಪ್ರಯಾಗರಾಜ್, ಜ.22– ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳ, ಜಾಗತಿಕ ಭಕ್ತರನ್ನು ತನ್ನತ್ತ ಸೆಳೆಯುತ್ತಿದೆ. ಭಾರತದ ಆಧ್ಯಾತ್ಮಿಕ ಶಕ್ತಿಯ ಪ್ರದರ್ಶನದಂತಿರುವ ಈ ಮಹಾಕುಂಭ ಮೇಳ, ಕೋಟ್ಯಂತರ ಭಾರತೀಯರ ಧಾರ್ಮಿಕ ಅಸ್ಮಿತೆಗೆ ಸಾಕ್ಷಿ ಒದಗಿಸಿದೆ. ಈ ಮಧ್ಯೆ ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಬಾಹ್ಯಾಕಾಶದಿಂದ ಮಹಾಕುಂಭ ಮೇಳದ ಫೋಟೋಗಳನ್ನು ಕ್ಲಿಕ್ಕಿಸಿದ್ದು, ಮಹಾಕುಂಭ ಮೇಳದ ಕಂಪು ಬಾಹ್ಯಾಕಾಶದವರೆಗೂ ಹರಡಿರುವುದು ಸ್ಪಷ್ಟವಾಗಿದೆ.

ಬಾಹ್ಯಾಕಾಶದಲ್ಲಿ ಕಾರ್ಯನಿರತ ಭಾರತೀಯ ಉಪಗ್ರಹಗಳನ್ನು ಬಳಸಿ ಕ್ಲಿಕ್ಕಿಸಲಾದ, ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದ ಹೈ ರೆಸಲ್ಯೂಷನ್ ಚಿತ್ರಗಳನ್ನು ಇಸ್ರೋ ಬಿಡುಗಡೆ ಮಾಡಿದೆ. ಪ್ರಮುಖವಾಗಿ ಮಹಾ ಕುಂಭಮೇಳದ ಬೃಹತ್ ಮೂಲ ಸೌಕರ್ಯದ ಬಾಹ್ಯಾಕಾಶ ಚಿತ್ರಗಳು ಗಮನ ಸೆಳೆದಿವೆ.

ಭಾರತದ ಅತ್ಯಾಧುನಿಕ ಆಪ್ಟಿಕಲ್ ಉಪಗ್ರಹಗಳು ಮತ್ತು ಹಗಲು ಹಾಗೂ ರಾತ್ರಿ ಸಮಯದಲ್ಲೂ ಸ್ಪಷ್ಟವಾಗಿ ನೋಡುವ ಸಾಮರ್ಥ್ಯವಿರುವ ರಾಡಾರ್‌ಸ್ಯಾಟ್ ಉಪಗ್ರಹವನ್ನು ಅನ್ನು ಬಳಸಿಕೊಂಡು, ಹೈದರಾಬಾದ್‌ನಲ್ಲಿರುವ ರಾಷ್ಟ್ರೀಯ ದೂರಸಂವೇದಿ ಕೇಂದ್ರವು ಮಹಾ ಕುಂಭಮೇಳದಲ್ಲಿನ ಬೃಹತ್ ಮೂಲಸೌಕರ್ಯಗಳ ರಚನೆಯನ್ನು ತೋರಿಸುವ ಚಿತ್ರಗಳ ಸರಣಿಯನ್ನು ಬಿಡುಗಡೆ ಮಾಡಿದೆ. ಮಹಾ ಕುಂಭ ಮೇಳದ ಪೂರ್ವಸಿದ್ಧತೆಯಿಂದ ಹಿಡಿದು ಮಹಾ ಕುಂಭಮೇಳ ಆಯೋಜನೆವರೆಗಿನ ಸರಣಿ ಚಿತ್ರಗಳು ಇದರಲ್ಲಿ ಸೇರಿವೆ ಎನ್ನುವುದು ವಿಶೇಷ.

ಈ ಕುರಿತು ಮಾತನಾಡಿರುವ ಎನ್‌ಆರ್‌ಎಸ್‌ಸಿಯ ನಿರ್ದೇಶಕರಾದ ಡಾ ಪ್ರಕಾಶ್ ಚೌಹಾಣ್, ರಾಡಾರ್ ಸ್ಯಾಟ್ ಉಪಗ್ರಹದ ಹೈ ರೆಸಲ್ಯೂಷನ್ ಕ್ಯಾಮರಾಗಳು ಮಹಾಕುಂಭ ಮೇಳದ ಸಂಪೂರ್ಣ ದೃಶ್ಯಗಳನ್ನು ಸೆರೆಹಿಡಿದಿದೆ ಎಂದು ಹೇಳಿದ್ದಾರೆ. ಟೆಂಟ್ ಸಿಟಿಯ ವಿವರಗಳ ಒಳನೋಟಗಳು ಮತ್ತು ಮೂಲಸೌಕರ್ಯ ರಚನೆಗಳು ಮತ್ತು ರಸ್ತೆಗಳ ವಿನ್ಯಾಸದ ಜೊತೆಗೆ, ಮಹಾ ಕುಂಭಮೇಳ 2025ಕ್ಕಾಗಿ ಸ್ಥಾಪಿಸಲಾದ ಸೇತುವೆಗಳ ಫೋಟೋಗಳು ಅತ್ಯಂತ ಸ್ಪಷ್ಟವಾಗಿವೆ.

ಇನ್ನು ಮಹಾ ಕುಂಭಮೇಳದಲ್ಲಿ ಸಂಭಾವ್ಯ ವಿಪತ್ತುಗಳು ಮತ್ತು ಕಾಲ್ತುಳಿತಗಳನ್ನು ತಗ್ಗಿಸಲು, ಉತ್ತರಪ್ರದೇಶದ ಆಡಳಿತವು ಇಸ್ರೋ ಕ್ಲಿಕ್ಕಿಸಿರುವ ಈ ಹೈರೆಸಲ್ಯೂಷನ್ ಫೋಟೋಗಳನ್ನು ಬಳಸಿಕೊಳ್ಳಲಿದೆ ಎನ್ನುವುದು ವಿಶೇಷ.

ಈ ಸುಧಾರಿತ ತಂತ್ರಜ್ಞಾನಗಳು ದೊಡ್ಡ ಪ್ರಮಾಣದ ಧಾರ್ಮಿಕ ಕೂಟಗಳನ್ನು ನಿರ್ವಹಿಸುವಲ್ಲಿ ಒಂದು ಮಾದರಿ ಬದಲಾವಣೆಯನ್ನು ಪ್ರತಿನಿಧಿಸುತ್ತವೆ. ತಂತ್ರಜ್ಞಾನ ಮತ್ತು ಸಂಪ್ರದಾಯವು ಹೇಗೆ ಒಟ್ಟಾಗಿ ಎಲ್ಲರಿಗೂ ಸ್ವಚ್ಛವಾದ, ಆರೋಗ್ಯಕರ ಭವಿಷ್ಯವನ್ನು ಸೃಷ್ಟಿಸುತ್ತದೆ ಎಂಬುದಕ್ಕೆ ಮಹಾ ಕುಂಭಮೇಳವು ಒಂದು ಉಜ್ವಲ ಉದಾಹರಣೆಯಾಗಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ಅದೇ ರೀತಿ ಪ್ರಯಾಗರಾಜ್‌ನ ಮಹಾ ಕುಂಭ ಮೇಳ ಪರಿಸರದಲ್ಲಿ ರಚಿಸಲಾದ ಹೊಸ ಶಿವಾಲಯ ಉದ್ಯಾನವನದ ರಚನೆಯನ್ನು ಕೂಡ ಬಾಹ್ಯಾಕಾಶದಿಂದ ವೀಕ್ಷಿಸಲಾಗಿದೆ. ಭಾರತದ ಭೂಪಟದ ರೂಪದಲ್ಲಿ ಮಾಡಿದ ಸುಂದರ ಭೂದೃಶ್ಯವನ್ನು ತುಂಬಾ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಗಂಗಾ, ಯಮುನಾ ಮತ್ತು ಪೌರಾಣಿಕ ಸರಸ್ವತಿ ನದಿಗಳು ಸಂಗಮಿಸುವ ಸ್ಥಳವಾದ ತ್ರಿವೇಣಿ ಸಂಗಮದಲ್ಲಿ ಆಚರಿಸಲಾಗುವ ಧಾರ್ಮಿಕ ಕಾರ್ಯಕ್ರಮಕ್ಕಾಗಿ ಉತ್ತರ ಪ್ರದೇಶದಲ್ಲಿ ಮಹಾಕುಂಭ ನಗರ ಎಂಬ ಹೊಸ ಜಿಲ್ಲೆಯನ್ನೇ ರಚಿಸಲಾಗಿದೆ. ಒಟ್ಟು 45 ದಿನಗಳ ಕಾಲ ನಡೆಯಲಿರುವ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಸುಮಾರು 40 ಕೋಟಿ ಜನರು ಭಾಗವಹಿಸುವ ನಿರೀಕ್ಷೆ ಇದೆ. ಇದುವರೆಗೂ ಸುಮಾರು 8 ಕೋಟಿ ಜನ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ.



ಕೇಂದ್ರ ಸಚಿವರಾದ ಸನ್ಮಾನ್ಯ
ಹೆಚ್.ಡಿ.ಕುಮಾರಸ್ವಾಮಿರವರಿಂದ
ಕೃಷ್ಣರಾಜನಗರ ಕ್ಷೇತ್ರದ ಮತದಾರ ಬಂಧುಗಳಿಗೆ
ಕೃತಜ್ಞತೆ ಸಭೆ ಹಾಗೂ
ಕೃಷ್ಣರಾಜನಗರ ಕ್ಷೇತ್ರದ ಜನತೆಯಿಂದ
ಅಭಿಮಾನದ
ಅಭಿನಂದನಾ ಸಮಾರಂಭ
ನೀವು ಬನ್ನಿ ನಿಮ್ಮವರನ್ನು ಕರೆತನ್ನಿ,
ಹರಸಿ ಆರ್ಶೀವದಿಸಿ, ಭೋಜನ ಸ್ವೀಕರಿಸಿ
24.01.2025, ಶುಕ್ರವಾರ
10:30 ಗಂಟೆಗೆ
ರೇಡಿಯೋ ಮೈದಾನ,
ಕೆ.ಆರ್.ನಗರ
ಸರ್ವರಿಗೂ ಸುಸ್ವಾಗತ
ಪ್ರಕಟಣೆ: ಶ್ರೀನಿವಾಸ್
ಅಧ್ಯಕ್ಷರು ಹಿಂದುಳಿದ ವರ್ಗ, ಜೆಡಿಎಸ್